# ಕನ್ನೀರಾಂಬೆಯ ಕಥೆ

## ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ, ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯ ಪೂರ್ಣವೂ ಆಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವಮುಕಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕರಿತು ಅಧ್ಯಯನ ಮಾಡುವ, ಸಂಶೊಧಿಸುವ ಮತ್ತು ಅದರ ಅಧ್ಯಯನದ ಫಲಿತಾಂಶಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗ್ಗೆಯನ್ನು ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡ ಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥೀಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ, ನಾಡಿನ ಕೋಟಿ ಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗುದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾ ಸಂಸ್ಥೆ ಇದು. ಕನ್ನಡಪ್ರಜ್ಞೆ ತನ್ನ ಸತ್ವ ಮತ್ತು ಸ್ವತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೆ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡಮಾನವ ವಿಶ್ವಮಾನವ ನಾಗಿ ಬೆಳೆಯಲು ಸಾಧನವಾಗಬೇಕು. ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವ ವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೬೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಕರ್ನಾಟಕದ ವೈವಿಧ್ಯ ಮುಖಿಯಾದ ಮೌಖಿಕ ಸಾಹಿತ್ಯ ಸಂಪತ್ತಿನಲ್ಲಿ ಜನಪದ ಸಾಹಿತ್ಯ ಅವಗಣಿಸಲಾಗದ ಅಪಾರ ಸೃಜನಶೀಲ ಹಾಗೂ ಸಮಾಜಶೀಲ ಹೊಳಹುಗಳನ್ನು ಒಳಗೊಂಡಿದೆ ಎಂಬುದು ಈಗಾಗಲೇ ನಿಸ್ಸಂದೇಹವಾಗಿ ಸಾಬೀತಾಗಿದೆ. ಶಿಷ್ಟ ಸಾಹಿತ್ಯದಷ್ಟೇ ಸಮೃದ್ಧಿ, ವೈಪುಲ್ಯ ಹಾಗೂ ವಿವಿಧತೆಗಳನ್ನು ಒಳಗಂಡಿರುವ ಈ ಸಾಹಿತ್ಯ ಇಂದು ಆಧುನಿಕ ಸಾಹಿತ್ಯ ಧಾರಣ ಮಾಡಬಹುದಾದ ಎಲ್ಲ ಬಗೆಯ ವಿಮರ್ಶಾ ಸಿದ್ಧಾಂತಗಳಿಗೆ ಇಂಬುಗೊಡುವ ನಿತ್ಯ ಹರಿದ್ವರ್ಣದ ಸಾಹಿತ್ಯವಾಗಿ ಪರಿಣಮಿಸಿದೆ. ಜನಪದರು ಮುಗ್ಧರು ನಿಜ. ಪುರಾಣ ಮತ್ತು ಆ ಪುರಾಣಗಳಲ್ಲಿ ಉಕ್ತರಾದ ದೇವಾನುದೇವತೆಗಳ ಸಾಹಸ ಮತ್ತು ಮಹಿಮೆಗಳನ್ನು ಮೈದುಂಬಿ ವಿವರಿಸುವ ಮತ್ತು ಅವುಗಳ ನಿರ್ದೇಶನದ ಮೂಲಕವಾಗಿಯೇ ತಮ್ಮ ಬದುಕನ್ನು ರೂಪಿಸಿಕೊಳ್ಳುವ ಮನೋಧರ್ಮ ಅವರದು. ಪರಲೋಕದ ಸೆಳೆತವುಳ್ಳ ಈ ಜನ ಅದೇ ಕಾಲಕ್ಕೆ ಇಹಲೋಕದ ಸೆಳೆತಗಳಿಂದ ಮತ್ತು ಅಲ್ಲಿನ ಜೀವನಮುಖಿಯಾದ ಆನಂದದಿಂದ ತಪ್ಪಿಸಿಕೊಳ್ಳಲು ಎಳೆಸಲಿಲ್ಲ. ಆದ್ದರಿಂದ ದೇವರ ನಾನಾ ಮುಖ ಮಹಿಮೆಗಳನ್ನು ತಮ್ಮ ಅಪ್ಪಟ ಸೃಜನಶೀಲ ಪ್ರತಿಭೆಯಿಂದ ಹೇಗೆ ಸಹಜವಾಗಿ, ಸಲೀಲವಾಗಿ, ಸತ್ವಪೂರ್ಣವಾಗಿ ವರ್ಣಿಸಿದ್ದಾರೆಯೋ ಹಾಗೆಯೇ ತಮ್ಮ ದಿನನಿತ್ಯದ ಜೀವನಕ್ಕೆ ಸಂಬಂಧಿಸಿದ ಐತಿಹಸಿಕ, ಸಾಮಾಜಿಕ ಸಂಗತಿಗಳ ಬಗೆಗೂ ಅಷ್ಟೇ ಒತ್ತನ್ನು ಮತ್ತು ಮೌಲಿಕತೆಯನ್ನು ನೀಡಿದ್ದಾರೆ ಎಂಬುದಕ್ಕೆ ಜನಪದ ಸಾಹಿತ್ಯದಲ್ಲಿ ದೊರಕುವ ಕಾವ್ಯಗಳು ಹಾಗೂ ಲಾವಣಿಗಳು ಸಾಕ್ಷಿ ನುಡಿಯುತ್ತವೆ. ತಮ್ಮನ್ನಾಳುವ ದೊರೆಗಳ ಬಗ್ಗೆ ಅವರ ಪ್ರಜಾಸೇವೆಯ ಬಗ್ಗೆ ಅವರು ಎಷ್ಟು ಕೃತಜ್ಞತೆಯಿಂದ ಮೈಮರೆತು ಹಾಡುತ್ತಾರೋ ಅಷ್ಟೇ ಮಟ್ಟಿಗೆ ತಮ್ಮ ದಿನನಿತ್ಯದ ಬದುಕನ್ನು ಹಸನುಗೊಳಿಸುವ ಕೆರೆ, ಕಾಲುವೆ, ರಸ್ತೆ, ದೇವಾಲಯ, ಮುಂತಾದವುಗಳನ್ನು ನಿರ್ಮಿಸಿದ ಹಾಗು ದೇಶಕ್ಕಾಗಿ ತ್ಯಾಗ ಮಾಡಿದ ಸಾಮಾನ್ಯ ಜೀವಿಗಳ ಯಶೋಗಾಥೆಯನ್ನೂ ಸಹ ಅಷ್ಟೇ ನಿಷ್ಠೆ ಯಿಂದ ಅವರು ಹಾಡುತ್ತಾರೆ. ಹೀಗಾಗಿ ಜನಪದ ಸಾಹಿತ್ಯದಲ್ಲಿ ಪುರಾಣಲೋ, ಇತಿಹಾಸ ಲೋಕಗಳು ವರ್ಣನೆ ಮತ್ತು ಉತ್ಪ್ರೇಕ್ಷೆಗಳ ಮೂಲಕ ಮೈದೋರುವಂತೆ ಸಾಮಾನ್ಯರ ಅಸಮಾನ ತ್ಯಾಗ, ಜನಸೇವೆ, ಸಮಾಜ ಕಾರ್ಯ ಮುಂತಾದ ಅಂಶಗಳು ಅಲ್ಲಿ ಕಾವ್ಯವಾಗಿ ಮೆರೆಯುತ್ತಿವೆ. ಜನಪದವೆಂಬುದು ಕಟ್ಟುಕತೆಯೆಂಬ ಮತ್ತು ಅದರಲ್ಲಿ ತಥ್ಯವೇನೂ ಇಲ್ಲವೆಂಬ ಚರಿತ್ರಕರರ ಸೀಮಿ ದೃಷ್ಟಿಯನ್ನು ಜನಪದ ಕಾವ್ಯಗಳ ಐತಿಹಾಸಿಕ ಮತ್ತು ಸಾಮಾಜಿಕ ಅಂಶಗಳ ಗಾಢತೆ ತಿದ್ದುತ್ತಲಿದೆ. ಶುದ್ಧ ಇತಿಹಾಸ ಗುರುತಿಸಲಾಗದ ಜನಜೀವನದ ಒಳಾಂಶಗಳ ಮಹತ್ವವನ್ನು ಜನಪದ ಸಾಹಿತ್ಯದ ಮೂಲಕ ಇಂದು ಗುರುತಿಸಲಾಗುತ್ತಿದೆ. ಇತಿಹಾಸ ಮೌನವಾದ ಮತ್ತು ಸೋತ ಸಂದರ್ಭಗಳ ಪಿಗ್ಗನ್ನು ತುಂಬಲು, ಅವುಗಳ ಬಿಟ್ಟುಹೋದ ನಿಜಾಂಶಗಳನ್ನು ಗುರುತು ಹಚ್ಚಲು ಸಾಮಾನ್ಯ ಜನತೆಯ ಸೃಜನಶೀಲ ಸಾಹಿತ್ಯ ನೆರವಾಗುತ್ತಿದೆ. ಜನಪದರ ಕಲ್ಪನೆಯ ಗರ್ಭದಲ್ಲಿ ಶುದ್ಧ ಇತಿಹಾಸದ ಅಂಶಗಳು ಮಗ್ಗವಾಡುತ್ತಿರುವ ಬಗೆಯನ್ನು ಇತ್ತೀಚಿನ ವಿಮರ್ಶೆ ತೋರಿಸಿಕೊಟ್ಟಿದೆ. ಆದ್ದರಿಂದ ಒಂದು ನಾಡಿನ ಮತ್ತು ಜನಾಂಗದ ಸಮಗ್ರ ಇತಿಹಾಸವನ್ನು ಸಂಪೂರ್ಣವಾಗಿ ಕಟ್ಟಿಕೊಡುವಲ್ಲಿ ಲಿಖಿತ ಇತಿಹಾಸದ ಜೊತೆಗೆ ಅಲಿಖಿತವಾದ ಮೌಖಿಕ ಇತಿಹಾಸವನ್ನು ಒಂದು ಮುಖ್ಯ ಆಕಾರವೆಂದು ಸಂಶೋಧಕರು ಪರಿಗಣಿಸುತ್ತಿದ್ದಾರೆ. ಆದ್ದರಿಂದ ಜನಪದ ಇತಿಹಾಸ ಕಥನಗಳು ಲಿಖಿತ ಇತಿಹಾಸಕ್ಕೆ ಹೊಸ ಬೆರಗನ್ನು, ಬೆಡಗನ್ನು ಮತ್ತು ತುಂಬುತನವನ್ನು ತಂದುಕೊಡುತ್ತಿವೆ. ಆದರೆ, ಇಂತಹ ಅಲಿಖಿತ ಐತಿಹಾಸಿಕ ಪರಂಪರೆಯನ್ನು ನಿಸ್ವಾರ್ಥವಾದ ಮತ್ತು ಸತ್ಯ ಶೋಧಕವಾದ ನೆಲೆಯಿಂದ ಮತ್ತಷ್ಟು ಸಂಗ್ರಹಿಸುವ ಅಗತ್ಯ ಹೆಚ್ಚಾಗಿದೆ.

ಮೇಲಿನ ಹಿನ್ನೆಲೆಯಲ್ಲಿ "ಕನ್ನೀರಾಂಬೆಯ ಕಥೆ" ಎಂಬ ಈ ಪುಟ್ಟ ಸಾಂಗತ್ಯ ಕೃತಿ ಒಂದು ಮಹತ್ವದ ಐತಿಹಾಸಿಕ ದಾಖಲೆಯಾಗಿದೆ. ಕರ್ನಾಟಕದಾದ್ಯಂತ ಹರಡಿಕೊಂಡಿರುವ ಜನೋಪಯೋಗಿಯಾದ ರಸ್ತೆ, ದೇವಸ್ಥಾನಗಳ ನಿರ್ಮಾಣ, ಸಾಲುಮರಗಳ ನೆಡುವಿಕೆ, ಕೆರೆ, ಕುಂಟೆ, ಬಾವಿ, ಕೊಳಗಳ ತೋಡಿಕೆ ಇವೆಲ್ಲ ಅಧಿಕಾರ ಸಂಪನ್ನ, ರಾಜ ಮಹರಾಜರುಗಳ ಜಕೊಡುಗೆಯಾಗಿರುವುದಕ್ಕಿಂತ ಹೆಚ್ಚಾಗಿ ಹಳ್ಳಿಯ ಸಾಮಂತರು, ಶ್ರೀಮಂತರು, ಉದಾರ ಹೃದಯಿಗಳಾದ ಜನಸಾಮಾನ್ಯರು ನೀಡಿದ ಕೊಡುಗೆಗಳಾಗಿವೆ. ತಮ್ಮ ಬದುಕಿಗೆ ಕೃತಕೃತ್ಯತೆಯನ್ನು ಕಲ್ಪಿಸಿಕೊಳ್ಳಲು, ತಮ್ಮ ಸುತ್ತಮುತ್ತಲಿನ ಜನ ದೈನಂದಿನ ಮುಖ್ಯ ಅಗತ್ಯಗಳಿಂದ ವಂಚಿತರಾಗದಿರುವಂತೆ ನೋಡಿಕೊಳ್ಳಲು ಈ ಗ್ರಾಮೀಣ ಔದಾರ್ಯಶೀಲ ಶ್ರೀಮಂತರು ಸತತವಾಗಿ ಶ್ರಮಿಸಿದ್ದಾರೆ. ತಮ್ಮ ಗ್ರಾಮಸೇವೆ ಮತ್ತು ಜನಸೇವೆಗಳು ದೇವಸೇವೆಗಿಂತ ಮಿಗಿಲೆಂಬ ಶ್ರದ್ಧಾನ್ವಿತ ನಂಬಿಕೆ ಅವರದಾಗಿದೆ. ಈ ಕಾರಣದಿಂದ ರಾಜರ ಆಸ್ಥಾನದ ಆಶೀರ್ವಾದವನ್ನು ಪಡೆದ ಶ್ರೀಮಂತರ ಜೊತೆಗೆ ಹಳ್ಳಿ ಹಳ್ಳಿಗಳ ಹಣವಂತ ಜನ ಕೆರೆ, ಕಟ್ಟೆಗಳ ನಿರ್ಮಾಣದ ಜಲಸೇವೆಗೆ ಕಂಕಣಕಟ್ಟಿ ದುಡಿದು ಸಾಮಾನ್ಯರ ಬದುಕನ್ನು ಹಸನುಮಾಡಿದ ಸರಳವಾದರೂ ರೋಚಕವಾದ ಕಥೆಗಳು ನಮ್ಮ ಸಾಗಿತ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ. "ಕನ್ನೀರಾಂಬೆಯ ಕಥೆ" ಇಂತಹ ಒಂದು ಇತಿಹಾಸ ಮತ್ತು ಜನಪದಗಳ ಸಂಗಮದಿಂದ ಹುಟ್ಟಿದ

ಕಾವ್ಯ. ಮದಗದ ಕೆರೆ, ಸೂಳೆಕೆರೆ, ಹೊನ್ನಮ್ಮನ ಕೆರೆ ಮುಂತಾದ ಕೆರೆಗಳ ನಿರ್ಮಾನದ ಹಿನ್ನೆಲೆಯ ಸ್ತ್ರೀಯರ ತ್ಯಾಗಮಯವಾದ ಅನನ್ಯ ಸಾಹಿತ್ಯ ನಮ್ಮಲ್ಲಿ ಹೇರಳವಾಗಿದೆ. ವಿಜಯನಗರದ ಕಾಲದ ಸಾಂಸ್ಕೃತಿಕ ಮತ್ತು ಸಾಮಾಜಿಕ ಜೀವನದ ಅಂಶಗಳ ಹೆಣಿಗೆಯ ಜೊತೆಗೆ ಸಾರ್ವಕಾಲಿಕವಾದ ಲೋಕೋಪಕಾರಿಯಾದ ಜೀವತ್ಯಾಗದ ಕಥೆ ಇಲ್ಲಿ ಮೈದುಂಬಿಕೊಂಡಿದೆ. ಮುದ್ದ ಪ್ಪನಾಯಕ ಕಟ್ಟಿಸಿದ ಕೆರೆಯಲ್ಲಿ ನೀರು ತುಂಬದಿದ್ದಾಗ ಏಳು ವರ್ಷದ ಬ್ರಾಹ್ಮಣ ಕನ್ಯೆಯನ್ನು ಆಹುತಿಯಗಿ ನೀಡಿದ ಕರುಳು ಕರಗುವ ಕಥೆ ಇಲ್ಲಿದೆ. ಕೆರೆಯ ನಿರ್ಮಾತೃವಿನ ನಿಸ್ವಾರ್ಥವಾದ ತ್ಯಾಗ ಮನೋಭಾವ, ಕೆರೆ ಕಟ್ಟಿಸಿಯೂ ನೀರು ತುಂಬದಿದ್ದಾಗ ಆತ ಪಡುವ ಯಾತನೆ, ಚಿಕ್ಕ ವಯಸ್ಸಿನ ಕನ್ಯೆಯೊಬ್ಬಳನ್ನು ಬಲಿ ಕೊಡಬೇಕೆಂಬುದರ ಪ್ರಸ್ತಾವ, ಆ ಕನ್ಯೆಯ ಕೌಟುಂಬಿಕ ಸಂದರ್ಭಗಳು, ವೈಯಕ್ತಿಕವಾದ ಸಾಂಸಾರಿಕ ಮೋಹವನ್ನು ಗೆದ್ದು ಸಮಾಜ ಬದುಕಲಿ ಎಂಬ ದಿವ್ಯ ಆಕಾಂಕ್ಷೆಯಿಂದ ವೈಯಕ್ತಿಕ ಬದುಕನ್ನು ಬಲಿಕೊಡುವ ಬಗೆ ಈ ಎಲ್ಲ ಆರ್ದ್ರವಾದ ಕರುಣಪೂರ್ಣವಾದ ಅಭಿವ್ಯಕ್ತಿಯನ್ನು ಇಲ್ಲಿ ಪಡೆದಿವೆ. "ತ್ಯಾಗವೇ ಬದುಕು, ಸ್ವಾರ್ಥವೇ ಸಾವು" ಎಂಬುದನ್ನು ಪ್ರಸ್ತುತಪಡಿಸಿ ಜನಮಾನಸದಲ್ಲಿ ತ್ಯಾಗ ಗುಣವನ್ನು ಉದ್ದೀಪಿಸುವ ಮತ್ತು ಗ್ರಾಮ ಸೇವೆ, ಸಮಾಜ ಸೇವೆಯೇ ದೈವ ಸೇವೆ ಎಂಬ ಆಚಲವಾದ ನಂಬಿಕೆ ಇಲ್ಲಿ ಹೃದ್ಯವಾದ ಅಭಿವ್ಯಕ್ತಿಯನ್ನು ಪಡೆದಿದೆ. ಜನಪ್ರಿಯವದ ಸಾಂಗತ್ಯದ ಛಂದಸ್ಸಿನಲ್ಲಿ ಮೂಡಿಬಂದಿರುವ ಈ ಚಿಕ್ಕಕಾವ್ಯ ತನ್ನ ರಸಾರ್ದ್ರತೆಯಿಂದ ಮೌಲಿಕ ಜೀವನ ಪ್ರತಿಪಾದನೆಯಿಂದ ಹಾಗೂ ಭಾಷೆಯ ಸಹಜ ಸೊಗಡಿನಿಂದ ಕಂಗೊಳಿಸುತ್ತದೆ. ಇದೇ ಆಶಯವನ್ನುಳ್ಳ, ಈಗಾಗಲೇ ಪ್ರಕಟವಾಗಿರುವ ಇತರ ಕಾವ್ಯಗಳ ಜೊತೆಗೆ ತೌಲನಿಕವಾಗಿ ಅಭ್ಯಾಸ ಮಾಡಲು ಈ ಕೃತಿ ಸಹಾಯಕವಾಗಿದೆ. ಇಂತಹದೊಂದು ಕೃತಿಯನ್ನು ಸಂಗ್ರಹಿಸಿ ಸಂಪಾದಿಸಿಕೊಟ್ಟ ಪ್ರೊ. ಎಂ. ಧ್ರುವನಾರಾಯಣ ಅವರ ಪರಿಶ್ರಮವನ್ನು ಪ್ರೀತಿಯಿಂದ ನೆನೆಯುತ್ತೇನೆ.

**ಡಾ. ಎಚ್.ಜೆ. ಲಕ್ಕಪ್ಪಗೌಡ**
ಕುಲಪತಿಯವರು

# ಪ್ರಸ್ತಾವನೆ

ಭಾರತ ವ್ಯವಸಾಯ ಪ್ರಧಾನ ದೇಶ. ಪ್ರಜೆಗಳ ಕಲ್ಯಾಣ ವ್ಯವಸಾಯದಿಂದಲೇ ಆಗಿರುವುದ ರಿಂದ ಅದಕ್ಕೆ ಆದ್ಯತೆ. ಆದರೆ ಈ ದೇಶದಲ್ಲಿ ಪ್ರತಿ ವರ್ಷವು ಒಂದಿಲ್ಲೊಂದು ಭಾಗವು ಅನಾವೃಷ್ಟಿ, ಅಕಾಲ ವೃಷ್ಟಿ ಹಾಗೂ ಅನಿಶ್ಚಿತ ವೃಷ್ಟಿಗೆ ಬಲಿಯಾಗುತ್ತದೆ. ರಾಮಾಯಣ ಮತ್ತು ಮಹಾಭಾರತಗಳ ಕಾಲದಲ್ಲಿ ಇದರ ಬಗೆಗೆ ಉಲ್ಲೇಖನಗಳಿವೆ. ಅವುಗಳ ನಿವಾರಣೆಗಾಗಿ ಅರಸರು ಹಾಗೂ ಅಧಿಕಾರಿಗಳು ಕೈಗೆತ್ತಿಕೊಂಡ ಕ್ರಮಗಳ ಬಗೆಗೂ ಉಲ್ಲೇಖನಗಳಿವೆ. ಈ ಬಗೆಯ ನಿವಾರಣಾ ಕ್ರಮಗಳಲ್ಲಿ ಪ್ರಮುಖವಾದದ್ದು ನೀರಾವರಿ. ಆದುದರಿಂದ ನಿರಾವರಿ ಕಾರ್ಯಕ್ರಮಗಳಿಗೆ ರಾಜರೂ ಮತ್ತು ಪ್ರಜೆಗಳು ಹೆಚ್ಚು ಪ್ರಧಾನ್ಯತೆಯನ್ನು ನೀಡುತ್ತಾ ಬಂದಿದ್ದಾರೆ.

ನಮ್ಮ ದೇಶದಲ್ಲಿ ಅದರಲ್ಲಿಯೂ ದಕ್ಷಿಣ ಭಾರತದಲ್ಲಿಯ ಭೌಗೋಳಿಕ ಪರಿಸ್ಥಿತಿಯಿಂದ ಮತ್ತು ಮಳೆಯ ಮೇಲೆಯೇ ಬೇಸಾಯ ಆಧಾರವಾಗಿರುವುದರಿಂದ ಇಲ್ಲಿನ ನೀರಾವರಿ ಬೇಸಾಯ ಕ್ರಮಗಳು ಮುರು ತೆರನಾಗಿವೆ. ಕೆರೆಯ ನೀರಾವರಿ ಕ್ರಮ, ಬಾವಿ ಬೇಸಾಯಕ್ರಮ ನದಿ ನೀರಾವರಿ ಹೀಗೆ ತಿಳಿಸಿದ ಮೂರು ವಿಧಾನಗಳು ನಮ್ಮ ದೇಶದಲ್ಲಿ ಅನಾದಿಕಾಲದಿಂದಲೂ ಬಳಕೆಯಲ್ಲಿವೆ. ಎಂ. ಸತ್ಯಶ್ರವ ಎಂಬುವರು ತಮ್ಮ ಭಾರತದ ನೀರಾವರಿಯ ವ್ಯವಸ್ಥೆ ಎಂಬ ಗ್ರಂಥದಲ್ಲಿ ಅಥರ್ವವೇದದಲ್ಲಿ ನದಿಯಿಂದ ಕಾಲವೆಗಳನ್ನು ತೋಡಿ ನೀರನ್ನು ಬೇಕಾದ ಸ್ಥಳಕ್ಕೆ ಹರಿಸಿಕೊಳ್ಳುತ್ತಿದ್ದುದನ್ನು ಪ್ರಸ್ತಾಪಿಸಿದ್ದಾರೆ. ಕೌಟಿಲ್ಯನ ಅರ್ಥಶಾಸ್ತ್ರವೂ ನೀರಾವರಿ ಕಾರ್ಯಗಳಿಗೆ ಪ್ರಾಮುಖ್ಯತೆಯನ್ನು ನೀಡಿದೆ. ಮೌರ್ಯಚಂದ್ರಗುಪ್ತ ಗಿರಿನಾರ (ಗುಜರಾತಿ)ನ ಬಳಿ "ಸುದರ್ಶನ"ವೆಂಬ ಕೆರೆಯನ್ನು ನಿರ್ಮಿಸಿದ. ಅದು ಇಂದಿಗೂ ಕಾರ್ಯ ಮಾಡುತ್ತಲಿದೆ.

ಚರಿತ್ರೆಯ ಮಧ್ಯಯುಗದಲ್ಲಿ ಕರ್ನಾಟಕದವರೇ ಆದ ಬಾದಾಮಿಯ ಚಾಲುಕ್ಯರು ರಾಷ್ಟ್ರಕೂಟರು, ಕಲ್ಯಾಣಿ ಚಾಳುಕ್ಯರು, ಹೊಯ್ಸಳರು ನೀರಾವರಿ ಬೇಸಾಯಕ್ಕೆ ಆದ್ಯತೆ ನೀಡಿ ಕೆರೆ, ಬಾವಿ ಹಾಗೂ ಆಣೆಕಟ್ಟುಗಳನ್ನು ನಿರ್ಮಿಸಿದ್ದಾರೆ. ಹೀಗಾಗಿ ದಕ್ಷಿಣ ಭಾರತವು ಅತಿ ಪುರಾತನ ಕಾಲದಿಂದಲೂ ನೀರಾವರಿ ಕ್ರಮಗಳನ್ನು ಅನುಸರಿಸುತ್ತಲೇ ಬಂದಿದೆ.

ವಿಜಯನಗರದ ಅರಸರಂತೂ ಈ ನೀರಾವರಿ ಕಾರ್ಯಗಳಿಗೆ ವಿಶೇಷ ಪ್ರೋತ್ಸಾಹ ನೀಡಿದರು. ಇದಕ್ಕೆ ಅನೇಕ ಉದಾಹರಣೆಗಳಿವೆ. ನಮ್ಮವರೇ ಆದ ಸಿ.ಟಿ.ಎಮ್. ಕೊಟ್ರಯ್ಯ ಅವರು "ವಿಜಯನಗರ ಸಾಮ್ರಾಜ್ಯದಲ್ಲಿಯ ನೀರಾವರಿ ಪದ್ಧತಿಗಳು" ಎಂಬ ಗ್ರಂಥವನ್ನೇ ಪ್ರಕಟಿಸಿದ್ದಾರೆ. "ಕರ್ನಾಟಕದಲ್ಲಿಯು ಕೆರೆಗಳು" ಎಂಬ ಒಂದು ಪುಸ್ತಕವನ್ನು ಪ್ರಕಟಿಸಲಾಗಿದೆ. ಹೀಗೆ ವಿಜಯನಗರದ ಅರಸರ ಕಲದಲ್ಲಿ, ಅರಸರೂ, ಅರಸಿಯರೂ, ಅಧಿಕರಿಗಳು, ದೇವಾಲಯಗಳೂ, ಮಠದವರೂ ಜನಸಾಮಾನ್ಯರೂ ಈ ಬಗೆಯ ಕಾರ್ಯಗಳನ್ನು ಕೈಗೆತ್ತಿ ಕೊಂಡ ಅನೇಕ ದಾಖಲೆಗಳಿವೆ. ಅದರಂತೆಯೇ ಶಿಲಾಶಾಸನಗಳು ಗ್ರಂಥಗಳು, ಸಾಹಿತ್ಯ ಜನಪದ ಲಾವಣಿಗಳೂ ದೊರೆಯುತ್ತವೆ. ನನಗೆ "ಕನ್ನೀರಮ್ಮನ ಕಥೆ"ಯ ಒಂದು ಹಸ್ತಪ್ರತಿ ದೊರೆತಿದ್ದು. ಅದು ಹೊಸಪೇಟೆ ತಾಲೂಕಿನ ಧಣಾಯಕನ ಕೆರೆಯನ್ನು ನಿರ್ಮಿಸಿದ್ದ, ಮುದ್ದಣ್ಣ ಧಣನಾಯಕನಿಗೆ ಸೇರಿದ್ದು ಎಂದು ಹೇಳಲಾಗಿದೆ. ಈ ಹಳ್ಳಿಯಲ್ಲಿಯ ಒಂದು ಉತ್ಸವದಲ್ಲಿ ಅಲ್ಲಿನ ಹೆಂಗಳಿಯರು ಇಂದಿಗೂ ಈ ಪದ್ಯವನ್ನು ಹಾಡುತ್ತಾರೆ. ಇದರಲ್ಲಿ ಅವನೇ ಕಟ್ಟಿದನೆಂದು ಹೇಳಲಾದ ಕೆರೆ ಮತ್ತು ಅವನ ಜೀವನ ಚರಿತ್ರೆಯನ್ನು ಕಾಣಬಹುದು.

ಈ ಕನ್ನೀರಮ್ಮನ ಕಥೆಯಲ್ಲಿ ಬರುವ ಬಲಿದಾನದ ಬಗೆಗೆ, ಅದರಲ್ಲಿಯೂ ವಿಜಯ ನಗರದ ಆಡಳಿತ ಅವಧಿಯಲ್ಲಿದ್ದ ಸಂಪ್ರದಾಯಗಳ ಬಗ್ಗೆ ದೊರೆತ ವಿವರಗಳನ್ನು ಮನ್ಯ ಸಿ.ಟಿ.ಎಮ್. ಕೊಟ್ರಯ್ಯನವರು ತಮ್ಮ ಗ್ರಂಥದಲ್ಲಿ ಆಧಾರಗಳಿಂದ ಉದಾಹರಿಸಿದ್ದಾರೆ. ಅವರ ಗ್ರಂಥ ಹಾಗೂ ಇತರ ಮೂಲಗಳಿಂದ ಬಲಿದಾನ, ಆಹುತಿ, ಕೆರೆಗಳ ನಿರ್ಮಾಣಕ್ಕೆ ಸಂಬಂಧಿಸಿದವನ್ನು ವಾಚಕರು ಗಮನಿಸಬೇಕೆಂಬ ಉದ್ದೇಶದಿಂದ ಪ್ರಸ್ತಾಪಿಸಿರುವೆ. ಈ ದಿಶೆಯಲ್ಲಿ ಮುದ್ದಣ್ಣ ಧಣನಾಯಕನಿಗೆ ಸಂಬಂಧಿಸಿದವನ್ನು ಮಾತ್ರ ಪ್ರಸ್ತಾಪಿಸಿರುವೆ.

ಪರಂಪರೆಯ ಪ್ರಕಾರದ ಹೇಳಿಕೆಯಂತೆ, ವಿಜಯನಗರದ ಕೃಷ್ಣ ದೇವರಾಯನ ಕಾಲದಲ್ಲಿ ಮುದ್ದಣ್ಣ ದಣ್ಣಾಯಕ ಅಥವಾ ದಂಢನಾಯಕ ನಿದ್ದು ಅವನೇ ವಿಜಯನಗದ ಪಟ್ಟಣದ ಸುತ್ತಮುತ್ತಲಿನ ಅನೇಕ ನೀರಾವರಿ ಕಾರ್ಯಗಳನ್ನು ನಿರ್ಮಿಸಿದನಂತೆ. ಈ ಮುದ್ದಣ್ಣನು ಮೊದಲು ದನಕಾಯುವ ಬಾಲಕನಾಗಿ ಬಿದರಹಳ್ಳಿಯ ಜಕ್ಕಪ್ಪಾಚಾರ್ಯರ ಮನೆಯಲ್ಲಿ ಬೆಳೆದು ಬಂದಂತೆ ಈ ಸಾಂಗತ್ಯದಲ್ಲಿ ಹೇಳಲಾಗಿದೆ. ಮುಂದೆ ಇವನು ಮುದ್ದರಾಜನಾಗಿ ಕೆರೆ, ಆಣೆಕಟ್ಟುಗಳನ್ನು ನಿರ್ಮಿಸುವ ತಾಂತ್ರಿಕ ಕುಶಲತೆಯನ್ನು ಪಡೆದು ಮಹಾಜಲ ತಂತ್ರಜ್ಞನಾಗಿ ಮೆರೆದ. ಹೊಸಪೇಟೆಯ ಬಳಿ ಇರುವ ರಾಯರಕೆರೆ, ಅಲ್ಲಿಂದ ಮುಂದೆ ಹೋದರೆ ಸಿಗುವ ಧಣ್ಣಾಯಕನ ಕೆರೆ, ಹಡಗಲಿ ಬಳಿ ಇರುವ ಮೊದಲಗಟ್ಟೆ, ಈಗ ತುಂಗಭದ್ರಾ ಜಲಾಶರಯದಲ್ಲಿ ಮುಳುಗಿ ಹೋದ ವಲ್ಲಭಾಪುರದ ಆಣೆಕಟ್ಟು, ಗೌರಿಪು, ನಾರಾಯಣ ದೇವರ ಕೆರೆ, ಹಂಪನಕಟ್ಟೆಯ ಕೆರೆಗಳನ್ನು ಮತ್ತು ಇತರ ಆಣೆಕಟ್ಟುಗಳನ್ನು ಇವನೇ ನಿರ್ಮಿಸಿದನೆಂದೇ ಹೇಳಾಗಿದೆ. ಈ ಪರಂಪರಾನುಗತ ಹೇಳಿಕೆಯಲ್ಲದೆ, ಹೊಸಪೇಟೆಯ ಬಳಿಯಲ್ಲಿರುವ ಮುದ್ದಾಪುರ, ಮುದ್ಲಾಪುರದ ಹೆಸರಿನಹಳ್ಳಿಗಳಿಂದ, ಮುದ್ದಣ್ಣನೆಂಬ ಓರ್ವ ಅಧಿಕಾರಿ ಇದ್ದನೆಂದು ಧಾರಾಳವಾಗಿ ಹೇಳಬಹುದು. ಅವನು ಜಲ ಪ್ರತಿಬಂಧನ ಕಾರ್ಯಗಳಲ್ಲಿ ನುರಿತವನೂ ಇದ್ದಿರಬೇಕೆಂದೂ ಹೇಳಲು ಅಪಾರ ಅವಕಾಶವಿದೆ.

ಅಂದಿನ ಕಾಲದಲ್ಲಿ ಕೈಗೆತ್ತಿಕೊಂಡ ನೀರಾವರಿ ಕಾರ್ಯಗಳ ಅಂಗವಾಗಿ ಕೆರೆ, ಬಾವಿ, ಕೋಡಿ, ಮದಗ, ತುಂಬುಗಳು ಆಹುತಿ ಬೇಡಿದ ಬಗೆಗೆ ಅನೇಕ ಶಿಲಾಶಾಸನಗಳಲ್ಲಿ ದಾಖಲಿಸಲಾಗಿದೆ. ಅದರೆ ಹೆಚ್ಚಿನ ವಿವರಗಳನ್ನು ನೀಡದೆ ಕೆಲವನ್ನು ಇಲ್ಲಿ ಉದಾಹರಿಸುವೆ. ರಾಯರ ಕೆರೆ ನಿಲ್ಲದೆ ಹೋದಾಗ ಆಹುತಿಯನ್ನು ನೀಡಲಾಯಿತು. ಧಣಾಯಕನ ಕೆರೆಗೆ ಸಂಬಂಧಿಸಿದಂತೆ ಈ ಸಾಂಗತ್ಯವೇ ವಿವರಿಸುತ್ತದೆ. ಬಳ್ಳಾರಿ ಜಿಲ್ಲೆಯ ಹನ್ಸಿಕೆರೆಯ ಏರಿಯ ಬಳಿಯಲ್ಲಿರುವ ಕನ್ಯಾವೀರಮ್ಮನ ವಿಗ್ರಹ ಇದಕ್ಕೆ ಜೀವಂತ ಉದಾಹರಣೆಯಾಗಿದೆ. ಕ್ಲಿನಕೇರಿ ಮಲ್ಲನಗೌಡರ ಮಗಳಾದ ಭಾಗೀರಥಿ ಕನ್ಯೆಯನ್ನು ಬಲಿ ನೀಡಿದ ಉದಾಹರಣೆ ಇದೆ. ಹಂಪಿಯಲ್ಲಿಯೇ ಇರುವ ಸಾರ್ವಜನಿಕ ಸ್ನಾನಗೃಹದ ತಳದಲ್ಲಿ ಬಲಿನೀಡಿದವರ ಎಲುಬುಗಳು ದೊರೆತಿವೆ. ಇದನ್ನು ಅಲೆಕ್ಸಾಂಡರ್ ಎಂಬುವರು ತಮ್ಮ ೧೯೦ಳರ ಒಂದು ವರದಿಯಲ್ಲಿ ಹೇಳಿದ್ದಾರೆ. ಪುಂಗನೂರು ಮದನಪಲ್ಲಿ ತಾಲೂಕಿನಲ್ಲಿದೆ. ಅಲ್ಲಿಯೆ ಕೆರೆಗೆ ಪುಂಗಮ್ಮನನ್ನು ಬಲಿಕೊಟ್ಟಿದ್ದು ವೆಲ್ಲೂರಿನ ಗೆಜಿಟಿಯರಲ್ಲಿ ನೋಡಬಹುದು.

ರಾಯಲ ಚೆರುವು ಎಂಬ ಹಳ್ಳಿಯ ಕೆರೆಗೆ ಕೃಷ್ಣದೇವರಾಯನು ತನ್ನ ಒಬ್ಬ ಮಗಳನ್ನೇ ನೀಡಿದ್ದನೆಂಬ ಕಥೆ ಪ್ರಚಾರದಲ್ಲಿದೆ. ಈ ಎಲ್ಲಾ ಉದಾಹರಣೆಗಳಿಂದ ನಾವು ಅರಿಯಬೇಕಾದ ವಿಷಯ ಎಂದರೆ, ಅಂದಿನ ಸಂಪ್ರದಾಯದಂತೆ ಕೆರೆ, ಕೋಡಿ, ಆಣೆಕಟ್ಟುಗಳಿಗೆ ಮಾನವರ ಮತ್ತು ಪ್ರಾಣಿಗಳ ಬಲಿದಾನ ನೀಡುವ ಪದ್ಧತಿ ಚಾರಿಯಲ್ಲಿತ್ತು. ಈ ಒಂದು ಹಿನ್ನೆಲೆಯಲ್ಲಿ ವಾಚಕರ ಅನುಕೂಲಕ್ಕೆಂದೇ

ಕನ್ನೀರಮ್ಮನ ಕಥೆಯನ್ನು ಸ್ಥೂಲವಾಗಿ ವಿವರಿಸಿ, ಮುಂದೆ ಅದರ ಪಾಠವನ್ನು ಮುದ್ರಿಸಲಾಗಿದೆ. ಇದು ನನಗೆ ದೊರೆತ ೧೯೩೦ರ ಒಂದು ಹಸ್ತಪ್ರತಿಯ ನೆರಳಚ್ಚೇ ಎಂದು ತಿಳಿಯಬೇಕು. ಸಹೃದಯರು ಅದನ್ನು ಓದಿ ಆನಂದಿಸುವರೆಂದೇ ನಂಬಿರುವೆ.

ಈ ಬರಹಕ್ಕೆ ಸಂಬಂಧಿಸಿದಂತೆ ಬಿದರಹಳ್ಳಿ ಗ್ರಾಮದ ಪೂರ್ವಚರಿತ್ರೆ ಹಾಗೂ ಢಣಾಕಮುದ್ದನ ಬಗೆಗೆ ಅರಿಯುವ ಉದ್ದೇಶದಿಂದ ಅದರ ಹಲವಾರು ವಿವರಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿದ್ದು ಅದನ್ನು ಸ್ಥೂಲವಾಗಿ ಇಲ್ಲಿ ವಿವರಿಸಲಾಗಿದೆ. ಈ ಸಾಂಗತ್ಯದಲ್ಲಿ ಹೇಳಿದಂತೆ ಮುದ್ದನು, ಈ ಬಿದರಹಳ್ಳಿ ನಿವಾಸಿಗಳಾದ ಜಕ್ಕಪ್ಪಾಚಾರ್ಯರ ಮನೆಯಲ್ಲಿ ಬೆಳೆದವನು. ಬಿದರಹಳ್ಳಿ ಗ್ರಾಮಕ್ಕೆ ಅಪರ ಇತಿಹಾಸವಿದೆ. ಒಂದು ದಾಖಲೆಯ ಹೇಳಿಕೆಯಂತೆ ಶ್ರೀ ಹಂಪಿ ವಿರೂಪಾಕ್ಷ ದೇವಸ್ಥಾನದ ಮಹಾದ್ವಾರವನ್ನು ಕಟ್ಟಿದವರೇ ಜಕ್ಕಪ್ಪಾಚಾರ್ಯರಂತೆ. ಈ ಮಹಾಶಿಲ್ಪಿ ಬದರಹಳ್ಳಿಯ ತುಂಗಾತೀರದಲ್ಲಿ ಅನುಷ್ಠಾನ ಮಾಡಿದ್ದು  ಅವರ ಆರಾಧ್ಯ ದೇವತೆ, ಪಂಚಲೋಹದ ಮಹಾಲಿಂಗೇಶ್ವರ ಮೂರ್ತಿ ಇಂದಿಗೂ ವಿಠಲಾಪುರದಲ್ಲಿದೆ ಎಂದೇ ಹೇಳುತ್ತಾರೆ. ಜಕ್ಕಪ್ಪಯ್ಯನವರ ಅಳಿ ಯಂದಿರ ಮನೆ ವಿಠಲಾಪುರದಲ್ಲಿದೆ. ಪ್ರತಿವರ್ಷವೂ ಜಕ್ಕಪ್ಪನವರ ಆರಾಧನೆ ನಡೆಸುತ್ತಾರೆ. ಈ ಆರಾಧನೆ ಫಲಪೂಜಾ ಹುಣ್ಣಿಮೆ ದಿನ ನಡೆಯುತ್ತದೆ. ಅಂದು ಅನ್ನ ಸಂತರ್ಪಣೆ ಕೂಡಾ ಜರಗುತ್ತದೆ. ಈ ವಂಶಸ್ಥರು ಇಂದೂ ಇದ್ದಾರೆ ಎಂದೇ ಬಲ್ಲ ಮೂಲ ಗಳಿಂದ ತಿಳಿದುಬರುತ್ತದೆ.

ಆದರೆ “ಅಪ್ರಶಿದ್ಧಗ್ರಾಮದ ಸುಪ್ರಸಿದ್ಧ ನದೀತೀರ” ಎಂಬಗಾದೆ ಮಾತಿನಂತೆ ಈ ಬಿದರಹಳ್ಳಿಯ ಪರಿಸ್ಥಿತಿ. ಈ ಗ್ರಾಮಕ್ಕೆ ಹಿಂದೆ “ವೇಣಪುರಿ” ಎಂದೇ ಕರೆಯುತ್ತಿದ್ದರು. ಸ್ಕಂದಪುರಾಣ, ಶ್ರೀ ರೇಣಕಾಂಬೆ ಮಹಾತ್ಮೆ, ಹಾಗೂ ತೀರ್ಥಪ್ರಬಂಧಗಳಲ್ಲಿ ಈ ಊರನ್ನು ಪ್ರಸ್ತಾಪಿಸಲಾಗಿದೆ.

ಶ್ರೀ ಶ್ರೀ ವಾದಿರಾಜತೀರ್ಥರು ತೀರ್ಥಸಂಚಾರ ಮಾಡುತ್ತಾ ಈ ಊರಿಗೆ ಬಂದಿದ್ದು, ಕಾಶೀಬದರಿಗಳಿಗೆ ಹೋಗದೇ ಇದ್ದರೂ ಯಾವ ಪ್ರಯಾಸವಿಲ್ಲದೇ ಈ “ವೇಣಪುರಿಗೆ” ಹೋಗಿ ಸಕಲ ಸಿದ್ಧಿಗಳನ್ನು ಪಡೆಯಬಹುದು ಎಂದಿದ್ದಾರೆ.

*ವಾರಣಶ್ಯಾಂ ಖಲುವೇಣಪುರಿ |*
*ವಿಶ್ವೇಶರಾಜೋಖಲು ಸೋಮನಾಥಾಃ ||*
*ಗಂಗೇವ ಸಾಕ್ಷಾತ್ ವರ ತುಂಗಭದ್ರಃ |*
*ಮುಕ್ತಿ ಪ್ರದೋಯಂಖಿಲು ತೀರ್ಥರಾಜಾಃ ||*

ಈಚಿನ ದಿನಗಳಲ್ಲಿ ಶ್ರೀ ಬ್ರಹ್ಮಾನಂದ ಮಹಾರಾಜರು ಹಾಗೂ ಶ್ರೀ ಸಚ್ಚಿದಾನಂದ ಸರಸ್ವತಿಗಳು ಇಲ್ಲಿಯೇ ಸಾಧನೆ ಮಾಡಿ ಜಲಸಮಾಧಿ ಹೊಂದಿದರು. ಶ್ರೀ ಗೋದಾವಲೇಕರ, ಶ್ರೀ ಬ್ರಹ್ಮಚೈತನ್ಯ ಮಹಾರಾಜರ ಆದೇಶದಂತೆ ಶ್ರೀ ಬ್ರಹ್ಮಾನಂದರು, ಈ ಸ್ಥಳದಲ್ಲಿ “ಶ್ರೀ ರಾಮನಾಮತೇರಾಕೋಟಿ” ಯಜ್ಞಮಾಡಿ ಪೂರೈಸಿದರು. ಇಂದು ಬಿದರಹಳ್ಳಿಯಲ್ಲಿ ಶ್ರೀವೇಣಿಗೋಪಾಲಸ್ವಾಮಿಯ ಗುಡಿಯಲ್ಲದೆ, ಸ್ಕಂದ ಪುರಾಣದಲ್ಲಿ ವಿವರಿಸಿದ ಹಲವಾರು ಶಿಥಿಲಗೊಂಡ ದೇವಸ್ಥಾನಗಳನ್ನು ಕಾಣಬಹುದು : ೧) ಶ್ರೀ ರೇಣಕದೇವಿ ದೇವಸ್ಥಾನ (ಪರಶು ರಾಮನ ತಪಸ್ಸಿನ) ೨) ಅಶ್ವಥ್ ನಾರಾಯಣ  ದೇವಸ್ಥಾನ (ಅಂಬರಿಷನತಪ್ಪಸ್ಸಿನ) ೩) ಶ್ರೀ ಮಲ್ಲಿಕಾರ್ಜುನ ದೇವಸ್ಥಾನ (ಅರ್ಜುನೇಶ್ವರನ ತಪಸ್ಸಿನ) ೪) ಶ್ರೀ ಸೋಮೇಶ್ವರ ದೇವಸ್ಥಾನ (ಭಾರ್ಗವಲಿಂಗ) ೫) ಶ್ರೀ ಶಂಕರಲಿಂಗನ ದೇವಸ್ಥಾನ. ಇವುಗಳಲ್ಲದೆ ವಿಠಲಾಪುರ, ರಂಗಾಪುರ, ಧರ್ಮೇಶ್ವರಗಳಲ್ಲಿ ಪುರಾತನ ದೇವಸ್ಥಾನಗಳಿವೆ.

ಶ್ರೀ ವೇಣಪುರಿ ಅಥವಾ ಬಿದರಹಳ್ಳಿ ತುಂಗಾ ತೀರದಲ್ಲಿಯ ತೀರ್ಥಗಳು ೧) ಶ್ರೀ ಅಶ್ವಥ್ ನಾರಾಯಣ ತೀರ್ಥ ೨) ಶ್ರೀ ಸೋಮೇಶ್ವರ ತೀರ್ಥ ೩) ಶ್ರೀ ಮಲ್ಲಿಕಾರ್ಜುನತೀರ್ಥ ೪) ಶ್ರೀ ಶಂಕರತೀರ್ಥ ೫) ಶ್ರೀವಿಠಲತೀರ್ಥ ೬) ಶ್ರೀ ನರಸಿಂಹತೀರ್ಥ ೭) ಶ್ರೀ ಪ್ರಯಾಗ ತೀರ್ಥ ೮) ಶ್ರೀ ಪ್ರೇತಪರ್ವತ ತೀರ್ಥ

ಶ್ರೀ ವೇದೇಶ್ ತೀರ್ಥರ ಪ್ರಶಿಷ್ಯರೂ, ಶ್ರೀ ಯಾದವಾರ್ಯರ ಶಿಷ್ಯರೂ ಆಗಿದ್ದ ಶ್ರೀ ಶ್ರೀನಿವಾಸ ತಿರ್ಥರ ಆಶ್ರಮವೂ ಇಲ್ಲಿದೆ. ಈಚೆಗೆ ತುಂಗಭದ್ರಾ ಯೋಜನೆಯಲ್ಲಿ ಮುಳಿಗಿ ಹೋದ ನಾರಾಯಣ ದೇವರಕೆರೆಯಲ್ಲಿದ್ದ ಮಧ್ವಾಚಾರ್ಯರರ ಕರಿಕಲ್ಲಿನ ಮೂರ್ತಿಯನ್ನು ಶ್ರೀ

ಪ್ರಹಲ್ಲಾದ ಅವರು ಕೊಂಡು ಹೋಗಿ ಇಲ್ಲಿ ಮರುಪ್ರತಿಷ್ಠಾಪಿಸಿದ್ದಾರೆ. ಶ್ರೀ ವಿ.ಹೆಚ್. ದೇಶಾಯಿ ಸುಪ್ರಶಿದ್ಧ ಪತ್ರಕರ್ತ, ಸ್ವಾತಂತ್ರ್ಯ ಹೋರಾಟಗಾರ, ಹೈದರಾಬಾದಿ ನಲ್ಲಿಯ ಕನ್ನಡ ಸಾಹಿತ್ಯ ಸಂಘದ ಕಾರ್ಯದರ್ಶಿಯಾಗಿದ್ದವರು, ಇವರ ಮೂಲಪುರಷರು ಈ ಊರಿನವರೇ ಆಗಿದ್ದರು. ಹೀಗೆ ಬಿದರಹಳ್ಳಿಗೆ ಅಪಾರ ಇತಿಹಾಸವಿರುವುದು ಹೆಮ್ಮೆಯ ಸಂಗತಿಯಾಗಿದೆ.

ಒಂದು ಹೇಳಿಕೆಯಂತೆ ಇಂದಿನ ಧಣಾಯಕನ ಕೆರೆ ಗ್ರಾಮಕ್ಕೆ ಬಿದಹಳ್ಳಿ ಎಂದೇ ಕರೆಯುತ್ತಿದ್ದರಂತೆ. ಈ ಧಣಾಯಕನ ಕೆರೆ ಗ್ರಾಮಕ್ಕೆ ಸಂಬಂಧಿಸಿದ ಹೇಳಿಕೆಯಂತೆ ಕೂಡ್ಲಿಗೆ ಗ್ರಾಮದ ಬಳಿ ಇರುವ ಜರಮಲೆಯಲ್ಲಿ ಬರಬಿತ್ತಂತೆ. ಆಗ ಅಲ್ಲಿಯ ಭಾಂಕೇರರ ಹೆಣ್ಣುಮಗಳಾದ ಗಂಗಮ್ಮ ತನ್ನ ಎಳೆರಯ ಮಗನಾದ ಮುದ್ದನೊಂದಿಗೆ ಈ ಊರಿಗೆ ಬಂದಳಂತೆ. ಆಗ ಬಿದರಹಳ್ಳಿಯಲ್ಲಿದ್ದ ಜಕ್ಕಪ್ಪಾಚಾರ್ಯ ಮತ್ತು ಅವನ ಮಡದಿ ಜಯಲಕ್ಷ್ಮಮ್ಮ ಇವರು ಮುದ್ದನಿಗೆ ಹಾಗೂ ಅವನ ತಾಯಿಗೆ ಆಶ್ರಯ ನೀಡಿದರಂತೆ. ದನಕಾಯುಲು ಹೋದ ಮುದ್ದ ಅಲ್ಲಿ ನಿದ್ದೆ ಹೋದಾಗ ಅವನಿಗೆ ಕನಸಿನಲ್ಲಿ ಸರ್ಪಕಾಣಿಸಿ ಕೊಂಡು ನಿಧಿ ಇರುವ ಎಳು ಸ್ಥಳಗಳನ್ನು ತೋರಿಸಿದನಂತೆ. ಇದು ಅರಸನ ಗಮನಕ್ಕೆ ಬರಲು ಅವನನ್ನು ದಂಡನಾಯಕನೆಂದು ನೇಮಿಸಿದನಂತೆ. ಬಿದರ್ ಹಳ್ಳಿಯಲ್ಲಿ ದಂಡನಾಯಕನಾದ ಮುದ್ದನು ಒಂದು ಕೆರೆ ನಿರ್ಮಿಸಿದ. ಅಂದಿನಿಂದ ಬಿದರಹಳ್ಳಿಯನ್ನು ಧಣಾಯಕನ ಕೆರೆ ಎಂದೇ ಕರೆಯತೊಡಗಿದರಂತೆ.

ಈ ಸಾಂಗತ್ಯದಲ್ಲಿ ಅಚ್ಚುತ ದೇವರಾಯನ ಬಗೆಗೆ ಹೇಳಲಾಗಿದೆ. ಅಚ್ಚುತ ದೇವರಾಯ ಕಟ್ಟಿಸಿರಬಹುದಾದ ಕೆರೆ ಯಾವುದು ಎಂಬುದರ ಬಗೆ ಖಚಿತ ದಾಖಲೆಗಳಿಲ್ಲ. ಆದರೆ ಅಚ್ಚುತದೇವರಾಯ ವಡ್ಡರಿಗೆ ನೀಡಿದ ಮಾತಿನಂತೆ ಕೂಲಿ ಕೊಡದೇ ಹೋದಾಗ ವಡ್ಡರು ಅವನನ್ನು ಶಪಿಸುತ್ತಾರೆ. ಇದರ ಫಲವೇ ಬರ. ಈ ಬರ ಪರಿಹಾರಕ್ಕೆ ರಾಜನಾದ ಅಚ್ಚುತದೇವರಾಯ ೧೨ ವರ್ಷ ತೀರ್ಥಯಾತ್ರೆಗೆ ಹೊರಡುವಂತೆ ರಾಜ ಪುರೋಹಿತರು ಸಲಹೆ ನೀಡುತ್ತಾರೆ. ಆಗ ಅವನು ಧಣಾಯಕ ಮುದ್ದನಿಗೆ ರಾಜ್ಯ ಒಪ್ಪಿಸಿ ಯಾತ್ರೆಗೆ ಹೊರಡುತ್ತಾನೆ. ಈ ಸಮಯದಲ್ಲಿ ಮುದ್ದನು ಕೆರೆ ಬಾವಿಗಳನ್ನು ನಿರ್ಮಿಸುತ್ತಾನೆ. ಆದರೆ ಕಿಡಿಗೇಡಿಗಳು ಮುದ್ದ ರಾಜ್ಯದ ಬೊಕ್ಕಸವನ್ನು ದುರುಪಯೋಗ ಮಾಡಿದ್ದಾನೆ ಎಂದು ಅಪಾದಿಸುತ್ತಾರೆ. ಇದನ್ನು ಸಹಿಸದೇ ಹೋದ ಮುದ್ದಣ್ಣ ವಿಷ ಸೇವಿಸಿ ಪ್ರಾಣ ತೊರೆಯುತ್ತಾನೆ. ಈ ವಿಷಯದ ಬಗೆಗೆ ಅಧಿಕ ಸಂಶೋಧನೆಯಾಗಬೇಕು. ಏಕೆಂದರೆ ಹೊಸಪೇಟೆಯಿಂದ ಹರಿಹರಕ್ಕೆ ಹೋಗುವ ಮಾರ್ಗದಲ್ಲಿನ ರಾಯರ ಕೆರೆಯ ಬಳಿ ಜೋಳದರಾಶಿ ಗುಡ್ಡವಿದೆ. ಹಳೆತಲೆಮಾರಿನವರು ಹೇಳುವಂತೆ ವಡ್ಡರ ಶಾಪದಿಂಧಾಗಿ ಈ ಗುಡ್ಡವಾಗಿದಂತೆ ಅಲ್ಲದೆ ರಾಯರ ಕೆರೆಯ ನೀರು ನಿಲ್ಲದೆ ಹರಿದು ಹೋಗುವಂತೆ ಕೂಡಾ ವಡ್ಡರು ಶಪಿಸಿದರಂತೆ.

ಧಣಾಯಕನ ಕೆರೆಯಿಂದ ರಾಯರ ಕೆರೆಗೆ ಗುಡ್ಡದಡಿಯಲ್ಲಿ ಒಂದು ತೂಬನ್ನು ಕೆರೆದಿದ್ದು ಅದರಿಂದ ರಾಯರ ಕೆರೆಗೆ ನೀರು ಹರಿಯಲು ಬಿಡುತ್ತಿದ್ದರೆಂದೂ, ಕಾಲಕ್ರಮೇಣ ದುರವಸ್ಥೆಗೀಢಾಗಿ ಆ ತೂಬು ಮುಚ್ಚಿ ಹೋದುದರಿಂದ ರಾಯರ ಕೆರೆ ಬಂಜೆ ಕರೆಯಾತಂತೆ.

ಈ ಎಲ್ಲ ವಿಷಯಳನ್ನು ಗಮನಿಸಿದಾಗ ಈ ಪ್ರಾಂತದಲ್ಲಿ ನೀರಾವರಿ ತಜ್ಞರಿಗೆ ಕೊರತೆ ಇರಲಿಲ್ಲ ಎಂಬ ಅಂಶ ಖಚಿತ. ಹೀಗಾಗಿ ಈ ಬಗೆಗೆ ಅಂದರೆ Hydraclic Enginching ಬಗೆಗೆ ಅಧಿಕ ಸಂಶೋಧನೆ ನಡೆಸಿದ್ದಲ್ಲಿ ಇಂದು ನೀರಿಗಾಗಿ ಕಚ್ಚಾಡುತ್ತಿರುವ ರಾಜ್ಯಗಳಿಗೆ ಪರಿಹಾರ ಒದಗಿಸಬಹುದಲ್ಲವೇ.?

**ಧಣಾಯಕ ಮುದ್ದನ ಬಗೆಗೆ ದಾಖಲೆಗಳು**

ಪರಂಪರೆಯ ಹೇಳಿಕೆಯಂತೆ ಇಂದಿನ ಬಳ್ಳಾರಿ ಜಿಲ್ಲೆಯಲ್ಲಿ ಕಾಣಿಸಬಹುದಾದ ಅನೇಕ ನೀರಾವರಿ ಕಾರ್ಯಗಳನ್ನು, (ಕೆರೆ, ಕುಂಟ, ಆಣೆಕಟ್ಟು, ಕಾಲುವೆಗಳು) ವಿಜಯನಗರದ ಅರಸರಾಗಿದ್ದ ಪ್ರೌಢದೇವರಾಯ ಹಗೂ ಶ್ರೀ ಕೃಷ್ಣ ದೇವರಾಯರಿಂದ ನಿರ್ಮಿತವಾದವು. ಶ್ರೀ ಕೃಷ್ಣ ದೇವರಾಯನಲ್ಲಿ ಅಧಿಕಾರಿಯಾಗಿದ್ದ ಧಣಾಯಕನೇ ಈ ಅನೇಕ ಕಾರ್ಯಗಳಿಗೆ ಕಾರಣ ಪುರಷನಾಗಿದ್ದ, ಇವನಿಂದಾದ ಕಾರ್ಯಗಳು ಎಂದರೆ: ಧಣಾಯಕನ ಕೆರೆ, ರಾಯರ ಕೆರೆ, ವಲ್ಲಭಾಪುರದ ಆಣೆಕಟ್ಟು, ಮೊದಲಗಟ್ಟೆ, ಮುಂತಾದವು.

ಬಳ್ಳಾರಿ ಮ್ಯಾನುಯಲ್ ೧೯೦ಳ ಪೇಜಿ ೯೦ - ೯೧ರಲ್ಲಿ ಹೇಳಲಾದಂತೆ ಈ ನೀರಾವರಿ ಕಾರ್ಯಗಳಿಮದ ಹೊಸಪೇಟೆ ತಾಲೂಕಿನಲ್ಲಿ ೧೩,೨೦೦ ಎಕ್ರೆ, ಬಳ್ಳಾರಿ ತಾಲೂಕಿನಲ್ಲಿ ೨,೩೦೦ ಎಕ್ರೆ ಅದೋನಿ ತಾಲೂಕಿನಲ್ಲಿ ೯೦೦ ಎಕ್ರೆ ಜಮೀನು ಸಾಗುವಳಿಯಾಗುತ್ತಿತ್ತು. ಇಂದು ತುಂಗಭದ್ರಾ ಪ್ರಾಜೆಕ್ಟ ನದಿಯಲ್ಲಿ ಇನ್ನೂ ಅಧಿಕ ಸಾಗುವಳಿ ನಡೆದಿದೆ.

ಕ್ರಿ.ಶ ೧೯೧೬ರ ಒಂದು ಶಾಸನದಲ್ಲಿ ಸೋಗಿಯ ಒಂದು ದೇವಸ್ಥಾನದ ಖರ್ಚು ವೆಚ್ಚಕ್ಕೆ ಧರ್ಮದ ಏತಕಾರ್ಯಕ್ಕೆ ಧಣಾಯಕಪುರದ ಆದಾಯದಿಂದ ದಾನ ನೀಡಾಲಾಗುತ್ತಿದ್ದಂತೆ ತಿಳಿದುಬಂದಿದೆ. ಶ್ರೀ ಸಿ.ಟಿ.ಎಂ.ಕೊಟ್ರಯ್ಯ ನವರು ತಮ್ಮ "ವಿಜಯ ನಗರದ ಅವಧಿಯಲ್ಲಿಯ ನೀರಾವರಿ ಕಾರ್ಯಗಳ" ಎಂಬ ಪುಸ್ತಕದಲ್ಲಿ ಇದನ್ನು ಪ್ರಸ್ತಾಪಿಸಿದ್ದಾರೆ.

ಮುದ್ದಣನಾಯಕನಿಗೆ ಶ್ರೀ ಕೃಷ್ಣದೇವರಾಯನಿಂದ ದೊಂಡಾವತಿ ಎಂಬ ಗ್ರಾಮ ಉಂಬಳಿಯಾಗಿ ನೀಡಲಾಗಿತ್ತು. ಆದರೆ ಆಗ್ರಾಮ್ಮಕೆ ನೀರಾವರಿ ಸೌಕರ್ಯಗಳು ಇರಲಿಲ್ಲ. ಇದರ ಬಗೆಗೆ ಹಳ್ಳಿಗರು ದೂರು ನೀಡಿದರು. ಆಗ ಅರಸನು ಗುಂಡಪ್ಪನ ಮಗನಾದ ಮಲೆಶಾನಿ ಎಂಬವನಿಗೆ ಕೆರೆಯನ್ನು ನಿರ್ಮಿಸುವಂತೆ ಆದೇಶ ನೀಡಿದ. ಅದರಂತೆ ಅವನು ಕೆರೆಯ ನಿರ್ಮಾಣಕಾರ್ಯವನ್ನು ಪೂರೈಸಿದ್ದಕ್ಕಾಗಿ, ಬಳ್ಳಾರಿ ಜಿಲ್ಲೆಯ ಹಾವಿನಾಳು ವೀರಾಪುರದ ಬಳಿ ಭೂಮಿಯನ್ನು ಪೂರೈಸಿದ್ದಕ್ಕಾಗಿ, ಬಳ್ಳಾರಿ ಜಿಲ್ಲೆಯ ಹಾವಿನಾಳು ವೀರಾಪುರದ ಬಳಿ ಭೂಮಿಯನ್ನು ಪಡೆದಂತೆ ಕ್ರಿ.ಶ. ೧೫೨೯ರ ಒಂದು ಶಾಸನ ಸೂಚಿಸುತ್ತದೆ. S.ii Vol.IX pt II No. 528 ARSI ೧೯೧೩ No. ೧೯೪

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿ ಧಣಾಯಕನ ಕೆರೆ ಎಂಬ ಒಂದು ಹಳ್ಳಿ ಇದೆ. ಆ ಹಳ್ಳಿಗೆ ಸೇರಿದಂತೆ ಒಂದು ದೊಡ್ಡ ಕೆರೆ ಇದೆ. ಪರಂಪರೆಯ ಹೇಳಿಕೆಯಂತೆ ಈ ಕೆರೆಯನ್ನು ಮುದ್ದಣ್ಣ ಧಣನಾಯಕನು ನಿರ್ಮಿಸಿದನಂತೆ. ಇದಲ್ಲದೆ ಅವನು ಅನೇಕ ಕೆರೆಗಳನ್ನು, ಆಣೆಕಟ್ಟುಗಳನ್ನು ನಿರ್ಮಿಸಿದ್ದನಂತೆ. ಈ ಕೆರೆಯು, ೪೮ ಚ.ಮೈ ಜಲಯನ ಪ್ರದೇಶದಲ್ಲಿ ನಿರ್ಮಿಸಲಾದ ಸರಣಿ ಕೆರೆಗಳಲ್ಲಿ ಕೊನೆಯದಾಗಿತ್ತು. ಈ ಕೆರೆಯಲ್ಲದೆ, ಮೇಲುಗಡೆಯಲ್ಲಿ ನಾಲ್ಕು ಕೆರೆಗಳಿದ್ದು ಅದರಲ್ಲಿ ನಾಲ್ಕನೆಯದು ಧಣಾಯಕನಕೆರೆ. ಈ ಕೆರೆಗೆ ಅಧಿಕವಾದ ನೀರು ಗೌರೀಪುರದ ಹಳ್ಳವಾಗಿ ಹರಿದು ಮುಂದೆ ನದಿ ಸೇರುತ್ತಿತ್ತು. ಆದರೆ ಈಗ ಗೌರಿಪುರದ ತುಂಗಭದ್ರಾ ಜಲಾಶಯದಲ್ಲಿ ಮುಳುಗಡೆ ಹೊಂದಿದೆ. ಆದರೆ ಈಚಿನ ಸರ್ವೆಯ ದಾಖಲಯಂತೆ ಈ ಕೆರೆಯ ಜಲಾಯನ ಪ್ರದೇಶವು ೬೨ ಚ.ಮೈ ಹಾಗೂ ೧೫ ಕೆರೆಗಳಿಂದ ಕೂಡಿದ್ದವು ಎಂದು ತಿಳಿದುಬಂದಿದೆ. (ಹೊಸಪೇಟೆ ಪಿ.ಡಬ್ಲೂ.ಡಿ ಕಾರ್ಯಲಯದಂತೆ.)

ವಿಜಯನಗರದ ಆಡಳಿತ ಅವಧಿಯಲ್ಲಿ ನಿರ್ಮಿಸಲಾದ ಧಣಾಯಕನ ಕೆರೆಯು ಇಂದಿಗೂ ಕಾರ್ಯ ಮಾಡುತ್ತಿದೆ. ಈ ಕೆರೆಯನ್ನು ಮುದ್ದಣನು ನಿರ್ಮಿಸಿದ. ನಂತರ ಅವನು ಮಂತ್ರಿಯಾದ ಈ ಕೆರೆ ೪೭.೭೭ಚ.ಮೈ ಜಲಾಯನ ಪ್ರದೇಶ ಹೊಂದಿದೆ. ಈ ಕೆರೆಯ ಆಯಕಟ್ಟಿನಲ್ಲಿ ೧೫೦೭.೫ ಎಕ್ರೆ ಜಮೀನು ನೀರಾವರಿಯಾಗುತ್ತದೆ. ಈ ಕೆರೆಯ ವಿರುದ್ಧ ದಿಕ್ಕಿನಲ್ಲಿ ೧೫ ಸರಣಿ ಕೆರೆಗಳಿದ್ದು, ಈ ಕೆರೆಯ ಒಡ್ಡು ೭.೯೬ ಮೀ. ಅಗಲವಿದೆ. ಸ್ವಲ್ಪ ಕಡೆ ೪.೫೭ ಮೀ ಅಗಲವಿದ್ದು ಬಂಡಿಮಾರ್ಗವನ್ನು ಹೊಂದಿದೆ. ಈ ಕೆರೆಗೆ ಎರಡು ಕಾಲುವೆಗಳಿವೆ. ಈ ಕಾಲುವೆಗಳ ಉದ್ದ ೨೧೦೦ ಮೀಟರಿನಷ್ಟಿದ್ದು ಎಡ ಹಾಗೂ ಬಲದಂಡೆ ಗುಂಟ ಇವೆ. ಈ ಕೆರೆಗೆ ಎರಡು ತುಂಬುಗಳಿವೆ. ಅವು ಪಿಷ್ಟನ್ ಪ್ಲಗ್ ಮಾದರಿಯಾಗಿವೆ. ಅವುಗಳ ತಳದ ಮಟ್ಟವು ಬೇರೆ ಬೇರೆಯಾಗಿವೆ. ನೀರಿನ ಸಮರ್ಥ ಬಳಕೆಗೆಂದೇ ಈ ಮಟ್ಟಗಳನ್ನು ನಿರ್ಮಿಸಲಾಗಿದೆ. ನೀರು ವ್ಯರ್ಥವಾಗಿ ಹೋಗದಂತೆ ರಕ್ಷಿಸಲಾಗಿದೆ. ಒಡ್ಡಿನ ಹೊರ ಬದಿಯಲ್ಲಿ ಎರಡೂ ತಂಬುಗಳನ್ನು ಒಂದು ಹರಿಗಾಲುವೆಯಿಂದ ಜೋಡಣೆ ಮಾಡಿದೆ.

ಧಣಾಯಕನ ಕೆರೆ, ದೇವಾಪುರ, ಮರಿಯಮ್ಮನಹಳ್ಳಿ, ಧಣಾಪುರ, ಮತ್ತು ಗುಂಡಾ ಪ್ರದೇಶಗಳ ಭೂಮಿಗೆ ಈ ಕೆರೆ ನೀರುಣಿಸುತ್ತದೆ. ಒಂದಕ್ಕಿಂತ ಸಾಮಾನ್ಯವಾಗಿ ಹೆಚ್ಚು ತುಂಬುಗಳನ್ನು ನಿರ್ಮಿಸಲಾಗುವುದು. ಇದು ಕೆರೆಯ ಗಾತ್ರ ಹಾಗೂ ನೀರನ್ನು ಶೇಖರಿಸು ಪ್ರಮಾಣ ಅವಲಂಬಿಸಿದೆ. ಇದು ಅಂದಿನವರ ಜಲತಂತ್ರಜ್ಞಾನಕ್ಕೆ ಉದಾಹರಣೆ. ಏಕೆಂದರೆ ಕೆರೆಯಲ್ಲಿ ಸಂಗ್ರಹಿಸಲಾದ ನೀರಿನ ಒತ್ತಡದಿಂದ ಕೆರೆಯ ಒಡ್ಡು ಒಡೆದು ಹೋಗಬಾರದೆಂದೇ ಎರಡು ತುಂಬುಗಳನ್ನು ನಿರ್ಮಿಸುತ್ತಾರೆ. ಇದಕ್ಕೆ ಧಣಾಯಕನ ಕೆರೆ ಉತ್ತಮ ನಿದರ್ಶನವಾಗಿದೆ. ಈ ಕೆರೆಯಲ್ಲಿ ಎರಡು ತುಂಬುಗಳಿವೆ ಅವುಗಳ ನಡುವಿನ ಅಂತರ ೨೦ ಅಡಿ.

ಕ್ರಿ.ಶ ೧೯೦೪ರಲ್ಲಿ ಪ್ರಕಟಿಸಲಾದ “ಬಳ್ಳಾರಿ ಮ್ಯಾನ್ಯುಯಲ್” ಫ್ರಾನ್ಸಿಸ್ ಅವರಿಂದ ಪ್ರಕಟನೆಗೊಂಡಿದ್ದು ಅದರ ೨೯ನೆಯ ಪುಟದಲ್ಲಿ ಧಣಾಯಕನ ಕರೆಯ ಬಗೆಗೆ ಹೇಳಲಾಗಿದೆ. ಅವರು ಹೇಳುವಂತೆ ಬಳ್ಳಾರಿ ಜಿಲ್ಲೆಯ ಹಲವು ಪ್ರದೇಶಗಳು ಪಶ್ಚಿಮ ಚಾಲುಕ್ಯರ ಅರಸನಾದ ಎರಡನೆ ತೈಲಪನ ಆಡಳಿತಕ್ಕೆ ಒಳಪಟ್ಟಿರಬೇಕು. ಹಾಗೂ ಅದನ್ನು ಅಂದು ಕುಂತಲನಾಡೆಂದು ಕರೆಯುತ್ತಿದ್ದರು. ಇಂದಿನ ಹಂಪೆ ಮತ್ತು ಕುರುಗೋಡು ಬಾಗಳಿಗಳ ಶಿಲಾಶಾಸನಗಳಲ್ಲಿ ಈ  ಬಗ್ಗೆ ವಿವರಗಳನ್ನು ಕಾಣಬಹುದು. ಒಂದು ಹೇಳಿಕೆಯಂತೆ ಎರಡನೆಯ ಜಯಸಿಂಹ ೧೦೧೮ - ೪೨೮ ಅವಧಿಯಲ್ಲಿ ‘ಪೂಟ್ಟಲ ಕೆರೆ’ ಅವನ ಉಪರಾಜಧಾನಿಯಾಗಿತ್ತು. ಇಂದಿನ ಹೊಸಪೇಟೆ ತಾಲೂಕಿನಲ್ಲಿರುವ ಧಣಾಯಕನ ಕೆರೆ (ಧಾಣಾಪುರ) ಪೊಟ್ಟಲಕೆರೆ ಎಂದು ಅನೇಕ ವಿದ್ವಾಂಸರ ಅಭಿಪ್ರಾಯ.

ಮನ್ರೋ ಅವರ ಹೇಳಿಕೆಯಂತೆ ಕೊಯಂಬತ್ತೂರು ಜಿಲ್ಲೆಯ ನಂತರ, ಬಳ್ಳಾರಿ ಜಿಲ್ಲೆ ಅಧಿಕ ಕೆರೆಗಳನ್ನು ಹೊಂದಿದ್ದು ಅವುಗಳ ಸಂಖ್ಯೆ ಒಟ್ಟಾರೆ ೨೮೦, ಆದರೆ ಇದರಲ್ಲಿ ಕೇವಲ ಎರಡೇ ಕೆರೆಗಳಿಗೆ ನದಿಯಿಂದ ನೀರು ಹರಿದು ಬಂದು ೫೦೦ ಎಕ್ರೆಗೆ ಅಧಿಕವಾದ ನೀರಾವರಿ ಕಾರ್ಯನಡೆಯುತ್ತಿದೆ. ಆ ಕೆರೆಗಳೆಂದರೆ ಕಮಲಾಪುರ ಮತ್ತು ಕಣೆಕಲ್ಲು ಕೆರೆಗಳು, ಮುಂದು ವರಿದು ಈ ದಿಶೆಯಲ್ಲಿ ಉದಾಹರಿಸಬಹುದಾದ ದೊಡ್ಡ ಕೆರೆಗಳೆಂದರೆ: ದರೋಜಿ, ಧಣಾಯಕನ ಕೆರೆ, ಚಿನ್ನತುಂಬಳ ಹಾಗೂ ಕಣೇಕಲ್ಲು ಏಳು ಸರಪಳಿ ಕೆರೆಗಳಲ್ಲಿ ಧಣಾಯಕನ ಕೆರೆ ಕೊನೆಯದು. ಇದರ ಮೇಲ್ಭಾಗದಲ್ಲಿಯ ಮೂಉರ ಕೆರೆಗಳು ಸುಮಾರು ೩೦ ಚ.ಮೈ ಜಲಾಯನ ಪ್ರದೇಶ ಹೊಂದಿದ್ದು ೩೫೪ ಎಕ್ರೆ ಜಮೀನಿಗೆ ನೀರಣೀಸಿ ಸುಮಾರು ರೂ.೮ ೧,೭೯೬ ಆದಾಯವನ್ನು ಸರಕಾರದ ಬೊಕ್ಕಸಕ್ಕೆ ನೀಡುತ್ತಿದ್ದವೆಂದು ೨೮೫೧ರ ಒಂದು ವರದಿಯಲ್ಲಿ ಹೇಳಲಾಗಿದೆ. ಈ ಕೆರೆಗಳ ಅಧಿಕ ನೀರು ಧಣಾಯಕನ ಕರೆಗೆ ಹರಿದು ಬಂದು ೧೮ ಚ.ಮೈ ವಿಸ್ತಾರವನ್ನು ಅಧಿಕಗೊಳಿಸಿವೆ. ಈ ಧಣಾಯಕನ ಕೆರೆಗೆ ಹರಿದು ಬಂದು ೧೮ ಚ.ಮೈ ವಿಸ್ತಾರವನ್ನು ಅಧಿಕಗೊಳಿಸಿವೆ. ಈ ಧಣಾಯಕನ ಕೆರೆ ತುಂಬಿದ ಮೇಲೆ ಉಳಿಯುವ ಆದಿಕ ನೀರು ಗೌರೀಪುದ ಹಳ್ಳದ ಮೂಲಕ ತುಂಗಭದ್ರೆಗೆ ಸೇರುತ್ತದೆ. (ಈಗ ಈ ಊರು ಮುಳುಗಿದೆ) ಬಳ್ಳಾರಿ ಮ್ಯಾನ್ಯುಯೆಲ್ ಪೇಜಿ.೮೯.

**ಕನ್ನೀರಾಂಬೆಯ ಕಥೆಯನ್ನು ಕುರಿತಂತೆ:** ಇದನ್ನು ಸಾಂಗತ್ಯದಲ್ಲಿ ಬರೆಯಲಾಗಿದೆ. ಆದರೆ ಈ ಸಾಂಗತ್ಯವನ್ನು ಯಾರು ರಚಿಸಿದರು ಎಂಬುದನ್ನು ಈ ಬರವಣಿಗೆಯಲ್ಲಿ ಕಂಡು ಬಂದಿಲ್ಲ. ಈ ಹಸ್ತಲಿಖಿನ ಹೊತ್ತಿಗೆಯ ಮುಖಪುಟದ ಮೇಲೆ ಕನ್ನೀರಾಂಬೆಯ ಕಥೆ ೧೯೩೧ ಸಂವತ್ಸರ ಜನವರಿ ತಿಂಗಳಲ್ಲಿ ತಯಾರಿಸಿದ್ದು ಧಣಾಯಕನ ಕೇರಿ ತಾಲೂಕಾ ಹೊಸಪೇಟೆ ಜಿಲ್ಲಾ ಬಳ್ಳಾರಿ ಎಂದಿಷ್ಟೇ ಬರೆಯಲಾಗಿದೆ. ಈ ಕೈಬರಹ ನಾನು ‘ನಾರಯಣ ದೇವರು ಕೆರೆ’ ಎಂಬ ಪುಸ್ತಕವನ್ನು ಬರೆದ ಸಮಯದಲ್ಲಿ ನನ್ನ ಕೈಗೆ ಸೇರಿತು. ಆದರೆ ಅದನ್ನು ಯಾರು ನಿಡಿದರು ಎಂಬುದು ಜ್ಞಾಪಕವಿಲ್ಲ. ಇದರ ರಚನೆ ಸರಳ ಹಾಗೂ ಅರ್ಥವಾಗುವ ರೀತಿಯಲ್ಲಿದೆ. ಆದುದರಿಂದ ಅದರ ಬಗೆಗೆ ಹೆಚ್ಚು ನಾನೇನೂ ವಿವರಿಸ ಬೇಕಾಗಿಲ್ಲ. ಈ ಸಾಂಗತ್ಯವು ಕೇವಲ ಕನ್ನಿರಾಂಬೆ ಎಂಬ ಕನ್ಯೆಯ ಬಲಿದಾನಕ್ಕೆ ಸೀಮಿವಾಗಿರದೇ; ಸುಪ್ರಶಿದ್ಧ ಜಲತಂತ್ರ ಜ್ಞಾನಿಯಾಗಿದ್ದ ಧಣಾಯಕ ಮುದ್ದಣ್ಣನ ಬಗೆಗೂ ಪ್ರಸ್ತಾಪಿಸಿದೆ. ಮತ್ತೊಂದು ವಿಷಯವೆಂದರೆ ಅಚ್ಚುತದೇವರಾಯ ಹಾಗೂ ಆನೆಗೊಂದಿಯ ಬಗೆಗೂ ಇದರಲ್ಲಿ ಪ್ರಸ್ತಾಪಿಸಲಾಗಿದೆ. ಈ ವಿಷಯಗಳು ಪ್ರಸ್ತಾಪಿಸಿರುವುದು ಕುತೂಹಲಕಾರಿಯಾಗಿದೆ ಎಂದೇ ಹೇಳಬಯಸುವೆ. ಏಕೆಂದರೆ ನಾನು ಮುದ್ದಣ್ಣ ಧಣನಾಯಕನ ಬಗೆಗೆ ಸಂಗ್ರಹಿಸಿದೆ ದಾಖಲೆಗಳಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬಂದಿಲ್ಲ.

ಧಣಾಕಮುದ್ದನ ಬಗೆಗೆ ಇನ್ನೂ ವಿವರಗಳನ್ನು ಹುಡುಕಬೇಕು. ಏಕೆಂದರೆ ಅವನು ಒಬ್ಬ ಅಸಾಮಾನ್ಯ, ಸುಪ್ರಶಿದ್ಧ ಜಲತಂತ್ರಜ್ಞಾನಿ (Hydaulic Engineer) ಯಾಗಿದ್ದಂತೆ ತೋರುತ್ತದೆ. ಪರಂಪರೆಯಂತೆ, ಹಡಗಲಿ ತಾಲೂಕಿನಲ್ಲಿಯು ಮೊದಲಕಟ್ಟೆ ಹಗೂ ‘ವಲ್ಲ ಭಾಪರ’ದ ಆಣೆಕ್ಟುಗಳನ್ನು ಅವನಿಂದಲೇ ನಿರ್ಮಾಗೊಂಡಿವೆ. ಅಲ್ಲದೆ ಈ ಬಗ್ಗೆ ಬ್ರಿಟಿಷ್ ಆಡಳಿತಗಾರರೂ, ದಾಖಲಿಸಿದ್ದಾರೆ. ಹೀಗಾಗಿ ಅವನ ಬಗೆಗೆ ಹೆಚ್ಚಿನ ಸಂಶೋಧನೆ ಆಗಭೆಕು. ಈಗ ತುಂಗಭದ್ರಾ ಜಲಾಶಯದಲ್ಲಿ ಮುಳಿಗಿ ಹೋದ ‘ವಲ್ಲಭಾಪುರ’ ಹಾಗೂ ನಾರಾಯಣ ದೇವರಕೆರೆಯಲ್ಲಿ ಹಲವಾರು ಶಿಲಾಶಾನಗಳಿದ್ದು ಅವು ಎಲ್ಲಿ ಸೇರಿವೆ ಎಂಬುದು ತಿಳಿಯದಾಗಿದೆ ನಾನು ಈ ಬಗ್ಗೆ ಪ್ರಯತ್ನ ಮುಂದುವರಿಸಿದ್ದರೂ ಫಲಕರಿಯಾಗಿಲ್ಲ.

ಈ ಸಾಂಗತ್ಯದಲ್ಲಿ ಚೋಳರಾಯನ ದಂಡಯಾತ್ರೆಯ ಬಗೆಗೆ ಪ್ರಸ್ತಾಪಿಸಿದೆ. ಇದರ ಬಗೆಗೂ ಹೆಚ್ಚು ಚರ್ಚೆಯಾಗಬೇಕು. ನಾನು ಈಗಾಗಲೇ ಹೇಳಿದಂತೆ ಅಚ್ಚುತದೇವರಾಯನ ಬಗ್ಗೆ ಹೇಳಬಹುದಾದರೆ, ರಾಯರಕೆರೆ ನಿರ್ಮಾಣವನ್ನು ಕ್ರಿಷ್ಣ ದೇವರಾಯನ ಬಗ್ಗೆ

ಹೇಳಬಹುದಾದರೆ, ರಾಯರಕೆರೆ ನಿರ್ಮಾಣವನ್ನು ಕರಷ್ಣ ದೇವರಾಯನ ಆಡಳಿತ ಸಮಯದಲ್ಲಿಯೇ ಕೈಗೆತ್ತಿಕೊಂಡಿದ್ದು, ಅದು ಅಚ್ಚುತದೇವರಾಯನ ಅವಧಿಯಲ್ಲಿ ಮುಂದು ವರಿದಿರಬೇಕು. ಏಕೆಂದರೆ ಈ ಸಾಂಗತ್ಯದಲ್ಲಿ ತಿಳಿಸಿದಂತೆ ವಡ್ಡರೊಂದಿಗಿನ ಮನಸ್ತಾಪದ ಬಗೆ ಇಂದಿಗೂ ಈ ಪ್ರಾಂತದ ಜನರು 'ಜೋಳದರಾಶಿ' ಗುಡ್ಡದ ಶಾಪದ ಬಗೆಗೆ ಹೇಳುತ್ತಲೇ ಇದ್ದಾರೆ. ಆದರೆ ಈ ಬಗ್ಗೆ ಚರಿತ್ರೆಯಲ್ಲಿ ಯಾವ ದಾಖಲೆಗಳೂ ಕಣ್ಣಿಗೆ ಬಿದಿಲ್ಲ. ಈ ಎಲ್ಲ ವಿಷಯಗಳ ಬಗೆಗೆ ವಿದ್ಯಾಂಸರು ಪರಿಶೋಧನೆ ನಡೆಸಿದ್ದಲ್ಲಿ ಅಧಿಕ ವಿವರಗಳು ದೊರೆಯುತವ ಸಾಧ್ಯತೆಗಳಿವೆ. ಹೀಗೆ ಕನ್ನಿರಾಂಬೆಯ ಕಥೆಯಲ್ಲಿ ಹಲವಾರು ವಿಷಯಗಳು ಅಡಕವಾಗಿವೆ. ಬಿದರಹಳ್ಳೀಯ ಬಗೆಗೂ ಅದಿಕ ವಿವರಗಳನ್ನು ಸಂಗ್ರಹಿಸಿದರೆ ನಮ್ಮ ಹಿಂದಿನ ಚರಿತ್ರೆಯ ಮೇಲೆ ಬೆಳಕು ಚೆಲ್ಲಬಹುದು.

ಇನ್ನು ಈ ಸಾಂಗತ್ಯದಲ್ಲಿನ ಹಲವಾರು ವಿಷಯಗಳೆಂದರೆ: ಜಕ್ಕಪ್ಪಾಚಾರ್ಯ ಹಾಗೂ ಅವರ ಮಡದಿ ಮಹಾಲಕ್ಷ್ಮಿ ಅವರಿಗೆ ಮಕ್ಕಳ ಬಗೆಗೆ ಇದ್ದ ಮಮತೆ ಮಂದಿ ಮಕ್ಕಳನ್ನು ಮುದ್ದಿಸುವ ವಿಶಾಲ ಹೃದಯ ಈ ದಂಪತಿಗಳದು. ಆದರೆ ಮುಂದೆ ಒಂದು ದಿನ ತಮ್ಮ ಏಕೈಕ ಪುತ್ರಿಯನ್ನೇ ಸಾರ್ವಜನಿಕ ಹಿತಕ್ಕಾಗಿ ಬಲಿಕೊಡಬೇಕಾದ ಪರಿಸ್ಥಿತಿ ಬಂದರೂ ಧೃತಿಗೆಡೆದೆ ಹೆತ್ತ ಮಗಳನ್ನೇ ಬೀಳ್ಕೊಟ್ಟ ಪ್ರಸಂಗ ಯಾರ ಕರುಳನ್ನಾದರೂ ಮಿಡಿಯಬಲ್ಲದು.

ಚೋಳರಾಯನ ತ್ಯಾಗ, ಯರಳೆಯ ಪರಿದಾಟ, ಋಷಿಯ ಪ್ರೀತಿ ಈ ಎಲ್ಲವೂ ನಮ್ಮ ಸಮಾಜದ ವಿವಿಧ ಮುಖಗಳನ್ನು ಸುಂದರವಾಗಿ ಪ್ರತಿಬಿಂಬಿಸಿವೆ. ಈ ಸಾಂಗತ್ಯದಲ್ಲಿನ ಮುದ್ದನ ಹಾಗೂ ಸರ್ಪದ ಸಂಗತಿ ನಮ್ಮ ಜಾನಪದದ ಜೀವಾಳ. ಇದನ್ನು ಕೇವಲ ಮೂಢನಂಬಿಕೆ ಎಂದು ಜರಿಯದೆ ಅದರ ಹಿಂದೆ ಮಿಡಿಯುತ್ತಿರುವ ಮಾನವೀಯ ಮೌಲ್ಯಗಳನ್ನು ಅರಿಯ ಬೇಕು. ವಿಜ್ಞಾನ ಹಾಗೂ ತಂತ್ರಜ್ಞಾನದ ಬೆನ್ನೇರಿ ಇಂದು ನಾವು ಯಾವ ಹಂತಕ್ಕೆ ತಲುಪಿದ್ದೇವೆ ಎಂದು ನೋಡಿಕೊಂಡಾಗ, ನಮಗೆ ನಮ್ಮ ಹಿಂದಿನ ತಲೆಮಾರಿನವರು ಉಂಬಳಿಯಾಗಿ ಬಿಟ್ಟು ಹೋಗಿರುವ ಸಾಂಸ್ಕೃತಿಕ ಮೌಲ್ಯಗಳ ಅರಿವಾಗಬಹುದು.

ಮುದ್ದಕೆರೆಯನ್ನು ನಿಲ್ಲಿಸಬೇಕು, ಹೀಗಾಗಿ ಅದು ಬೇಡಿದ ಬಲ ನೀಡಬೇಕು. ಆದರೆ ಆ ಬಲಿ ಬೇರೆಯಾರೂ ಆಗಿರದೆ ತಾನು ಅನ್ನ ಉಂಡ ಮನೆಯ ಮಾಲಿಕನ ಏಕೈಕ ಪ್ರೀತಿಯ ಪುತ್ರಿ. ತನ್ನೊಡನೆ ಸಹೋದರಭಾವನೆ ಹೊಂದಿದವಳು. ಅವಳನ್ನು ಬಲಿಕೊಡು ಎಂದು ಹೇಗೆ ಕೇಳುವುದು ಆಗ ನೆರೆದವರ ಮುಂದೆ ಮುದ್ದನ ಮಾತನ್ನು ಕೇಳಿ:

*ಏನು ಹೇಳಲಿ ತಾತ ಮೌನವಾಯಿತು ಈಗ*
*ಹೀನವಾಗಿದೆ ಯನ್ನ ಮನಕೆ*
*ನಾನು ಹೇಳಿದ ಮಾತಿಗೆ ನಂಬುತೀಯೋ ಮುತ್ತಾ*
*ಹೀನ ಗುಣದವನ್ನೆನ್ನ ಬೇಡ*

ಆಗ ಒಳಗಿದ್ದ ಜಕ್ಕಪ್ಪಾಚಾರ್ಯರ ಮಗಳು ತನ್ನ ಸಹೋದರ ಬಂದಿರುವುದನ್ನು ಕಂಡು ಊಟಕ್ಕೆ ಕರೆಯುವ ದೃಶ್ಯ ಯಾರ ಕಣ್ಣಲ್ಲಿಯಾದರೂ ನೀರು ಬರುವಂತೆ ಮಾಡುತ್ತದೆ. ಇದು ಭಾರತೀಯ ಸಂಸ್ಕೃತಿಯ ಜೀವಾಳದ ಒಂದು ನೋಟ. ಅಣ್ಣತಂಗಿಯರ ಸಂವಾದ ಕರುಳು ಮಿಡಿಯುವಂತಿದೆ. ಅಣ್ಣನು ಬಲಿಗೆಂದೇ ಬಂದಿರುವೆನೆಂದು ಕೇಳಿ ತಂಗೀ ತಾನು ಬಲಿಯಾಗಲು ಸಿದ್ದ ಎಂದೇ ಹೇಳಿ ತ್ಯಾಗಮಯಿ ಜೀವನ ಬೀಗುತ್ತಾಳೆ. ಅವಳು ಒಪ್ಪಿದ ಮೇಲೆ ಜನರು ಜಯಘೋಷದಿಂದ ಅವಳನ್ನು ಬಂಗಾರದ ಪಲ್ಲಕ್ಕಿಯಲ್ಲಿ ಮೆರವಣಿಗೆಯ ಮೂಲಕ ಕರೆ ತರುವ ಚಿತ್ರ ಕಣ್ಣಿಗೆ ಕಟ್ಟುವಂತದ್ದಾಗಿದೆ.

ಜಾನಪದ ಜೀವಾಳವನ್ನೇ ಈ ಕೆಳಗಿನ ಪದ್ಯ ಎತ್ತಿ ತೋರಿಸುತ್ತದೆ.

*ಆಹುತಿ ಕೊಟ್ಟರೆ ದೇವತೆಗಳಾಗುವರು*
*ಸಣ್ಣಕೋಡಿಗೆ ಬಾರಿಕೆರೆ ವರವುದು ಚೆಲ್ಲಮ್ಮ*
*ನಿಜ ಮಡಿವಾಳರ ಮಗಳ ಚೆನ್ನಮ್ಮ ನಿಜವಾಗಿ ಸಣ್ಣ ತುಂಬಿನಲಿ*
*ಬಾಲ ಬ್ಯಾಡರ ಮಗಳೂ ಸೂಲ ಹಾಕಿದರು ಸೂಲದರಾಮಯ್ಯರೆಂದು*

*ಗೊಲ್ಲರ ಕುವರಿ ಬಲ್ಲಿದಾತಾಯೆಂದು ಗೊಲ್ಲ ತ್ಯಾಮಂದು ಅಲ್ಲಿಡಲು*
*ನೀರಿನ ನದಿಯೆಂದು ನಾರಿ ಮಾದಿಗ ಮಗಳನಾಂ ವರ್ಮವ್ವಯಂದತಲೂ*
*ಲಿಂಗವಾಳರ ಮಗಳು ಹಿಂಗ್ದಾದಿರೇ ತುಂಬಿನೋಳ್ ಗಂಗಾಂಬೆಯನೇಮಿಸಿದಾ*
*ಸೋಸಿದ ಚೆನ್ನ ದಂತಿರುವಬ್ಬ ಬ್ರಾಹ್ಮಣರೂ, ಬಾನಿಗಂಗಳ ಕಟ್ಟುವರೂ ಘಾಸಿಯಾಗಿದೆ*
*ಹಿರೇಕೋಡಿವೊಳಿಟ್ಟರು, ಬಾಸಿಂಗ ರಾಯನೆಂದೆನಿಸಿ.*

ಹೀಗೆ ಬಲಿ ಆಹುತಿ ನೀಡಿ ಮದಗದೆಡಿಗೆ ಬರಲು ಮದಗವು ಏಳು ವರ್ಷದ ಬ್ರಾಹ್ಮಣ ಬಾಲಕನ್ಯೆಯನ್ನು ಆಹುತಿಯಾಗಿ ಬೇಡಿತು.

ವಡ್ಡರಿಗೆ ಕೂಲಿ ಕೊಡುವ ವರ್ಣನೆ ಯಾರನ್ನಾದರೂ ಚಕಿತಗೊಳಿಸುತ್ತದೆ. ನಾವು ಕರೆಯ ಕೆರೆಯ ಕಟ್ಟುತ್ತೇವೆ ಆದರೆ ನಮಗೆ ಕೊಡುವ ಕೂಲಿ ಏನು ಎಂದಾಗ ಮುದ್ದನು ಹೀಗೆ ಹೇಳುತ್ತಾನೆ.

*ಹಿರಿಯರಿಗೆಲ್ಲಾ ಧರಣಾವಕೊಡುವೆ*
*ಕಿರಿಯರಿಗೆಲ್ಲಾ ಚೌಲದುಗುಲವ ಕೊಡುವೆ*
*ವರಗರ್ಭಿಣಿಯರಿಗೆ ವರಹವ ಕೊಡುವೆ ಎಂದೇ ಸಾರಿದ.*

ಹೀಗೆ ಹಲವಾರು ಕುತೂಹಲಕಾರಿ ವಿಷಯಗಳಿಂದ ಈ ಸಾಂಗತ್ಯ ಕೂಡಿದೆ. ಇದರ ಬಗೆಗೆ ಹೆಚ್ಚು ಬರೆದಲ್ಲಿ ಓದುಗರ ಕುತೂಹಲಕ್ಕೆ ಭಂಗವಾಗಬಹುದು. ಒಟ್ಟಾರೆ ಇದೊಂದು ಉತ್ತಮ ಸಾಂಗತ್ಯ. ಓದುಗರಿಕೆ ಇಂಪಾಗಿರಲಿ ಎಂದೇ ವಿವಿಧ ರಾಗಗಳನ್ನೂ ಅದರ ಧಾಟಿಗಳನ್ನು ಇದರ ಕತೃವು ವಿವರಿಸಿದ್ದಾನೆ. ಹಾಡಿದಲ್ಲಿ ಇದರ ಸ್ವಾರಸ್ಯ ಇನ್ನೂ ಅಧಿಕ. ನಾನು ಕವಿಯಲ್ಲ ಕಾದಂಬರಿಕಾರನೂ ಅಲ್ಲ ಆದರೆ ಪುರಾತನ ಕಾಲದ ಜನ - ಜೀವನದಲ್ಲಿ ಅಧಿಕ ಆಸಕ್ತಿ ಹೊಂದಿರುವನು. ಹೀಗಾಗಿ ಈ ಸಾಹಸಕ್ಕೆ ಕೈಹಾಕಿರುವೆ. ಆದುದರಿಂದ ನನ್ನ ಈ ಕಾರ್ಯದಲ್ಲಿ ಅನೇಕ ಲೋಪದೋಷಗಳಿರಬಹುದು. ಸಹೃದಯರು ಮನ್ನಿಸಬೇಕು.

ನನಗೆ ಇದನ್ನು ಪ್ರಕಾಶ ಪಡಿಸಲು ಆಸ್ಪದ ನೀಡಿದ ಅಂದಿನ ಕುಲಪತಿಗಳಾದ ಡಾ. ಎಂ. ಎಂ. ಕಲಬುರ್ಗಿಯವರಿಗೆ ನಾನು ಋಣಿಯಾಗಿದ್ದೇನೆ. ಅಲ್ಲದೆ ಇಂದಿನ ಕುಲಪತಿಗಳಾದ ಡಾ. ಎಚ್. ಜೆ. ಲಕ್ಕಪ್ಪಗೌಡರು ಆಸಕ್ತಿವಹಿಸಿ ಮುದ್ರಣಕ್ಕೆ ಅವಕಾಶ ಕಲ್ಪಿಸಿದ್ದಾರೆ. ಅವರ ಈ ಸಹೃದಯತೆಯನ್ನು ಸ್ಮರಿಸದೇ ಇರಲಾರೆ. ಈ ಸಾಂಗತ್ಯದ ಹಸ್ತಪ್ರತಿಯ ಸುಂದರ ಪ್ರತಿಯನ್ನು ಸಿದ್ಧಮಾಡಿ ಕೊಟ್ಟ ಬಿ.ಎಂ. ಶ್ರೀ ಪ್ರತಿಷ್ಠಾನದ ಶ್ರೀ ಹೆಚ್. ರಾಮಸ್ವಾಮಿ ಹಾಗೂ ಸಂಪಾದನೆ ಕಾರ್ಯದಲ್ಲಿ ಸೂಚನೆ ನೀಡಿ ಸಹಕರಿಸಿದ ಡಾ. ಗೀತಾಚಾರ್ಯರಿಗೆ, ಮುಖಮಟಕ್ಕೆ ಛಾಯಾಚಿತ್ರವನ್ನು ನೀಡಿದ ಶ್ರೀ ಶ್ರೀನಿವಾಸರಾವ್ ಅವರಿಗೆ ನನ್ನ ವಂದನೆಗಳು.

ಪ್ರಸಾರಾಂಗದ ಸಹಾಯಕ ನಿರ್ದೇಶಕರಾದ ಶ್ರೀ ಸುಜ್ಞಾನಮೂರ್ತಿಯವರನ್ನು ನಾನು ತುಂಬಾ ಕಾಡಿರುವೆ. ನನ್ನ ಕಾಡವನ್ನು ನಗುತ್ತಲೇ ಸಹಿಸಿ ಕರಡುಪ್ರತಿಯನ್ನು ಮುದ್ರಣದ ಹಂತದವರೆಗೂ ತರುವಲ್ಲಿ ನನಗೆ ಸಹಕರಿಸಿದ್ದಾರೆ. ಅವರ ಉಪಕಾರವನ್ನು ಸ್ಮರಿಸುವೆ.

ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾದ ಡಾ. ಹಿ. ಚಿ. ಬೋರಲಿಂಗಯ್ಯ ಅವರು ಇದನ್ನು ಅಚ್ಚುಕಟ್ಟಾಗಿ ಪ್ರಕಟಿಸಿದ್ದಾರೆ. ಅವರಿಗೆ ನಾನು ಋಣಿಯಾಗಿದ್ದೇನೆ. ಸಹೃದಯರು ಓದಿ ಪ್ರತಿಕ್ರಿಯೆಸಿದರೆ ನನ್ನ ಶ್ರಮ ಸಾರ್ಥಕ.

**ಪ್ರೊ. ಎಂ. ಧ್ರುವನಾರಾಯಣ**

# ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕದ ಏಕೀಕರಣ ಒಂದು ಮಹತ್ವ ಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ - ಕನ್ನಡಿಗ - ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದುದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ, ಕರ್ನಾಟಕದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತ್ವತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ : ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. ಕನ್ನಡದ್ದೇ ಮಾದರಿ' ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ.ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯಲ್ಲಿ ವಿಶ್ಲೇಷಿಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ: ಕನ್ನಡದ ಅರಿವಿನ ವಿಕೇಂದ್ರೀಕರಣವಾದ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಹತ್ತಾರು ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಓದುಗರಿಗೆ ಅರಿವನ್ನು ನೀಡಲು ಮಂಟಪಮಾಲೆ ಯಲ್ಲಿ ಕಿರುಪುಸ್ತಕಗಳನ್ನು ಪ್ರಕಟಿಸುತ್ತಿದೆ. 'ಕನ್ನಡದ ಕಥೆಗಾರ್ತಿ ಗೌರಮ್ಮ' ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದು ಕೊಟ್ಟಿರುವ ಡಾ. ಎಚ್. ನಾಗವೇಣಿ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಮಂಜುನಾಥ ಬೇವಿನಕಟ್ಟಿ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನ ಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

**ಡಾ. ಎ. ಮುರಿಗೆಪ್ಪ**
ಕುಲಪತಿ

# ಕನ್ನಡದ ಕಥೆಗಾರ್ತಿ ಗೌರಮ್ಮ (೧)

**ಪ್ರಸ್ತಾವನೆ**

ವಸಾಹಾತುಶಾಹಿ ಸಂದರ್ಭದಲ್ಲಿ ಆಂಗ್ಲರ ಆಧುನಿಕ ವಿಚಾರಗಳು ಮತ್ತು ವೈಚಾರಿಕ ದೃಷ್ಟಿಕೋನಗಳು, ಭಾರತೀಯ ಸಮಾಜವು ಕಟ್ಟಿಕೊಂಡಿದ್ದ ಪರಂಪರೆಯ ಪರಿಕಲ್ಪನೆಯೊಂದಿಗೆ ಮುಖಾಮುಖಿಯಾದ ಪರಿಣಾಮ ನಮ್ಮ ಶ್ರೇಣಿಕೃತ - ಉಳಿಗಮಾನ್ಯ ಸಮಾಜದೊಳಗೆ ಆಧುನಿಕ ಸಂಸ್ಕೃತಿಯ ಮಾರುತವೊಂದು ಬಲವಾಗಿ ಬೀಸತೊಡಗಿತ್ತು. ಅದರ ಪರಿಣಾಮವಾಗಿ, ಅದುವರೆಗೂ ರಾಜಪ್ರಭುತ್ವದ ನೆರಳಲ್ಲಿದ್ದು ಸನಾತನ ಪರಂಪರೆಯ ಬೇರುಗಳನ್ನ ಹಿಡಿದು ಜೀಕುತ್ತಾ ಭಾರತಾಂಬೆಗೆ ನಮ್ಮ ಸಾಹಿತ್ಯ ಸೇವೆಯನ್ನು ಸಲ್ಲಿಸುತ್ತಿದ್ದ, ಹಲವು ಹಳೆ ಮನಸ್ಸುಗಳ ನಡುವೆಯೇ ಆಧುನಿಕ ಸಮಾಜದ ಕನಸು ಕಾಣುವ ವಿಚಾರವಾದಿ ಸೃಜನಶೀಲ ವಲಯವೊಂದು ಹಟ್ಟಿಕೊಂಡಿತು.

ಈ ಸೃಜನಶೀಲ ವಿಚಾರವಾದಿ ವಲಯವು ಅಂದಿನ ಸಮಾಜ ವ್ಯವಸ್ಥೆಯ ಕೊಳಕುತನದಲ್ಲಿ ಹುದುಗಿ ಹೋಗಿದ್ದ ಬಾಲ್ಯವಿವಾಹ, ಬಹುಪತ್ನಿತ್ವ, ಜಾತಿಭೇದ, ವರ್ಗಭೇದ ಮೊದಲಾದ ಸಮಸ್ಯೆಗಳ ಬಗ್ಗೆ ಒಂದು ರೀತಿಯ ಪ್ರತಿಭಟನಾತ್ಮಕ ಧೋರಣೆಯನ್ನು ತನ್ನ ಸೃಜನಶೀಲ ಚೌಕಟ್ಟಿನಲ್ಲಿ ಬಳಸಿಕೊಳ್ಳತೊಡಗಿತು. ಹೀಗೆ ಇಪ್ಪತ್ತನೇ ಶತಮಾನದ ಆದಿಯ ದಶಕಗಳಲ್ಲಿ ಆಧುನಿಕ ಪರಿಸರಕ್ಕೆ ಪ್ರವೇಶ ಪಡೆದ ಆ ವಿಚಾರವಾದಿ ವಲಯದೊಳಗೆ ಮಂಡಿಸಲ್ಪಟ್ಟ ಆಧುನಿಕ ವಿಚಾರಗಳ ಸೃಜನಶೀಲತೆಯ ಬಳ್ಳಿ, ಪ್ರಾಚೀನ ಪರಂಪರೆಯ ಅಡ್ಡಬೇರುಗಳ ಮೇಲೆಯೇ ಹರಿದು ಚಿಗುರೊಡೆಯುತ್ತಾ ಸಾಗುತ್ತಾ…. ನವೋದಯ ಸಾಹಿತ್ಯವೆಂಬ ತೊರೆಯಾಗಿ ತನ್ನದೇ ಆದ ದಾರಿಯನ್ನು ಕ್ರಮಿಸಿಕೊಳ್ಳುತ್ತ ಮುನ್ನುಗ್ಗ ತೊಡಗಿತ್ತು.

ಇಂತಹ ಒಂದು ಸಂಧಿಕಾಲದಲ್ಲಿ ಈ ವಿಚಾರವಾದಿ ಬರಹಗಾರರು ತಮ್ಮ ಸಮಾಜದಲ್ಲಿದ್ದ ವರ್ಗಭೇದ ನೀತಿ, ಅಸ್ಪಶ್ಯತೆ, ಬಡತನ ಮುಂತಾದ ಸಮಸ್ಯೆಗಳಿಗಿಂತಲೂ ಮುಖ್ಯವಾಗಿ ಸ್ತ್ರೀ ಸಂಕುಲವನ್ನೇ ಮುರಿದು ಮುಕ್ಕುತ್ತಿದ್ದ ಲಿಂಗಭೇದ ನೀತಿಯ ವಿರುದ್ಧವಾಗಿ ಸೃಜನಶೀಲ ಹೋರಾಟಕ್ಕಿಳಿದಿದ್ದು ಗಮನಾರ್ಹವಾದ ಮಾನವೀಯ ಸಂಗತಿ. ಸ್ತ್ರೀ ಶಿಕ್ಷಣ, ವಿಧವಾ ವಿವಾಹ, ಬಾಲ್ಯ ವಿವಾಹ, ವಿಧವಾ ಕೇಶಮಂಡನ ಮುಂತಾದ ಸ್ತ್ರೀ ಸಮಸ್ಯೆಗಳ ನಿವಾರಣೆಯತ್ತಲೇ ನವೋದಯದ ಪುರುಷ ಸಾಹಿತಿಗಳು ತಮ್ಮ ಸೃಜನಶೀಲತೆಯನ್ನು ಕೇಂದ್ರಿಕರಿಸಿಕೊಂಡ ಸಂದರ್ಭದಲ್ಲೇ ಸಮಾಜದ ಕೆಲವು ವರ್ಗಗಳ ಮಹಿಳೆಯರಿಗೆ ಸಮಾಜದ ಸುಧಾರಣಾವಾದಿ ಪ್ರಜ್ಞೆಯಿಂದಲೋ ಅಥವಾ ಉದಾರವಾದಿ ಮನೋಧರ್ಮದಿಂದಲೋ ಏನೋ…. ಒಟ್ಟಿನಲ್ಲಿ ಶಿಕ್ಷಣಕ್ಕೆ ಅವಕಾಶದೊರೆತು ಅವರೊಳಗೆಯೂ ಮಹಿಳಾ ಸಂಕುಲದಲ್ಲಿ ಜಾಗೃತಿಯನ್ನು ಉಂಟು ಮಾಡಬೇಕೆನ್ನುವಂತಹ ಪ್ರೇರಣೆಯುಂಟಾಯ್ತು.

ಇಂತಹ ಅಪೂರ್ವ ಕಾಲಘಟ್ಟದಲ್ಲಿ ಪುರುಷಪ್ರಧಾನ ಸಮಾಜದಿಂದ ನಿರ್ಮಿತವಾದ ಸಾಂಪ್ರದಾಯಿಕ ಚೌಕಟ್ಟನ್ನು ಮೀರುವ ಮನಸ್ಥಿತಿಯುಳ್ಳ ಕೆಲವು ಮಹಿಳಾ ಬರಹಗಾರರು ಕಾಣಿಸಿಕೊಂಡರು. ಸ್ತ್ರೀಯರಿಗೆ ಅಕ್ಷರಾಭ್ಯಾಸವೇ ನಿಷಿದ್ಧ, ಸ್ತ್ರೀಯರು ಕತೆ

ಕಾದಂಬರಿಗಳನ್ನು ಓದುವುದೇ ಮಹಾಪರಾಧ ಎಂಬ ಮನೋಭಾವವಿದ್ದ ಸಾಂಪ್ರದಾಯಿಕ ಸಮಾಜದಲ್ಲಿ ಶ್ರೀಮತಿ ತಿರುಮಲಾಂಬ, ಆರ್ ಕಲ್ಯಾಣಮ್ಮ, ಕೊಡಗಿನ ಗೌರಮ್ಮ, ಶ್ಯಾಮಲಾದೇವಿ ಬೆಳಗಾಂವ್ ಕರ್, ಸರಸ್ವತೀದೇವಿ ರಾಜವಾಡೆ ಮುಂತಾದ ಸ್ತ್ರೀವಾದಿ ಪ್ರಜ್ಞೆಯುಳ್ಳ ಕತನಗಾರ್ತಿ ಕನ್ನಡ ನವೋದಯ ಸಾಹಿತ್ಯ ಲೋಕದ ಕ್ಷಿತಿಜದಲ್ಲಿ ಮೂಡಿ ಬಂದರು.

ಅಂದಿನ ಸಮಾಜದಲ್ಲಿ ಹಲವು ಸಾಮಾಜಿಕ ಸಮಸ್ಯೆಗಳ ಜತೆಗೆ ವಸಾಹತುಶಾಹಿ ವ್ಯವಸ್ಥೆಯ ಶೋಷಣೆಯನ್ನು ಕುರಿತು ಹಲವು ಬವಣೆಗಳು ಈ ಮಹಿಳಾ ಬರಹಗಾರರ ದಿವ್ಯ ಪ್ರಜ್ಞೆಗೆ ದಕ್ಕಿದ್ದರೂ, ಅವರು ಅವೆಲ್ಲವನ್ನೂ ನಿರ್ಲಕ್ಷಿಸಿ ಅತ್ಯಂತ ಮುಖ್ಯವಾದ ಸಮಸ್ಯೆ ಎಂದು ತಮ್ಮ ಬರಹಗಳಿಗೆ ಆಯ್ದುಯಕೊಂಡಿದ್ದು ಸ್ತ್ರೀಪರ ಕಾಳಜಿಯುಳ್ಳ ವಸ್ತುಗಳನ್ನು ಮಾತ್ರ ಇವರ ಬರಹಗಳೆಲ್ಲವೂ ವಿಶೇಷವಾಗಿ ಅಂದಿನ ಸಮಕಾಲೀನ ಸಮಾಜದಲ್ಲಿದ್ದ ಲಿಂಗಬೇಧನೀತಿ ಹಾಗೂ ಅದಕ್ಕೆ ಸಂಬಂಧಿಸಿದಂತೆ ಉದ್ಭವಿಸಿದ ಹಲವು ಸಾಮಾಜಿಕ ಸಮಸ್ಯೆಗಳನ್ನು ಕುರಿತದ್ದಾಗಿದ್ದವು.

ಬಾಲ್ಯವಿವಾಹ, ವಿಧವಾವಿವಾಹ, ಬಾಲ್ಯವೈಧವ್ಯ ಸಮಸ್ಯೆಯ ಜತೆಗೆ ವರದಕ್ಷಿಣೆ, ವಿಷಮಮದುವೆ ಇತ್ಯಾದಿ ಸ್ತ್ರೀಸಂಬಂಧಿ ಸಮಸ್ಯೆಗಳು ನವೋದಯ ಸಾಹಿತ್ಯದ ಮಹಿಳಾ ಕಥೆಗಾರ್ತಿಯರ ಪ್ರಜ್ಞೆಯೊಳಗೆ ಹುದುಗಿ ಕೂತ ಸಂವೇದನಾಪೂರ್ಣ ವಿಷಯಗಳಾಗಿದ್ದವು.

ಸ್ತ್ರೀ ಸಂಕುಲಕ್ಕೆ ಕಂಟವಾಗಿದ್ದ ಸ್ತ್ರೀ ಶಿಕ್ಷಣ ವಿರೋಧ, ವಿಧವಾ ವಿವಾಹ ವಿರೋಧ, ಬಾಲ್ಯವಿವಾಹ, ಬಾಲವೈಧವ್ಯ ಮುಂತಾದ ಮಾನವೀಯ ಸಮಸ್ಯೆಗಳಿಗೆ ನವೋದಯ ಕಾಲಘಟ್ಟದ ಆರಂಭದ ತಲೆಮಾರಿನ ಮಹಿಳೆಯರಾದ ನಂಜನಗೂಡು ತಿರುಮಲಾಂಬ, ಆರ್ ಕಲ್ಯಾಣಮ್ಮ ಹಾಗೂ ಕೊಡಗಿನ ಗೌರಮ್ಮನವರು ತಮ್ಮ ತಮ್ಮ ಬರಹಗಳ ಮೂಲಕ ತೀವ್ರ ಪ್ರತಿರೋಧ ಒಡ್ಡಿದ್ದರೂ ಮೂವರೂ ಆ ಸಮಸ್ಯೆಗಳನ್ನು ಕಂಡಿರುವ ದೃಷ್ಟಿಕೋನಗಳು ಮಾತ್ರ ವಿಭಿನ್ನವಾದುದು.

ಶ್ರೀಮತಿ ತಿರುಮಲಾಂಬಾ ಅವರು ೧೯೧೩ ರ ತಮ್ಮ 'ಸುಶೀಲೆ' ಕಾದಂಬರಿಯಲ್ಲಿ ಸುಶೀಲೆಯ ಪಾತ್ರದ ಮೂಲಕ ಸ್ತ್ರೀ ಶಿಕ್ಷಣವನ್ನು ಸಮರ್ಥಿಸುವ ಮತ್ತು ಪ್ರಚಾರ ಮಾಡುವ ಕಾರ್ಯವನ್ನು ಮಾಡಿದ್ದರು. ವಿಧವೆಯರ ಕೇಶತ್ವ, ವಿಧವಾವಿವಾಹ ಮೊದಲಾದ ವಿಷಯಗಳನ್ನು ಅಂದಿನ ಸನಾತನ ಪ್ರಜ್ಞೆಯನ್ನು ಹೊಂದಿದ್ದ ಸಮಾಜವು ವಿರೋಧಿಸಿದ್ದ ಸಂದರ್ಭದಲ್ಲೇ, 'ನಭಾ' ಕಾದಂಬರಿಯನ್ನು ಬರೆದ (೧೯೧೪) ತಿರುಮಲಾಂಬ ಅವರು ಅಂದಿನ ದಿನಗಳಲ್ಲಿ ವಿಧವೆಯರಿಗಿದ್ದ ಅಭದ್ರತೆ, ವಿಧವೆಯರಿಗೆ ಎದುರಾಗುತ್ತಿದ್ದ ಸಮಸ್ಯೆಗಳ ಚಿತ್ರಣವನ್ನು ಈ ಕೃತಿಯಲ್ಲಿ ವಾಸ್ತವವಾಗಿ ಹಿಡಿದುಕೊಡುವ ಮತ್ತು ಸಮಾಜದೆದುರು ಬಿಚ್ಚಿಡುವ ಪ್ರಯತ್ನವನ್ನು ತಮ್ಮ ಮಿತಿಯೊಳಗೆ ಮಾಡಿದ್ದರು. ಈಕಾದಂಬರಿಯಲ್ಲಿ, ಕಥಾನಾಯಕಿ ಬಾಲವಿಧವೆ ನಭಾಳ ಪಾತ್ರದ ಮೂಲಕವೇ ವಿಧವೆಯೊಬ್ಬಳು 'ಮರುವಿವಾಹವಾಗದೆ' ವೈಧವ್ಯವನ್ನು ಕಟ್ಟುನಿಟ್ಟಿನಿಂದ ಅನುಸರಿಸುತ್ತ ಸನಾತನ ಧರ್ಮವನ್ನು ಪಾಲಿಸಬೇಕೆನ್ನುವುದನ್ನು ಹೇಳಿಸುವುದು ತಿರುಮಲಾಂಬ ಅವರ ಯೋಚನಾಕ್ರಮ ಅಂದಿನ ಸಮಾಜದ ಸಾಂಪ್ರದಾಯಿಕ ನೆಲೆಗಿಂತ ಬೇರೆಯಾಗಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಸ್ವತಃ ಬಾಲವಿಧವೆಯಾಗಿದ್ದು, ಬಾಲವೈಧವ್ಯದ ಭೀಕರತೆಯನ್ನು ಬಲ್ಲಂತಹ ತಿರುಮಲಾಂಬ ಅವರೇ ಈ ವಿಚಾರದಲ್ಲಿ ಜೀವಪರ ಹಾಗೂ ಪ್ರಗತಿಪರವಾಗಿರದೇ ಇರುವುದು ಅವರೊಳಗಿನ ಪುರೋಗಾಮಿ ಪ್ರಜ್ಞೆಯನ್ನು ಪ್ರತಿಬಿಂಬಿಸುವಂತಿದೆ.

ತಿರುಮಲಾಂಬ ಅವರಲ್ಲಿ 'ವಿಧವಾವಿವಾಹ' ದ ಬಗ್ಗೆ ಸನಾತನ ಪ್ರಜ್ಞೆಯೊಂದು ಕೆಲಸ ಮಾಡಿದ್ದಾರೆ, ಅವರದ್ದೇ ಸಮಕಾಲೀನರಾಗಿದ್ದು ಸ್ವತಹ ಬಾಲವಿಧವೆಯಾಗಿದ್ದ ಅರ್. ಕಲ್ಯಾಣಮ್ಮನವರು ಆ ಸಮಸ್ಯೆಯನ್ನು ಕಂಡಿದ್ದೇ ವಿಭಿನ್ನ ದೃಷ್ಟಿಕೋನದಿಂದ.ಆರ್. ಕಲ್ಯಾಣಮ್ಮನವರು ತಮ್ಮ ಕಾದಂಬರಿ 'ನಿರ್ಭಾಗ್ಯ ವನಿತೆ' ಯಲ್ಲಿ ಕಥಾನಾಯಕಿ ಬಾಲವಿಧವೆ ಇಂದಿನರೆಗೆ 'ಆರ್ಯಾ ಸಮಾಜ'ದಲ್ಲಿ ಮರುವಿವಾಹ ಮಾಡಿಸುವ ಮೂಲಕ ಸನಾತನ ಸಂಪ್ರದಾಯಗಳ ಕಟ್ಟುಗಳ ಬಿಗಿಯನ್ನು ಸಡಿಲಿಸುವಂತೆ ಜೀವಪರ ಪ್ರಜ್ಞೆಯನ್ನು ತೋರಿದ್ದಾರಾದರೂ ಆರ್ಯಾ ಸಮಾಜದಲ್ಲಿ ಮರು ಮದುವೆ ಮಾಡಿಸುವ ಮೂಲಕ ಸನಾತನ ಮನಸ್ಸುಗಳಿಗೆ ಸ್ವಲ್ಪ ಸಮಾಧಾನ ತರಲು ಕಥಾನಾಯಕಿ ಪ್ರಯತ್ನಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

ಅದುವರೆಗೂ ಇವರಿಬ್ಬರು ನಿರ್ವಹಿಸಿದ್ದ ಆ ಕಾಲಘಟ್ಟದ ಸಾಮಾಜಿಕ ಸಮಸ್ಯೆಗಳಾದ ಬಾಲ್ಯವಿವಾಹ - ಬಾಲ್ಯವೈಧವ್ಯ - ವಿಧವಾವಿವಾಹ ಮುಂತಾದ ಕಥಾ ವಸ್ತುಗಳನ್ನು ಕಥೆಗಾರ್ತಿ ಕೊಡಗಿನ ಗೌರಮ್ಮನವರು ನಿರ್ವಹಿಸಿದ ರೀತಿಯೇ ಅತೀ

ಪ್ರಗತಿಪರವಾದದ್ದು. ಅವರ 'ಪುನರ್ವಿವಾಹ' ಎಂಬ ಸಣ್ಣ ಕಥೆಯಲ್ಲಿ ಕಥಾನಾಯಕಿ ಬಡ ಬಾಲವಿಧವೆಯ ರೂಪಕ್ಕೆ ತೀರಾ ಮೋಹಗೊಂಡು ನಡುಹರೆಯದ ಸಿರಿವಂತ ವಿಧುರನೊಬ್ಬ ಆಕೆ ಏರಿರುವ ವೈಧವ್ಯಪಟ್ಟದ ಅರಿವಿಲ್ಲದೆ, ಆಕೆಯ ಒಪ್ಪಿಗೆಯನ್ನೂ ನಿರೀಕ್ಷಿಸದೆ ಆಕೆಯನ್ನು ಮದುವೆಯಾಗಲು ಮುಂದಾಗುತ್ತಾನೆ. ಮದುವೆ ಇನ್ನೇನು ಹತ್ತಿರ ಬರುತ್ತಿದೆ ಎನ್ನುವಾಗ ಆ ಬಾಲವಿಧವೆ ಚೀಟಿಯ ಮುಖಾಂತರ ಆತನನ್ನು ಗುಟ್ಟಾಗಿ ಭೇಟಿಗೆ ಆಹ್ವಾನಿಸುತ್ತಾಳೆ. ಆಸಂದರ್ಭದಲ್ಲಿ ವಿಧುರನ ಜೊತೆಗೆ ತನ್ನ ವೈಧವ್ಯದ ಕತೆಯನ್ನು ಆಕೆ ಪ್ರಸ್ತಾಪಿಸುತ್ತಾಳೆ ತಾನು ಮೋಹಿಸಿದ ಸುಂದರಿ ಬಾಲವಿಧವೆ ಎಂದು ತಿಳಿದೊಡನೆ ದಿಕ್ಕೆಟ್ಟು ಕಂಗಾಲಾದ ವಿಧುರ ನೀನು ವಿಧವೆ ಎಂದು ತಿಳಿದಿದ್ದರೆ ನಿನ್ನ ಮುಖ ಸಹ ನೋಡುತ್ತಿರಲಿಲ್ಲ. ಸಮಾಜದಲ್ಲಿ ನಡೆಯದಿರುವ ಕಾರ್ಯವನ್ನು ನಡೆಸಿ ನಾನು ಪರರ ಹಾಸ್ಯಕ್ಕೆ ಈಡಾಗ ಬೇಕೇನು ಸಮಾಜದಲ್ಲಿ ಇದು ನಡೆದರೂ ಸಹ, ನಾನು ನನ್ನ ಪವಿತ್ರಕುಲವನ್ನು ವಿಧವಾವಿವಾಹದಿಂದ ಕಲುಷಿತ ಮಾಡುವುದಿಲ್ಲ. ಪ್ರತೀದಿನ ಬೆಳಗಾದೊಡನೆ ವಿಧವೆಯ ಕೆಟ್ಟಮುಖ ನೋಡುವ ಬಯಕೆ ನನಗಿಲ್ಲ ಎಂದು ವಿಧವೆಯನ್ನು ಮೂದಲಿಸುತ್ತಾನೆ. ಅಂದಿನ ಸಾಮಾಜಿಕ ಪರಿಸ್ಥಿತಿಯ ಚಿತ್ರಣ ಕಥಾಪಾತ್ರದ ವೈಯಕ್ತಿಕ ಅಭಿಪ್ರಾಯವಾಗಿ ಅಸಹಜವಾಗಿ ಹೊರಹೊಮ್ಮಿಯಾದರೂ ವಿಧುರನ ಬಿರುನುಡಿಗೆ 'ಬಾಲವಿಧವೆ' ತೋರಿದ ಉಗ್ರ ಪ್ರತಿಭಟನೆಯು ಪ್ರಗತಿಪರ ಚಿಂತಕಿ ಗೌರಮ್ಮನವರು ಬಯಸುತ್ತಿರುವ ಸಾಮಾಜಿಕ ಬದಲಾಣೆಯ ಅಬಿವ್ಯಕ್ತಿಯೂ ಹೌದು.

ವಿಧುರರಿಗೊಂದು ನೀತಿ, ವಿಧವೆಯರಿಗೊಂದು ನೀತಿಯಿರುವ ಅಂದಿನ ಸಮಾಜವನ್ನು ತೀಕ್ಷ್ಣವಾಗಿ ಟೀಕಿಸುವ ಕಥಾನಾಯಕಿ ಬಾಲವಿಧವೆ ಆ ವಿಧುರನತ್ತ ವ್ಯಂಗ್ಯದ ಮಾತುಗಳನ್ನು ಎಸೆಯುತ್ತಾ "ಏನಂದಿರಿ? ಬೆಳಗಾದೊಡನೆ ನಿಮಗೆ ವಿಧವೆಯ ಮುಖ ನೋಡುವ ಅಪೇಕ್ಷೆ ಇಲ್ಲವೆ? ನಿಮ್ಮಂತವರ ಮೋಹಕ್ಕೆ ಬಲಿಯಾಗಿ ಬುದ್ಧಿ ಬರುವ ಮೊದಲೇ ವಿಧವೆಯರಾಗಿರುವ ನನ್ನಂತಹ ಲಕ್ಷೋಪಲಕ್ಷ ಸಹೋದರಿಯರು ಎಂದಿನವರೆಗೆ ಸಮಾಜದ ಅನ್ಯಾಯಕ್ಕೆ ತುತ್ತಾಗುತ್ತಾರೋ ಅಂದಿನವರೆಗೆ ಈ ಹಿಂದೂ ಸಮಾಜದ ಉನ್ನತಿ ಆಗಲಾರದೆಂದು ತಿಳಿಯಿರಿ. ಈ ರೀತಿಯ ಅನ್ಯಾಯದಿಂದ ಎಷ್ಟು ಹಿಂದೂ ವಿಧವೆಯರು ನಿರ್ಲಜ್ಯತನದ ಜೀವನವನ್ನು ಅವಲಂಭಿಸಿದ್ದಾರೆ? ಎಷ್ಟು ವೇಶ್ಯೆಯರ ಸಂಖ್ಯೆಯು ಹೆಚ್ಚಾಗಿದೆ? ಎಷ್ಟು ಬಾಲಹತ್ಯೆ, ಭ್ರೂಣಹತ್ಯೆ ನಡೆಯುತ್ತದೆ ಗುತ್ತಿದೆಯೆ? ಇದಕ್ಕೆಲ್ಲ ಯಾರು ಕಾರಣರು? ಅಜ್ಞಾನಿಯಾದ ಚಿಕ್ಕ ಬಾಲೆಯೇ? ಶಾಸ್ತ್ರ ಶಾಸ್ತ್ರ ಎಂದು ಬಡಿದುಕೊಂಡು ಜಾತಿ ಕೆಡುತ್ತಸೆ ಎಂಬ ಹೆದರಿಕೆಯಿಂದ ಎಳೆಮಕ್ಕಳನ್ನು ಮುದುಕರ ಕೊರಳಿಗೆ ಕಟ್ಟುವ ತಂದೆ ತಾಯಿಗಳೆ ? ಅಥವ ನಿಮ್ಮಂತಹ ಕಾಮುಕರೆ ? ಅಲ್ಲ, ತಪ್ಪು ನಿಮ್ಮದಲ್ಲ. ಸಹಾಯಹೀನರಾದ ಚಿಕ್ಕ ಹುಡುಗಿಯರೇ ತಪ್ಪುಗಾರರು" ಎಂದು ವಿಧುರನನ್ನು ವ್ಯಂಗ್ಯವಾಗಿ ಮೂದಲಿಸುತ್ತ ಇಡೀ ಪುರುಷ ಸಮಾಜವನ್ನು ಖಂಡಿಸಿ ಪ್ರತಿಭಟಿಸುತ್ತಾಳೆ.ಬಾಲವಿಧವೆಯ ಪಾತ್ರವನ್ನು ಸ್ತ್ರೀವಾದಿ ಪ್ರಜ್ಞೆಯುಳ್ಳ ಕಥೆಗಾರ್ತಿ ಗೌರಮ್ಮನವರು ಆದುನಿಕ ಸ್ತ್ರೀಯ ಪ್ರತೀಕವಾಗಿ ಕರೆದಿದ್ದಾರೆ ಎಂಬುದು ಅತ್ಯಂತ ಸ್ಪಷ್ಟ.

ತಿರುಮಲಾಂಬ, ಕಲ್ಯಾಣಮ್ಮನವರ ನಡುವೆಯೇ ಬದುಕಿದ್ದ ಕೊಡಗಿನ ಕಥೆಗಾರ್ತಿ ಗೌರಮ್ಮನವರೊಳಗೆ ಬಂಡಾಯ ಪ್ರಜ್ಞೆ ಅವರಿಬ್ಬರಿಗಿಂತಲೂ ಅದೆಷ್ಟು ತೀವ್ರವಾಗಿತ್ತೆಂದರೆ ಅವರ "ಅಪರಾಧಿ ಯಾರು" ಎಂಬ ಕಥೆಯನ್ನು ಕಥಾನಾಯಕಿ ಶ್ರೀಮಂತ ಧಣಿಯಿಂದ ಅತ್ಯಾಚಾರಕ್ಕೊಳಗಾಗಿ ಹಿಂದೂ ಸಮಾಜದಿಂದಲೇ ಬಹಿಷ್ಕರಿಸಲ್ಪಟ್ಟು ಆತ್ಮಹತ್ಯೆಯ ಪ್ರಯತ್ನದಲ್ಲಿದ್ದಾಗ ಮುಸ್ಲಿಂ ಸಮುದಾಯದವರು ಆಕೆಯನ್ನು ರಕ್ಷಿಸಿ, ನೆಮ್ಮದಿಯ ನೆಲೆಯನ್ನು ಒದಗಿಸಿದಾಗ ಆಕೆ ಸ್ವಯಂಪ್ರೇರಿತಳಾಗಿ ತನ್ನನ್ನು ರಕ್ಷಿಸಿದ ಇಸ್ಲಾಂಧರ್ಮಕ್ಕೆ ಮತಾಂತರಗೊಳ್ಳುತ್ತಾಳೆ. ಇಲ್ಲಿ ಅಬಲೆ ಕಥಾನಾಯಕಿ ಹಿಂದೂ ಸಮಾಜ ನಡೆಸಿಕೊಂಡ ರೀತಿಯನ್ನು ಪ್ರತಿಭಟಿಸುವ ಕತೆಗಾರ್ತಿ ಗೌರಮ್ಮನವರು, ಆಕೆಯನ್ನು ಮುಸ್ಲಿಂ ಜನಾಂಗಕ್ಕೆ ಸೇರಿಸುವ ಮೂಲಕ ತೋರಿದ ಬಂಡಾಯ ಪ್ರಜ್ಞೆ ಆ ಕಾಲಘಟ್ಟಕ್ಕೆ ತೀರಾ ಅನನ್ಯವಾದುದು.

ಆ ಕಾಲದಲ್ಲೇ ಇಂತಹ ಅಪರೂಪದ ಬಂಡಾಯ ಪ್ರಜ್ಞೆಯನ್ನು ತನ್ನ ಬರಹ ಮತ್ತು ಬದುಕಲ್ಲಿ ಮೈಗೂಡಿಸಿಕೊಂಡಿದ್ದ ಕೊಡಗಿನ ಗೌರಮ್ಮನವರು ತನ್ನ ಸುತ್ತಲಿದ್ದ ಶ್ರೇಣಿಕೃತ ವ್ಯವಸ್ಥೆಯನ್ನು ಮೀರಿ ನಿಂತು ತಾನು ಕಂಡುಂಡ ಸಂವೇದಿಸಿದ ಜೀವನನುಭವಗಳ ಘಟನೆಗಳಿಗೆ ಕಥಾರೂಪ ಕೊಟ್ಟ ದಿಟ್ಟ ಸಂವೇದಾಶೀಲ ಕಥೆಗಾರ್ತಿಯು ಹೌದು.

**ಗೌರಮ್ಮನವರ ಬಾಲ್ಯ**

ಕನ್ನಡ ನವೋದಯ ಸಾಹಿತ್ಯ ಸಂಸ್ಕೃತಿ ಪರಂಪರೆಯಲ್ಲಿ ಬಂಡಾಯ ಮನೋಭಾವದ ಕಥೆಗಾರ್ತಿ ಎಂದೇ ಸೇರ್ಪಡೆಗೊಂಡ ಕೊಡಗಿನ ಗೌರಮ್ಮನವರು ಹುಟ್ಟಿದ್ದು ೦೫.೦೩.೧೯೧೨ ರಂದು, ಕೊಡಗಿನ ಮಡಿಕೇರಿಯಲ್ಲಿ. ಮಡಿಕೇರಿಯಲ್ಲಿ ವಕೀಲರಾಗಿದ್ದ ಎನ್. ಎಸ್. ರಾಮಯ್ಯನವರು ಗೌರಮ್ಮನವರ ತಂದೆ; ತಾಯಿ ನಂಜಕ್ಕನವರು.

ಗೌರಮ್ಮನವರ ಕಥನ ಪ್ರತಿಭೆ ಅರಳಿ ಫಲಕೊಟ್ಟಿದ್ದು ಶುಂಠಿಕೊಪ್ಪದ ಗುಂಡು ಕುಟ್ಟಿಯಲ್ಲಾದರೂ, ಅವರ ಬಾಲ್ಯವರಳಿದ್ದು ಮಾತ್ರ ಘಟ್ಟದ ಒಡಲಲ್ಲಿರುವ ಮಡಿಕೇರಿ ನಗರದಲ್ಲಿ. ಗೌರಮ್ಮನವರ ಪೂರ್ವಜರು ದಕ್ಷಿಣ ಕನ್ನಡದ ವಿಟ್ಲ ಸೀಮೆಯ ಹವ್ಯಕ ಬ್ರಾಹ್ಮಣರು. ಈ ಹವ್ಯಕ ಸಂತಾನದ ಕೊಂಬೆಯೊಂದು ಬದುಕುವ ದಾರಿ ಹುಡುಕುತ್ತ ಕೊಡಗಿಗೆ ವಲಸೆ ಬಂದು ಅಲ್ಲೇ ಬೇರಿಳಿಸಿಕೊಂಡಿದ್ದರಿಂದ ಮುಂದೆ ಆ ಕೊಂಬೆಯ 'ಚಿಗುರೆಲೆ' ಗೌರಮ್ಮನವರೂ ಕೊಡಗಿನವರಾದರು.

ಎನ್ ಎಸ್ ರಾಮಯ್ಯ - ನಂಜಕ್ಕ ದಂಪತಿಗಳಿಗೆ ಕೊನೆಯ ಮಗಳು ಗೌರಮ್ಮಳೆಂದರೆ ಬಲು ಪ್ರೀತಿ ಆಕೆ ಅವರ ಕಣ್ಣಮುತ್ತು. ಆಕೆ ಕೇಳಿದ್ದನ್ನಲ್ಲ ಇಲ್ಲವೆನ್ನಲಾಗದಷ್ಟು ಕೊಂಡಾಟ. ಆ ಕಾರಣಕ್ಕೆ ಗೌರಮ್ಮ ಬಲ್ಯದಲ್ಲೇ ಸ್ವಲ್ಪ ಹಠಮಾರಿಯೆ.

ಗೌರಮ್ಮನಿಗೆ ಆರು ವರ್ಷವಿದ್ದಾಗ ಅವರ ತಂದೆತಾಯಿಯರು ಕಾಶೀಯಾತ್ರೆಗೆ ಹೊರಟುನಿಂತಾಗ ಮಗು ಗೌರಮ್ಮನ ಹಠಕ್ಕೆ ಮಣಿದು ಆಕೆಯನ್ನೂ ಅವರು ತಮ್ಮೊಡನೆ ಯಾತ್ರೆಗೆ ಕರೆದೊಯುತ್ತಾರೆ. ಆ ಯಾತ್ರಯ ಸಂದರ್ಭದಲ್ಲಿ ಗೌರಮ್ಮನವರ ತಾಯಿಯವರು ತೀವ್ರ ಅನಾರೋಗ್ಯ ಪೀಡಿತರಾಗಿ ಯಾತ್ರೆಯ ಮಧ್ಯೆಯೇ ತೀರಿಕೊಳ್ಳುತ್ತಾರೆ. ತೀವ್ರ ಆತಂಕ - ದುಃಖದ ಮಡುವಲ್ಲಿದ್ದ ಅಪ್ಪನ ಕೈಹಿಡಿದು ಹೊರಟ ಬಾಲೆ ಗೌರಮ್ಮ ಆ ಕಾಶೀ ಪಟ್ಟಣದ ಜನಗದ್ದಲದಲ್ಲಿ ಇದ್ದಕ್ಕಿದ್ದಂತೆ ಅಪ್ಪನ ಬೆರಳಕೊಂಡಿ ಕಳಚಿಕೊಂಡು ಕಣ್ಮರೆಯಾಗುತ್ತರೆ. ದುಃಖಿತ ತಂದೆಯ ತೀವ್ರ ಹುಡುಕಾಟದ ಫಲವಾಗಿ ಮಗು ಕಾಶೀ ಪಟ್ಟಣದ ಪೊಲೀಸ ಠಾಣೆಯಲ್ಲಿ ಪತ್ತೆಯಾಗುತ್ತದೆ.

ಹಾಗೆ ಕಾಶೀ ಪಟ್ಟಣದಲ್ಲಿ "ಮರುಜನ್ಮ" ಪಡೆದ ಬಾಲೆ ಗೌರಮ್ಮಳಿಗೆ ಕೆಲವೇ ತಿಂಗಳಲ್ಲಿ ಶಾಲೆಯ ಮಡಟ್ಟಿಲು ಹತ್ತುವ ಕಾಲ ಕೂಡಿ ಬರುತ್ತದೆ. ಶಾಲೆಯ ಮೆಟ್ಟುಕಲ್ಲು ಏರುವ ಹಂತದಲ್ಲಂತೂ ಗೌರಮ್ಮ "ತಾನೂ ಏರಿದರೆ, ಕಾನ್ವೆಂಟ್ ಶಾಲೆಯ ಮೆಟ್ಟಿಲನ್ನೇ ಏರುವುದು" ಎಂದು ಹಠ ಹಿಡಿದು ಕೂತಾಗ ಅಪ್ಪಯ್ಯ ಮಗಳನ್ನು ಮಡಿಕೇರಿಯ ಕಾನ್ವೆಂಟಿಗೆ ಕಳುಹಿಸುವ ವ್ಯವಸ್ಥೆಯನ್ನೇ ಮಾಡಿದ್ದರು. ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ ೧ ಪಾರಂ ಮುಗಿಸುವ ಹೊತ್ತಿಗಾಗಲೇ, ಗೌರಮ್ಮನವರು ಆಧುನಿಕ ಆಲೋಚನೆಯ ಆಕರ್ಷಕ ತೆಳುಕಾಯದ ಹುಡುಗಿಯಾಗಿದ್ದು..... ಆ ಹೊತ್ತಿಗಾಗಲೇ ಅವರು ಹಸೆಮಣೆ ಏರಿಯಾಗಿತ್ತು.

**ಬಾಲ್ಯದ ಅರಳುಕಾಲ**

ಗೌರಮ್ಮನವರು ಹೈಸ್ಕೂಲಿನ ಮೆಟ್ಟಿಲೇರಿ ವರ್ಷ ಕಳೆಯುವುದರೊಳಗೆ ಅಪ್ಪ ಮನೆಯಲ್ಲಿ ಆಕೆಯ ಮದುವೆಯ ಪ್ರಸ್ತಾಪವನ್ನು ಎತ್ತಿದಾಗ... ಮೈತುಂಬ ಆತ್ಮವಿಶ್ವಾಸ ಹಾಗೂ ಆರೋಗ್ಯಕರ ಹಠವನ್ನು ತುಂಬಿಸಿಕೊಂಡಿದ್ದ ಗೌರಮ್ಮನವರು ದಿಟ್ಟವಾಗಿಯೇ ಅಪ್ಪನಿಗೆ ಅನ್ನುತ್ತಾರೆ - 'ಮದುವೆ ಮಾಡಿದರೆ ನಾನಂತೂ ಮೆಟ್ರಿಕ್ ಮುಗಿವವರೆಗೆ ಗಂಡನ ಮನೆಗೆ ಹೋಗುವವಳಲ್ಲ; ನಿನ್ನೊಟ್ಟಿಗೇ ಇರುವವಳು; ಗಂಡ ಬೇಕಿದ್ದರೆ ಇಲ್ಲೇ ಬಂದಿರಲಿ..... ' ಎಂದು.

ಗೌರಮ್ಮನಿಗೆ ಹದಿಮೂರರ ವಯಸ್ಸಿನಲ್ಲೇ ಅವರಿಗಿಂತ ವಯಸ್ಸಿನಲ್ಲೇ ಅವರಿಗಿಂತ ಏಳು ವರ್ಷ ಹಿರಯವರಾದ ಹಾಗೂ ಅವರ ತಂದೆಗೆ ಅತ್ಯಂತ ನಿಕಟವರ್ತಿ ಕುಟುಂಬದವರಾದ ಬಿ.ಟಿ.ಗೋಪಾಲಕೃಷ್ಣ ಎಂಬವರ ಜತೆ ವಿವಾಹವಾಗುತ್ತದೆ. ಮದುವೆಯ ಪ್ರಸ್ತಾಪದ ಸಂದರ್ಭದಲ್ಲಿ ಮಡಿಕೇರಿಯ ಸರಕಾರಿ ಟ್ರಡಜರಿನಲ್ಲಿ ಶರಾಫ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಗೋಪಾಲಕೃಷ್ಣಯ್ಯನವರು ಕೆಲವು 'ಲೌಕಿಕ ಕೌಶಲ್ಯದ' ಕೊರತೆಯಿಂದಾಗಿ - ಹಿರಿಯರ ಸಲಹೆಯಂತೆ ಆ ಸರಕಾರಿ ಕೆಲಸವನ್ನು ತೊರೆದು, ತನ್ನ ಸೋದರ ಸಂಬಂಧಿಯ (ತಾಯಿಯ ಅಕ್ಕನ ಮಗಳ ಗಂಡ ಗುಂಡುಕುಟ್ಟಿ ಮಂಜುನಾಥಯ್ಯನವರು) ಹರದೂರು ಎಸ್ಟೇಟಿಗೆ ಮ್ಯಾನೇಜರ್ ಆಗಿ ಸೇರಿ ಹೊಸ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಾರೆ.

ಗಂಡನ ಉದಾರತನ ಹಾಗೂ ತಮ್ಮಲ್ಲಿರುವ ಹಠದಿಂದಾಗಿ... ಮೆಟ್ರಿಕ್ ಮುಗಿಸುವವರೆಗೂ ಅಪ್ಪನ ಮನೆ ಬಿಟ್ಟು ಮಿಸುಕಾಡದ ಗೌರಮ್ಮನವರು, ತಮ್ಮ ಶಿಕ್ಷಣದ ಜತೆ ಜತೆಗೇ ತನ್ನ ದಾಂಪತ್ಯ ಜೀವನದ ದಾರಿಯನ್ನೂ ಕಹಿಗೊಳಿಸದೆ ಅದನ್ನು ಸುಗಮವಾಗಿಯೇ ಮುಂದುವರೆಸಿದ ಸೂಕ್ಷ್ಮಜ್ಞೆಯೂ ಹೌದು.

ಹೆಣ್ಣು ಮಕ್ಕಳಿಗೆ ಅಕ್ಷರಾಭ್ಯಾಸವೇ ಅನಗತ್ಯ. ಹೇಗಿದ್ದರೂ ಅವರ ಬದುಕು - ಜಾಣ್ಮೆ ಅಡುಗೆ ಮನೆಗಷ್ಟೇ ಸೀಮಿತ ಎಂಬ ಮನಸ್ಥಿತಿಯ ಸಮಾಜವ್ಯವಸ್ಥೆ ಇದ್ದ ಆ ಕಾಲದಲ್ಲಿ, ಗೌರಮ್ಮನವರು ಮೆಟ್ರಿಕ್ ಪಾಸಾಗಿ ಈಜು ಕಲಿತು, ಟೆನಿಸ್ ಆಟದಲ್ಲಿ ಪ್ರವೀಣೆ ಕೂಡಾ ಅಗಿದ್ದರು. ಗೌರಮ್ಮನವರ ಹದಿಹರೆಯದ ದಿನಗಳು ಅವರ ಸೃಜನಶೀಲ ಬದುಕಿಗೆ ಸ್ವಾಗತದ ತೋರಣ ಕಟ್ಟುವಂತೆ ಅತ್ಯಂತ ಸೃಜನಾತ್ಮಕ ಚಟುವಟಿಕೆಯಲ್ಲೇ ಉರುಳತೊಡಗಿದ್ದವು.

ಬಾಲ್ಯದಿಂದಲೇ ತಮ್ಮ ಕೌಟುಂಬಿಕ ಪರಿಸರದಲ್ಲಿ ಕಾಲಕಾಲಕ್ಕೆ ತಕ್ಕಂತೆ ನಡೆಯುತ್ತಿದ್ದ ತಾಳಮದ್ದಲೆ ಹಾಗೂ ಯಕ್ಷಗಾನ ಬಯಲಾಟಗಳೊಳಗಿನ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಸಮೃದ್ಧಿಗೆ ಮಾರುಹೋದ ಗೌರಮ್ಮನವರು, ಆ ಕಲೆಗಳ ಪ್ರಭಾವದಿಂದ ತಪ್ಪಿಸಿಕೊಳ್ಳಲಾಗದೆ ತಮ್ಮನ್ನೂ ಆ ಸಾಂಸ್ಕೃತಿಕ ಕಲೆಗಳಲ್ಲಿ ತೊಡಗಿಸಿಕೊಂಡದ್ದು ಆ ಕಾಲದಲ್ಲದು ವಿಶೇಷವೇ ಸರಿ. ಮಹಿಳೆಯರಿಗೆಂದಿಗೂ ಸಲ್ಲದಂತಿದ್ದ ಆ ಸಾಂಸ್ಕೃತಿಕ ಜಗತ್ತಿಗೆ ತಮ್ಮನ್ನು ತೆರೆದುಕೊಂಡ ಗೌರಮ್ಮನವರು ನಿಧಾನಕ್ಕೆ ಸಾಹಿತ್ಯ ವಲಯದ ಚರ್ಚೆಗೂ ತಮ್ಮ ಸಂವೇದನೆಯನ್ನು ಮೀಸಲಿಡತೊಡಗಿದ್ದರು. ಹೈಸ್ಕೂಲ್ ಮೆಟ್ಟಿಲೇರುವ ಮೊದಲೇ ಕನ್ನಡದ ಕಾದಂಬರಿಗಳನ್ನು ಓದುವ ಹವ್ಯಾಸಗಳನ್ನು ಬೆಳೆಸಿಕೊಂಡಿದ್ದ ಗೌರಮ್ಮನವರಿಗೆ ಗಳಗನಾಥರ ಕಾದಂಬರಿಗಳೆಂದರೆ ತುಂಬ ಇಷ್ಟ.

ತಮ್ಮ ಹೈಸ್ಕೂಲ್ ವಿದ್ಯಾಭ್ಯಾಸ ಮುಗಿದೊಡನೆ ಅಪ್ಪನ ಮನೆಯಿಂದ ಹರದೂರಿನ ಗುಂಡುಕುಟ್ಟಿಯಲ್ಲಿದ್ದ ಗಂಡನ ಮನೆ ದಾರಿ ಹಿಡಿದು ಗೌರಮ್ಮನವರು, ಹರದೂರಿನಂತಹ ಹಳ್ಳಿಯಲ್ಲಿದ್ದೂ ವಿಶಾಲವಾದ ಹೊರಜಗತ್ತಿಗೆ ತಮ್ಮ ಹೃದಯವನ್ನು ನಿಧಾನವಾಗಿ ತೆರೆದುಕೊಳ್ಳುತ್ತ, ತಮ್ಮ ಪುಟ್ಟ ಬರಹಗಳಲ್ಲಿ ಜಾತ್ಯಾತೀತ ಮನೋಧರ್ಮದ ತೀರಾ ಆರೋಗ್ಯಕರ ನಿಲುವಿನ ವಿಚಾರಗಳನ್ನು ಅಭಿವ್ಯಕ್ತಿಸುತ್ತಲೇ ನೇರ, ನಿರ್ಮಲ, ನಿರ್ಭಯವುಳ್ಳ ಆಧುನಿಕ ಮನೋಭಾವದ ಬರಹಗಾರ್ತಿಯಾಗಿ ರೂಪುಗೊಳ್ಳತೊಡಗಿದರು.

ಸ್ತ್ರೀಯರಿಗೆ ಓದು ಅಗತ್ಯವಿಲ್ಲ, ಎಂಬ ಮನೋಭಾವವಿದ್ದ ಸಾಂಪ್ರದಾಯಿಕ ಸಮಾಜದಲ್ಲಿ ಸ್ವತಃ ಅಂದಿನ ವೈಧವ್ಯದ ಬೀಕರತೆಯನ್ನು ಯಥೇಚ್ಛವಾಗಿ ಉಂಡು, ಸ್ತ್ರೀವಾದಿ ಪ್ರಜ್ಞೆಯುಳ್ಳ ಬರಹಗಾರ್ತಿಯರಾಗಿ ರೂಪುಗೊಂಡು ಶ್ರೀಮತಿ ತಿರುಮಲಾಂಬ ಮತ್ತು ಆರ್ ಕಲ್ಯಾಣಮ್ಮನವರು ಕನ್ನಡದ ನವೋದಯ ಸಾಹಿತ್ಯಮಾಲೆಗಳಿಗೆ ತಮ್ಮ ಸಾಹಿತ್ಯಕೃತಿಗಳನ್ನು ಪೋಣಿಸುತ್ತಿದ್ದಾಗ... ಈ ಗೌರಮ್ಮಳಿನ್ನೂ ಎಳೆಬಾಲೆ!

ಶ್ರೀಮತಿ ತಿರುಮಲಾಂಬ ಮತ್ತು ಆರ್ ಕಲ್ಯಾಣಮ್ಮನವರು ತಮ್ಮ ಬರಹಗಳ ಮೂಲಕ ಜಡ್ಡುಗಟ್ಟಿದ ಸಾಂಪ್ರದಾಯಿಕ ಸಮಾಜ ವ್ಯವಸ್ಥೆಗೆ ತೀವ್ರ ಪ್ರತಿರೋಧ ಒಡ್ಡಿದ್ದರು. ಆದರೆ ಕಥಾವಸ್ತು ನಿರ್ವಹಣೆಯ ಕೆಲವು ಸಂದರ್ಭದಲ್ಲಂತು ಅವರಿಬ್ಬರಲ್ಲೂ ಸಾಂಪ್ರದಾಯಿಕವಾಗಿ ಹರಿದುಬಂದ ಸನಾತನ ಪ್ರಜ್ಞೆಯೊಂದು ಸೂಕ್ಷ್ಮವಾಗಿ ಕಾರ್ಯ ನಿರ್ವಹಿಸುತ್ತಿದುದ್ದನ್ನು ಸೃಜನಶೀಲೆ ಗೌರಮ್ಮನವರು ಗಮನಿಸಿದ್ದರು. ಈ ಕಾರಣಕ್ಕಾಗಿ ಅವರು ತಮ್ಮ ಬರವಣಿಗೆಯ ಸಂದರ್ಭದಲ್ಲಿ, ಇಂತಹ ಸ್ತ್ರೀ ಕೇಂದ್ರಿತ ಸಮಸ್ಯೆಗಳನ್ನೇ ಕಥಾವಸ್ತುಗಳನ್ನಾಗಿ ಆಯ್ಕೆ ಮಾಡಿಕೊಂಡರೂ ಆ ಸಮಸ್ಯೆಗಳನ್ನು ಅವರು ವಿಭಿನ್ನ ದೃಷ್ಟಿಕೋನದಿಂದ ಕಂಡದ್ದಲ್ಲದೆ ಅದನ್ನು ನಿರ್ವಹಿಸಿದ ರೀತಿಯಂತೂ ಅವರಿಬ್ಬರಿಗಿಂತಲೂ ತುಂಬ ಪ್ರಗತಿಪರವಾಗಿತ್ತು. ಗೌರಮ್ಮನವರು ತಮ್ಮ ಕಥೆಗಳಲ್ಲಿ ಸಂಪ್ರದಾಯವು ಧರ್ಮದ ಹೆಸರಿನಲ್ಲಿ ಹೆಣ್ಣುಸಂಕುಲದ ಮೇಲೆ ತೋರುತ್ತಿದ್ದ ಕುಟಿಲತೆಯನ್ನು ಚಿತ್ರಿಸುತ್ತಲೇ, ಅದನ್ನು ಕಥಾಪಾತ್ರಗಳ ಮೂಲಕ ಪ್ರಶ್ನಿಸುತ್ತ ಸನಾತನ ಸಂಪ್ರದಾಯದ ಕಟ್ಟುಗಳ ಬಿಗಿಯನ್ನು ಸಡಲಿಸುವಂತಹ ಹಾಗೂ ಬಂಡಾಯ ಪ್ರಜ್ಞೆಯನ್ನು ತೋರುವಂತಹ ಕಥಾವಸ್ತು - ಪಾತ್ರಗಳನ್ನು ನಿರ್ವಹಿಸಿದ್ದಂತೂ ಆ ಕಾಲಘಟ್ಟಕ್ಕೆ ತೀರಾ ಅನನ್ಯವಾದುದಾಗಿತ್ತು.

**ಸಾಹಿತ್ಯ – ಸಾಂಸ್ಕೃತಿಕ ಲೋಕದಲ್ಲಿ ಗೌರಮ್ಮ**

ಹದಿಹರೆಯದ ಗೌರಮ್ಮನವರು ಸಾಹಿತ್ಯ, ಸಂಸ್ಕೃತಿ, ಜೀವನಪ್ರೀತಿ ತುಂಬಿದ್ದ ಸರಳ ಬದುಕಿಗಾಗಿ ಹಾತೊರೆಯುತ್ತ ಹೊಸ ಬಗೆಯ ಆರೋಗ್ಯಕರ ಚಿಂತನೆಯ ದಾರಿಯಲ್ಲಿ ಸಾಗುತ್ತಿರುವಾಗಲೇ ದೇಶದೆಲ್ಲೆಡೆ ಸ್ವಾತಂತ್ರ ಹೋರಾಟದ ಬಿಸಿ ಏರತೊಡಗಿತ್ತು. ಗೌರಮ್ಮನವರು ಓದುತ್ತಿದ್ದ 'ಕೊಡಗು', 'ಕರ್ಮವೀರ', 'ಸತ್ಯಶೋಧನೆ', 'ಗಳಗನಾಥ ಕಾದಂಬರಿಗಳು' ಹಾಗೂ ಸುಬೋಧ ಕುಸುಮಾಂಜಲಿಯು ಪ್ರಕಟಿಸಿದ್ದ "ದೇಶಭಕ್ತರ ಚರಿತ್ರೆಗಳು", 'ಕಾನಾಡ ಧುರೀಣ' ಮುಂತಾದ ಬರಹಗಳ ಪ್ರಭಾವದಿಂದ, ಅವರೊಳಗೆ ರಾಷ್ಟ್ರೀಯ ವಿಚಾರಗಳ ಬಗ್ಗೆಯೂ ಕಾಳಜಿಯುಂಟಾಗಿ ತಾಯಿನಾಡಿನ ಸ್ವಾತಂತ್ರ ಚಳುವಳಿಯತ್ತ ಅವರು ಆಕರ್ಷಿತರಾದರು. ಮಹಾತ್ಮಾಗಾಂಧಿ ಆರಂಭಿಸಿದ ಕರ ನಿರಾಕರಣ ಚಳುವಲಿ, ಖಾದಿ ಚಳುವಲಿಯ ಬಗ್ಗೆ ತೀರಾ ಒಲವುಳ್ಳವರಾಗಿದ್ದ ಗೌರಮ್ಮನವರು ಖಾದಿ ಬಟ್ಟೆಯ ಪ್ರಿಯರಾದರು. ತಮ್ಮ ೧೯ನೇ ವಯಸ್ಸಿನಿಂದಲೇ ಖಾದಿ ಸೀರೆಯನ್ನು ಉಡಲಾರಂಭಿಸಿದ ಎಳೆತರುಣಿ ಗೌರಮ್ಮನವರು ತಮ್ಮ ೨೨ ನೇ ವಯಸ್ಸಿನಲ್ಲಿ ಗಾಂಧೀಜಿಯವರ ಮನಸ್ಸನ್ನು ಗೆದ್ದ ಸಂಗತಿ ಕೊಡಗಿನ ಸ್ವಾತಂತ್ರ ಹೋರಾಟದ ಇತಿಹಾಸದಲ್ಲಿ ದಾಖಲಾಗುವಂತಹದ್ದು….

೧೯೩೪ ರ ಫೆಬ್ರವರಿ ತಿಂಗಳ ಕೊನೆಯಲ್ಲಿ ಹರಿಜನಕಲ್ಯಾಣ ನಿಧಿ ಸಂಗ್ರಹಣೆಗಾಗಿ ಗಾಂದೀಜಿಯವರು ಕರ್ನಾಟಕದಲ್ಲಿ ೧೨ ದಿನಗಳ ಪ್ರವಾಸವನ್ನು ಕೈಗೊಂಡು, ಫೆಬ್ರವರಿ ೨೨ ರಂದು ಕೊಡುಗು ಜಿಲ್ಲೆಗೆ ಬಂದು ಅಲ್ಲಿ ಎರಡು ದಿನಗಳ ವಾಸ್ತವ್ಯವನ್ನು ಹೂಡುತ್ತಾರೆ. ಈ ಸಂದರ್ಭದಲ್ಲಿ ಊರಿನ ಸ್ವಾಗತ ಮಂಡಳಿಯವರ ಪೂರ್ವ ನಿರ್ಧಾರದಂತೆ, ಗಾಂಧೀಜಿಯವರು ಒಂದು ಸಂಜೆಗೆ ಶುಂಠಿಕೊಪ್ಪದ ಗುಂಡುಕುಟ್ಟಿಯಲ್ಲಿ, ಗೌರಮ್ಮನವರ ಮನೆ ಪಕ್ಕವೇ ಇರುವ, ಆಕೆಯ ಪತಿ ವ್ಯವಸ್ಥಾಪಕರಾಗಿದ್ದ ಗುಂಡುಕುಟ್ಟಿ ಮಂಜುನಾಥಯ್ಯನವರ ಎಸ್ಟೇಟ್ ಬಂಗಲೇಯಲ್ಲೇ ತಂಗುತ್ತಾರೆ. ಈ ವಿಚಾರವನ್ನು ಮೊದಲೇ ತಿಳಿದಿದ್ದ ಗೌರಮ್ಮನವರು ಊರಿನ ಸ್ವಾಗತ ಮಂಡಳಿಯವರಲ್ಲಿ, 'ಗುಂಡುಕಟ್ಟಿ ಎಸ್ಟೇಟ್ ನಿಂದ ಗಾಂಧೀಜಿಯವರನ್ನು ಕಲ್ಲೆಸೆತದ ದೂರದಲ್ಲಿರುವ ನಮ್ಮ ಮನೆಗೂ ಕರೆತರಬೇಕು, ನಾನವರಿಗೆ ಒಡವೆ ಅರ್ಪಿಸುವುದಿದೆ' ಎಂದು ಕೋರಿದ್ದರು. ಆದರೆ ಆ ಕೋರಿಕೆಯನ್ನು ಸ್ವಾಗತ ಮಂಡಳಿಯವರು ಗಂಭೀರವಾಗಿ ಪರಿಗಣಿಸದೇ ಇದ್ದಾಗ… ಗೌರಮ್ಮನವರು ಒಂದು ತೆರನಾದ ಭಾವೋದ್ವೇಗಕ್ಕೆ ಒಳಗಾಗುತ್ತಾರೆ. ಗಾಂಧೀಜಿಯವರು ಎಸ್ಟೇಟ್ ಬಿಟ್ಟು ಹೊರಟ ಮುಂಜಾನೆಯೇ, ಗೌರಮ್ಮನವರು - ಗಾಂಧಿಜಿಯವರು ತಮ್ಮಂತಹ ಸಾಧಾರಣರ ಮನೆಗಳಿಗೆ ಭೇಟಿ ನೀಡದೆ, ಕೇವಲ ಶ್ರೀಮಂತರ, ಎಸ್ಟೇಟ್ ಮಾಲಿಕರ ಬಂಗಲೆಗಳಿಗೆ ಮಾತ್ರವೇ ಭೇಟಿ ಕೊಡುತ್ತಾರೆ - ಎಂಬ ವರ್ಗಪ್ರಜ್ಞೆಗೆ ಒಳಗಾಗಿ, ತನ್ನಂತಹ ಸಾಮಾನ್ಯರ ಮನೆಗೂ ಮಹಾತ್ಮರು ಬೇಟಿ ಕೊಡುಬೇಕೆಂದು ಆಗ್ರಹಿಸಿ ಹಠ ಹಿಡಿದು, ಅನ್ನ ನೀರು ಬಿಟ್ಟು ಉಪವಾಸ ಸತ್ಯಾಗ್ರಹ ಆರಂಭಿಸುತ್ತಾರೆ.

ತರುಣಿಯೊಬ್ಬಳು ತನ್ನ ಕಾರಣಕ್ಕೆ ನೊಂದು, ಅನ್ನ ನೀರು ಬಿಟ್ಟು ಹಠ ಹಿಡಿದು ಕೂತಿರುವ ಸುದ್ದಿ, ಸಹಾಯಕರ ಮೂಲಕ ಗಾಂಧೀಜಿಯವರ ಕಿವಿಗೂ ತಲುಪುತ್ತದೆ. ವಿಷಯ ತಿಳಿದು ಹೌಹಾರಿದ ಗಾಂಧೀಜಿಯವರು ಗೌರಮ್ಮನವರನ್ನು ತಮ್ಮಲ್ಲಿಗೆ ಬರಹೇಳಿ ಉಪವಾಸದ ವಿಷಯ ಪ್ರಸ್ತಾಪ ಮಾಡಿದಾಗ, ಗೌರಮ್ಮನವರು ಗಾಂಧಿ ಬಳಿ ಬಂದವರೇ ಮತ್ತೆ ಭಾವೋದ್ವೇಗಕ್ಕೆ ಒಳಗಾಗಿ ಅಳತೊಡಗುತ್ತಾರೆ. ಕುತ್ತಿಗೆಯ ನರ ಬಿಗಿದು ಬಂದು ಆಕೆಗೆ ಮಾತೇ ಆಡಲಾಗದಾಗ, ಗಾಂಧೀಜಿ ಆಕೆಯನ್ನುಸಮಾಧಾನಿಸುತ್ತಾರೆ. 'ಯಾಕಾಗಿ ಈ ಉಪವಾಸ? ಎಂದು ಗಾಂಧೀಜಿಯವರು ಗೌರಮ್ಮನವರನ್ನು ಕೇಳಿದಾಗ, "ನೀವು ನಮ್ಮಂತಹ ಸಾಧಾರಣ ಮನೆಗೂ ಬರಬೇಕು. ನನ್ನ ಒಡವೆಗಳನ್ನು ನಿಮಗೆ ಅರ್ಪಿಸುವುದಿದೆ" ಎಂದು ಗೌರಮ್ಮನವರನ್ನು ಅನ್ನುತ್ತಾರೆ. ಗಾಂಧೀಜಿಯವರು ತಟ್ಟನೆ "ಆಗಲಿ ಬಹಳ ಒಳ್ಳೆಯ ಮತು, ಆದರೆ ಮೊದಲು ನೀನು ಉಪವಾಸ ಬಿಡಬೇಕು. ಅದಕ್ಕಾಗಿ ಈ ಕಿತ್ತಲೆ ಹಣ್ಣು ತಿನ್ನು" ಎಂದು ಗೌರಮ್ಮನವರಿಗೆ ಕಿತ್ತಳೆ ಹಣ್ಣು ನೀಡಿದಾಗ, ಆಕೆ ಸ್ವೀಕರಿಸದೆ "ಊಹೂಃ ಬೇಡ ಮೊದಲು ನೀವು ನನಗೆ ಮಾತು ಕೊಡಬೇಕು - ನಮ್ಮ ಮನೆಗೆ ಬರುವುದಾಗಿ" ಎಂದು ಹಠ ಹಿಡಿಯುತ್ತಾರೆ. ಆಗ ಗಾಂಧೀಜಿ ಅವರು 'ಮಾತು ಗೀತು ಕೇಳಬಾರದು ಮಗು, ಈ ಕಿತ್ತಳೆ ಹಣ್ಣು ತಗೋ, ಇದನ್ನು ಮೊದಲು ಬಾಯಿಗೆ ಹಾಕು, ಹಾಗೆಲ್ಲ ಚೌಕಾಸಿ ಮಾಡಬಾರದು. ನಿನಗೆ ನನ್ನ ಮೇಲೆ ನಂಬಿಕೆ ಇರಬೇಕು, ನನ್ನ ದೃಢ ಪ್ರೀತಿಯಲ್ಲಿ ನಿನಗೂ ನಂಬಿಕೆ ಇರಬೇಕು' ಎಂದು ರಮಿಸುತ್ತಾರೆ. ಆದರೂ ಗೌರಮ್ಮ ಆ ಹಣ್ಣನ್ನು ಸೇವಿಸುವುದಿಲ್ಲ. ಆದರೆ ಗಾಂಧೀಜಿಯವರ ಪಕ್ಕದಲ್ಲಿದ್ದ ಮೀರಾಬೆನ್ ಅವರಿಗೆ ಗಾಂಧೀಜಿಯವರ ಮನದ ನಿರ್ಧಾರ ಅರ್ಥವಾಗಿ, ಕಿತ್ತಳೆ ಹಣ್ಣು ಸುಲಿದು ಗೌರಮ್ಮನವರಿಗೆ ತಿನಿಸುತ್ತಾರೆ.

ಗಾಂಧೀಜಿಯವರು ಎಳೆತರುಣಿಗೆ ಕೊಟ್ಟ ಮಾತಿನಂತೆ, ಗೌರಮ್ಮನವರು ಮನೆಗೆ ಬರುತ್ತಾರೆ. ಮನೆಗೆ ಬಂದ ಗಾಂಧೀಜಿಯವರಿಗೆ ಖಾದಿಧಾರಣೆ ಗೌರಮ್ಮನವರು ತಮ್ಮಲ್ಲಿದ್ದ ಹಲವು ಒಡವೆಗಳನ್ನು ಸ್ವಾತಂತ್ರ ಸಂಗ್ರಾಮದ ನಿಧಿಗಾಗಿ ನೀಡುತ್ತಾರೆ. ಕೊರಳಿನ ಮಂಗಳಸೂತ್ರ, ಕಿವಿಯ ಓಲೆ ಮತ್ತು ಮೂಗುಬೊಟ್ಟಿನ ಹೊರತಾಗಿ ತನ್ನಮೈಮೇಲಿದ್ದ ಒಡವೆಗಳನ್ನು ಹಾಗೂ ತಮ್ಮ ಸಂಗ್ರಹದಲ್ಲಿದ್ದ ಇತರ ಒಡವೆಗಳನ್ನು ಆಕೆ ಪ್ರೀತಿಯಿಂದ ಗಾಂಧೀಯವರಿಗೆ ನೀಡಿದಾಗ ಗಾಂಧೀಜಿಯವರು ಅವಕ್ಕಾಗುತ್ತಾರೆ. ಈಹೆಣ್ಣೇನಾದರೂ ಭಾವೋದ್ವೇಗಕ್ಕೆ ಒಳಗಾಗಿ ಈ ರೀತಿ ಒಡವೆಗಳನ್ನು ನೀಡುತ್ತದ್ದಾಳೋ ಏನೋ... ಎಂಬ ಗುಮಾನಿಗೆ ಒಳಗಾದ ಗಾಂಧಿಯವರು, ಆಕೆಗೆ ಒಡವೆ ಕೊಡಲು ಗಟ್ಟಿ ಮನಸ್ಸು ಇದೆಯೇ ಇಲ್ಲವೋ ಎಂಬುದನ್ನು ಸ್ಪಷ್ಟ ಪಡಿಸಿಕೊಳ್ಳುವುದಕ್ಕಾಗಿ ಆಕೆಯ ಗಂಡನಲ್ಲಿ - ನಿಮಗಿದು ಒಪ್ಪಿಗೆಯೇ? ನಿಮ್ಮ ಆಕ್ಷೇಪಣೆ ಇಲ್ಲವಲ್ಲ? - ಎಂದು ಕೇಳಿದಾಗ ಪತಿ ಬಿ ಟಿ ಗೋಪಲಕೃಷ್ಣ ಅವರು, 'ಅವಳಿನ್ನು ನನ್ನಲ್ಲಿಆಭರಣ ಬೇಡದಿದ್ದರಾಯಿತು ಎಂದು ನಕ್ಕು ನುಡಿಯುತ್ತಾರೆ. ಆ ಮಾತಿನ ಸಂದರ್ಭದಲ್ಲೇ ಗೌರಮ್ಮನವರು 'ಈಗ ಕೊಟ್ಟ ಒಡವೆಗಳನ್ನು ಮತ್ತೆ ತೊಡುವುದಿಲ್ಲ' ಎಂದು ಗಾಂಧೀಜಿಯವರಿಗೆ ಮಾತು ಕೊಡುತ್ತಾರೆ. ಕೊಟ್ಟ ಮಾತಿನಂತೆಯೇ ಅವರು ಬದುಕಿರುವವರಿಗೂ ಮುತ್ತೈದೆ ಒಡವೆಗಳನ್ನಷ್ಟೇ ಧರಿಸುತ್ತಾರೆ.

ಗೌರಮ್ಮ ಮತ್ತು ಗಾಂಧೀಜಿಯವರ ನಡುವಿನ ಈ ಘಟನೆಯನ್ನು ಕನ್ನಡದ ಖ್ಯಾತ ಸಾಹಿತಿಗಳಾದ ಸಿದ್ಧವನಹಳ್ಳಿ ಕೃಷ್ಣಶರ್ಮರು ೧೯೪೨ ರಲ್ಲಿ ಪ್ರಕಟಿಸಿದ ತಮ್ಮ 'ಪರ್ಣಕುಟಿ' ಗ್ರಂಥದಲ್ಲಿ 'ಅಹಿಂಸೆಯ ಅವತಾರ' ಎಂಬ ಅಧ್ಯಾಯದಲ್ಲಿ ಅವಿವರವಾಗಿ ದಾಖಲಿಸಿದ್ದಾರೆ.

ಸಂಪೂರ್ಣ ಗಾಂಧೀತತ್ವಕ್ಕೆ ಮಾರುಹೋಗಿದ್ದ ಗೌರಮ್ಮನಿಗೆ ಗಾಂಧೀಜಿಯವರಲ್ಲಿಎಷ್ಟು ಪೂಜ್ಯವಾದ ಪವಿತ್ರವಾದ ಭಾವನೆ ಇತ್ತೆಂದರೆ, ಬಾಪೂಜಿಯವರು ಹರದೂರಿನಲ್ಲಿ ( ಗುಂಡುಕುಟ್ಟಿ ಎಸ್ಟೇಟ್ ನಲ್ಲಿ) ಬಳಸಿದ್ದ ಮೈಸೂರು ಸ್ಯಾಂಡಲ್ ಸಾಬೂನನ್ನು ಗೌರಮ್ಮನವರು ಹಟ್ಟಿಹೊಳೆಗೆ ಬಲಿಯಾದ ನಂತರ, ಮೈಸೂರು ವಿಶ್ವವಿದ್ಯಾಲಯದ ಜಾನಪದ ವಸ್ತುಸಂಗ್ರಹಾಲಯದಲ್ಲಿ ಅವರ ಇತರ ವಸ್ತುಗಳ ಜತೆ ಗಾಂಧಿ ಬಳಸಿದ್ದ ಈ ಸಾಬೂನನ್ನು ಆಸ್ಥೆಯಿಂದ ಜೋಡಿಸಿಡಲಾಗಿದೆ.

ಗಾಂಧೀಜಿಯವರ ಭೇಟಿ ಸಂದರ್ಭದಲ್ಲಿ ಆಗಿನ್ನೂ ೨೨ ರ ಹರೆಯದಲ್ಲಿದ್ದ ಗವರಮ್ಮನವರಿಗೆ, ನೇರವಾಗಿ ದೇಶದ ಸ್ವಾತಂತ್ರ ಹೋರಾಟದಲ್ಲಿ ಪಾಲ್ಗೊಳ್ಳಲಾಗದಿದ್ದರೂ, ಅವರು ಗಾಂಧೀಜಿ ನೇತೃತ್ವದ ಕಾಂಗ್ರೆಸ್ ಪಕ್ಷದ ಸದಸ್ಯರಾಗಿ ಆ ಸ್ವಾತಂತ್ರ ಹೋರಾಟಕ್ಕೆ ಅಲ್ಪಸ್ವಲ್ಪ ಅಳಿಲುಸೇವೆ ಸಲ್ಲಿಸಿದ್ದರು. ಇವರು ತಮ್ಮ ಸನಿಹದವರನ್ನು, ಪರಿಚಯಕ್ಕೆ ಬಂದವರನ್ನು ಕಾಂಗ್ರೆಸ್ ಪಕ್ಷದ ಸದಸ್ಯರನ್ನಾಗಿ ನೋಂದಾಯಿಸುತ್ತಿದ್ದರಲ್ಲದೆ, ಕೊಡಗಿನಲ್ಲಿ ಸ್ವಾತಂತ್ರ ಹೋರಾಟಕ್ಕೆ ದುಮುಕಿದ್ದ ಮುಂತಾದ ಹೋರಾಟಗಾರರಿಗೆ ಹೋರಾಟದ ಸ್ಥೈರ್ಯ ತುಂಬುತ್ತಿದ್ದರು, ಗಾಂಧೀಜಿಯವರ ಖಾದಿವ್ರತವನ್ನು ಅವರು ಅಕ್ಷರಶಃ ಪಾಲಿಸುತ್ತ ಆ ಮೂಲಕ ವಸಾಹತು ಶಾಹಿಗೆ ಪುಟ್ಟದಾಗಿಯಾದರೂ ಪ್ರತಿರೋಧವನ್ನುಗೌರಮ್ಮನವರು ಒಡ್ಡಿದ್ದರು.

ಗೌರಮ್ಮನವರನ್ನು ತುಂಬಾ ಹತ್ತಿರದಿಂದ ಬಲ್ಲ ಹಾಗೂ ಒಡನಾಡಿಯಾಗಿದ್ದ ಅವರ ತಂಗಿ ( ಚಿಕ್ಕಪ್ಪನ ಮಗಳು ) ಈಗ ಎಂಬತ್ತೆರಡರ ಇಳಿ ಪ್ರಾಯದಲ್ಲಿರುವ ಹೊನ್ನಮ್ಮ ಅವರು ದುರ್ಮರಣಕ್ಕೀಡಾದ ಅಕ್ಕನ ಬಗ್ಗೆ ಹೀಗನ್ನುತ್ತಾರೆ.

`ನಮ್ಮ ಗೌರಕ್ಕ ತುಂಬ ಚೂಟಿ, ಜಾಣೆ ಕೂಡ. ಎತ್ತರದ ಸುಂದರಿ. ಆ ಕಾಲದಲ್ಲೇ ಕಾನ್ವೆಂಟಲ್ಲಿ ಮೆಟ್ರಿಕ್ ಕಲಿತಾಕೆ. ಆಕೆಯ ಮಾತು ಹಾವ - ಭಾವ ಎಲ್ಲನೂ ನೋಡುದಕ್ಕೆ ಹಳ್ಳಿಮನೆಯ ಎಲ್ಲರಿಗೂ ಒಂಥರಾ ಚೆಂದ. ನಾವು ಹಳ್ಳೀಲಿದ್ವಿ. ಗೌರಕ್ಕ ಆಗಾಗ್ಗೆ ಪಟ್ಟಣದಿಂದ ಹಳ್ಳಿಗೆ ಬರೋಳು. ಆಕೆಯ ನಗು, ಆಕೆಯ ಮಾತು, ಅಕೆಯ ಮೌನ, ಆಕೆಯ ಓದು, ಆಕೆಯ ಚಲನ - ವಲನ ಎಲ್ಲವು ಅವಳಿಗಿಂತ ಚಿಕ್ಕವರಾದ ನಮಗೆ ಒಂಥರಾ ಕುತೂಹಲ. ಆಕಾರಣಕ್ಕೆ ಆಕೆಯ ಸುತ್ತಲೇ ಸುತ್ತುತ್ತಿದ್ವಿ. ಆಕೆ ನಮ್ಗೆ ಅದೂ…. ಇದೂ ಪಟ್ಟಣದ ಸುದ್ದಿ ಹೇಳೋಳು…. ಕತೆ ಹೇಳೋಳು; ಕೆಲವೊಮ್ಮೆ ಗಂಭೀರವಾಗಿ ತನ್ನ ಪಾಡಿಗೆ ಓದುತ್ತಾ ಇರೋಳು… ಕೆಲವೊಮ್ಮೆ ನಮ್ಮ ತುಂಟನತಕ್ಕೆ ಕಣ್ಣಲ್ಲೇ ಗದರಿಸೋಳು.

ಆದರೆ ಆಕೆಗೆ ನಮ್ಮ ಹಳ್ಳಿ ಅಡುಗೆ ಮನೆ ಅಂದ್ರೆ ಅಷ್ಟು ಆಸಕ್ತಿ ಇರಲಿಲ್ಲ. ಹಳ್ಳಿಗೆ ಬಂದ್ರೆ ಆಕಡೆ ತಲೆ ಹಾಕ್ತಿರಲಿಲ್ಲ. ಗೌರಕ್ಕ ಗಾಂಧಿ ಎದುರು ಸತ್ಯಾಗ್ರಹ ಮಾಡಿದ ಸುದ್ದಿ ಹಾಗೂ ಆಕೆ ಮಾಂಗಲ್ಯ ಬಿಟ್ಟು ಉಳಿದೆಲ್ಲ ಚಿನ್ನದ ಒಡವೆಗಳನ್ನು ಗಾಂಧಿಯವರ ನಿಧಿಗೆ ದಾನ

ಮಾಡಿದ ಕಥೆ ಕೇಳಿದ ಮೇಲೆ ನಮಗೆ ಆಕೆ ಅಂದ್ರೆ ಇನ್ನಷ್ಟು ಗೌರವ, ಹೆಮ್ಮೆ, ಪ್ರೀತಿ ಗೌರಕ್ಕ ಖಾದಿ ಶೀರೆನೆ ಉಡೋಳು. ಆಕೆಯ ಕಾರಣದಿಂದಲೇ ನಾನು ತಕಲಿಯಲ್ಲಿ ಎಷ್ಟೋ ಕಾಲ ನೂಲು ತೆಗೆದು ಅದನ್ನು ಗಾಂಧೀಜಿಗೂ ಕಳಿಸಿದ್ದೆ. ಗೌರಕ್ಕ ಎಷ್ಟೋ..... ಒಳ್ಳೆ ಕಥೆ ಬರೆಯೋಳು! ಬೇಂದ್ರೆ, ಕಾರಂತ, ಮಾಸ್ತಿ ಮುಂತಾದ ದೊಡ್ಡ ಸಾಹಿತಿಗಳೆಲ್ಲ ಗುಂಡುಕುಟ್ಟಿಗೆ ಬಂದಾಗಲೆಲ್ಲಾ ಗೌರಕ್ಕನಿಗೆ ಸಾಹಿತ್ಯದ ಬಗ್ಗೆ ಹೇಳೋರಂತೆ... ಬರೆಯುವ ಬಗ್ಗೆ ಮಾರ್ಗದರ್ಶನ ನೀಡೋರಂತೆ. ಗೌರಕ್ಕ ಒಳ್ಳೆ ಒಳ್ಳೆಯ ಕಥೆ ಬರೆದಿದ್ದಾರೆ, ಬರೆಯುತ್ತಾರೆ ಅಂತ ನಮಗೆ ಗೊತೇ ನಿನಹ.... ಅದನ್ನು ಆಗ ನಮಗೆ ಓದುವುದು ಗೊತ್ತಿರಲಿಲ್ಲ! ನಾವು ಓದೋ ಹೊತ್ತಿಗೆ ಗೌರಕ್ಕ ಇಲ್ಲವಾದ್ಳು.....,ಈಜು ಬರುತ್ತಿದ್ದ ಗೌರಕ್ಕ ಆ ಹೊಳೆಯ, ಮಡುವಲ್ಲಿ ಮುಳುಗಿ ಸತ್ತಳು ಅಂದ್ರೆ ನಮಗೆ ನಂಬ್ಲಿಕೆ ಆಗಿಲ್ಲ.... ಕೆಲವು ಕ್ಷಣ....'

ತಾಯಿ ಗೌರಮ್ಮನವರು ಅಕಾಲಿಕ ಸಾವಿನಿಂದ ತಬ್ಬಲಿಯಾದ ಅವರ ಎಂಟರ ಹರೆಯದ ಮಗ ವಸಂತ, ತನ್ನ ತಂದೆ ಹಾಗೂ ಸೋದರಮಾವನ ಆಸರೆಯಲ್ಲಿಬೆಳೆದು, ಇಂದು ಬದುಕಿನ ಇಳಿಸಂಜೆಯಲ್ಲಿ ನಿಂತು ಬಾಲ್ಯದ 'ಕಣ್ಣು' ಗಳಿಂದಲೇ ತನ್ನ ತಾಯಿಯನ್ನು ನೆನೆಪಿಸಿಕೊಳ್ಳುವುದು ಹೀಗೆ:

*' ನಾನು ಅಮ್ಮನನ್ನು ನೆನಪಿಸಿಕೊಂಡಾಗಲೆಲ್ಲ ನನ್ನ ಕಣ್ಣಿಗೆ ಮೊದಲು ಕಟ್ಟಿ ಬರುವುದು ಆಕೆಯ ಮಡಿಲು..., ಅಮ್ಮನ ಕಿವಿಯೋಲೆ ಅದು ಏಳುಕಲ್ಲಿನ ಕೆಂಪು ಹರಳಿನ ಮುದ್ದಾದ ಕಿವಿಯೋಲೆ ಮತ್ತು ಆ 'ಕೋಲು.' 'ಆ ಕೋಲು' ಅಂದರೆ ಅಮ್ಮ ನನ್ನ ಪೋಕರಿ - ತುಂಟಾಟ ಸಹಿಸಿಕೊಳ್ಳಲಾರದೆ ಬೆನ್ನಿಗೆರಡು 'ಕೊಡಲು' ತರುತ್ತಿದ್ದ ಗಿಡದ ರೆಂಬೆ ಕೋಲಲ್ಲ..., ಅದು ಗಾಂಧಿತಾತನ ಕೈಯೊಳಗಿದ್ದ 'ಕೋಲು' ನಾಳೆ ಗಾಂಧೀಜಿ ನಮ್ಮ ಮನೆಗೆ ಬರಲಿದ್ದಾರೆ - ಎಂಬ ಸುದ್ದಿಯನ್ನು ಅಮ್ಮ ನನಗೂ ಹೇಳಿದ್ದರು. ನನಗಾಗ ಮೂರು ವರ್ಷ. ಗಾಂಧಿ ಎಂದರೆ ಯಾರು? ಎಂದು ಕೇಳುವ ವಯಸ್ಸೂ ನನ್ನದಲ್ಲ. ಆದರೂ ಅಮ್ಮ - ಆ ಗಾಂಧಿ ನಮಗಿಂತ ಎಷ್ಟು 'ದೊಡ್ಡವ 'ರೆಂದು ನನ್ನ 'ಭಾಷೆಯಲ್ಲಿ' ನನಗೆ ಹೇಳಿದ್ದರೂ... ಆಗ ಗಾಂಧೀಜಿಯವರ 'ಎತ್ತರ' ವನ್ನು ನೋಡಲು ನನ್ನ ಎತ್ತರ ಸಾಲದಿರಬೇಕು! 'ನನಗೆ ಗಾಂಧೀಜಿ ಆಗಮನ ಅಂದು ಯಾವ ಸಂಭ್ರಮವನ್ನು ತಂದಿರಲಿಲ್ಲ. ಅಮ್ಮನಿಗೆ ಮಾತ್ರ ತುಂಬಾ ಸಂಭ್ರಮ. ಗಾಂಧಿಯವರದ್ದೇ ಮಾತು. ಇಂದು ಹೋಗಿ ಆ 'ನಾಳೆ'ಯೂ ಬಂತು. ಅಮ್ಮ ಆವತ್ತು ಸಂಭ್ರಮದಿಂದ ಗಾಂಧೀಜಿಯವರ ಆಗಮನವನ್ನು ನಿರೀಕ್ಷಿಸುತ್ತಿದ್ದರು. ನಮ್ಮ ಅಂಗಳದಲ್ಲಿ ಗಾಂಧೀಜಿಯವರನ್ನು ನೋಡುವ ಕುತೂಹಲದಿಂದ ನಮ್ಮ ಹಾಗೂ ಅಕ್ಕಪಕ್ಕದ ತೋಟಗಳ ಮೇಸ್ತ್ರಿ - ಕೂಲಿಯಾಳುಗಳೆಲ್ಲ ಸೇರಿದ್ದರು. ನಾನೂ ಅಮ್ಮನ ಕೈಬಿಟ್ಟು ಎಲ್ಲರೊಂದಿಗೆ ಅಂಗಳದಲ್ಲಿದ್ದೆ. ಅಷ್ಟರಲ್ಲಿ... 'ಬಂದ್ರು ಬಂದ್ರು... ಗಾಂಧೀಜಿ ಬಂದ್ರು....' ಎಂದು ಜನ ಸಂಭ್ರಮಪಟ್ಟು ಕೊಳ್ಳುವಷ್ಟರಲ್ಲಿ... ದೊಡ್ಡ ಕೋಲು ಹಿಡಿದು ಅಜ್ಜ ಒಬ್ರು ತಮ್ಮ ಪರಿವಾರದೊಂದಿಗೆ ದಾಪುಗಾಲಲ್ಲಿ ನಮ್ಮ ಮನೆಯತ್ತ ನಡೆದು ಬರುತ್ತಿದ್ದಾರೆ! ಆ ಕೋಲು... ಅಷ್ಟೊಂದು ಜನ... ಅವರು ನಡೆಯುವ ರಭಸ... ಇವೆಲ್ಲವೂ ನನ್ನೊಳಗೆ ಭಯ ಮತ್ತು ಅಳುವನ್ನು ಒತ್ತರಿಸಿ ತಂದು... ನಾನು ಕಿಟಾರನೆ ಕಿರಿಚುತ್ತ ಅವರೆಲ್ಲರಿಗಿಂತಲೂ ವೇಗವಾಗಿ ಮನಯತ್ತ ಓಡಿ 'ಅಮ್ಮಾ... ಅವ್ರು ದೊಡ್ಡ ಕೋಲು ತರುತ್ತಿದ್ದಾರೆ...ನನ್ನ ಹೊಡೆಯಕ್ಕೆ.....' ಎಂದು ಅಳುತ್ತ ಅಮ್ಮನ ಮಡಿಲನ್ನು ತಬ್ಬಿಕೊಂಡಿದ್ದೆ! ಅಮ್ಮ ನನ್ನನ್ನು ಸಮಾಧಾನಿಸುತ್ತಿರುವಾಗ ಅಪ್ಪ ಬಂದು ನನ್ನನ್ನು ಎತ್ತಿ ಕೊಂಡಿದ್ರು... ಆವತ್ತಿನ ಆ 'ಕೋಲು' ಈಗಲೂ ನನ್ನ ಮನದೊಳಗೆ ಅಚ್ಚೊತ್ತಿ ನಿಂತಿದೆ.*

*ನನ್ನ ಅಮ್ಮ ಬರೆದ ಕಥೆಗಳನ್ನು ನಾನು ಓದಿದ್ದು ದೊಡ್ಡವನಾದ ಮೇಲೆ. ಆತ್ಮಕಥನದ ಶೈಲಿಯಲ್ಲಿರುವ ಅವರ ಕೆಲವು ಕಥೆಗಳನ್ನು ಓದುವಾಗಲೆಲ್ಲ ನನಗೆ ನನ್ನ ಬಾಲ್ಯದಂಗಳವೇ ಎದ್ದು ಬಂದಂತಾಗುತ್ತಿತ್ತು. ಅವರು ತನ್ನ 'ಬದುಕಿನ ಅಂಗಳ'ದ, ತನ್ನ ಅನುಭವದ, ತಾನು ಕೇಳಿಸಿಕೊಂಡ ಕಥೆಗಳನ್ನೇ ಬರೆದಿದ್ದಾರೆ ಎಂದನಿಸುತ್ತೆ. ಬಡತನದ ಬಗ್ಗೆ, ಹೆಣ್ಣಿನ ಬದುಕಿನ ಸುಖ - ದುಃಖ, ನೋವು ನಲಿವುಗಳುಅಮ್ಮನ ಕಥೆಗಳಲ್ಲಿ ತುಂಬಾ ಸಹಜವಾಗಿ ಬರಲು ಕರಣ... ದುಡಿಮೆಗಾಗಿ ನಮ್ಮ ಅಂಗಳಕ್ಕೆ ಬರುತ್ತಿದ್ದ ದುಡಿಯುವ ವರ್ಗದವರ, ಸುಖಕಷ್ಟಗಳನ್ನು ಅಮ್ಮ ಕೇಳಿಸಿಕೊಳ್ಳುತ್ತ... ಅವರ ಕಷ್ಟಗಳಿಗಾಗಿ ಮರುಗುತ್ತ, ಅವರನ್ನು ಸಮಾಧಾನಿಸುತ್ತಿದ್ದುದು. ಅಮ್ಮ ಅವರರಿಗೆಲ್ಲ ತನ್ನ ಕೈಲಾದಷ್ಟು ಸಹಾಯವನ್ನು ಮಾಡುವುದಿತ್ತು. ನಮ್ಮ ತೋಟಕ್ಕೆ ಬರುತ್ತಿದ್ದ ಆ ಕೂಲಿಕಾರ್ಮಿಕರಲ್ಲಿ ಹೆಚ್ಚಿನವರು ಅಮ್ಮನ ಸಂತಾನದ ಬೇರಿರುವ ತಳುನಾಡಿನವರೇ ಆಗಿದ್ದ ಕಾರಣ ಅಮ್ಮ ಅವರೊಂದಿಗೆ ತಳುವಿನಲ್ಲೇ ಮಾತನಾಡುತ್ತ... ಅವರಿಗೆ ವಿಶೇಷವಾಗಿ ಕಾಫಿ, ಮಜ್ಜಿಗೆ ನೀರು,ಹಣ್ಣು ತಿಂಡಿಗಳನ್ನು ಕೊಟ್ಟು ಆದರಿಸುವುದಿತ್ತು. ಅಮ್ಮನ ಕಥೆಗಳಲ್ಲಿಬರುವ ಹೆಚ್ಚಿನ ಪಾತ್ರಗಳು*

ಕೂಡಾ ನನ್ನ ಬಾಲ್ಯದಲ್ಲಿ ನಾನು ಅಲ್ಲಿ ಇಲ್ಲಿ ಕಂಡ ಪಾತ್ರಗಳೇ. ನಮ್ಮ ಸಂಬಂಧಿಕರು - ಜಾತಿಬಾಂಧವರು ಕೂಡ ಅವರ ಕಥೆಗಳಲ್ಲಿ ಪಾತ್ರವಾಗಿದ್ದಾರೆ. ಅಮ್ಮ ತನ್ನ ಸಾವಿನ ಹಿಂದಿನ ದಿನ ಬರೆದ ಕೊನೆಯ ಕಥೆ 'ಮುನ್ನಾದಿನ' ದ ಪಾತ್ರಗಳಾದ ಜೋಸೆಫ್ ಕಾಡ ಮತ್ತು ಹುಸೇನಬಿ ಇಬ್ಬರೂ ನಮ್ಮ ತೋಟದಲ್ಲಿ ದುಡಿಯುತ್ತಾ... ಅಮ್ಮನ ವಿಶ್ವಾಸವನ್ನು ಗಳಿಸಿದವರೆ. ಅಮ್ಮನ ಕಥೆ 'ಪಾಪನ ಮದುವೆ' ನನ್ನ ಅಮ್ಮನ ಅಕ್ಕ ತಂಗಮ್ಮನವರ ಮಗ ನಾರಾಯಣಮೂರ್ತಿಯದ್ದೇ ಕಥೆ. ಆತನ ಮನೆ ಹೆಸರು ಪಾಪ. ಅಮ್ಮನಿಗೆ ತಂಬ ಇಷ್ಟದಾತ. ಆತನ ಜತೆಗೆ ಅಮ್ಮ ಹೊರನಾಡಿನ ಅನ್ನಪೂರ್ಣೇಶ್ವರಿ ದೇವಸ್ಥಾನದ ಮುಖ್ಯ ಅರ್ಚಕ ಸುಬ್ಬಾಜೋಯಿಸರ ಮಗಳು ಅನ್ನಪೂರ್ಣೇಶ್ವರಿಯನ್ನು 'ನೋಡಲು' ( ವಧುಪರೀಕ್ಷೆಗೆ) ಹೋದ ಕಥೆಯೇ ಆ 'ಪಾಪನ ಮದುವೆ,' ನೋಡಿ ನನ್ನಮ್ಮ ತನ್ನ ಬಾಲ್ಯವನ್ನು ನೆನಪಿಸಿಕೊಳ್ಳುತ್ತಲೇ... ತನ್ನಿಷ್ಟದ ಪಾಪನ ವಧುಪರೀಕ್ಷೆಯ ದಿನದ ಆವಾಂತರಗಳನ್ನು ಹಾಗೂ ಹೆಣ್ಣು ಹೆತ್ತವರ ಕಷ್ಟಗಳನ್ನು ಆ ಕಥೆಯಲ್ಲಿ ಎಷ್ಟು ಹಾಸ್ಯಮಯವಾಗಿ ಚಿತ್ರಿಸಿದ್ದಾರೆ ನೋಡಿ...

ನನ್ನ ಅಮ್ಮ ಕಥೆ ಮಾತ್ರ ಬರೆಯುತ್ತಿದುದಲ್ಲ... ಅವ್ರು ತುಂಬಾ ಓದುತಿದ್ರು; ಕನ್ನಡದ ಪುಸ್ತಕಗಳ ಜತೆ ಇಂಗ್ಲಿಷ್ ಪುಸ್ತಕಗಳನ್ನು ತುಂಬಾ ಓದೋರು; ಇಂಗ್ಲಿಸ್ ಚೆನ್ನಾಗಿ ಮಾತನಾಡೋದ ಮಾತ್ರಲ್ಲ ಚೆನ್ನಾಗಿ ಬರಿತಿದ್ರು ಕೂಡಾ. ಅಮ್ಮನಿಗೆ ಸಾಹಿತ್ಯಕ, ಸಾಂಸ್ಕೃತಿಕ ಕಾರ್ಯಕ್ರಮಗಳೆಂದರೆ ತುಂಬಾ ಇಷ್ಟ. ಅಂತಹ ಕಾರ್ಯಕ್ರಮಗಳನ್ನುಅವರು ಎಂದೂ ತಪ್ಪಿಸುತ್ತಿರಲಿಲ್ಲ. ನಮ್ಮ ಮನೆಯಲ್ಲಿ ಮಳೆಗಾಲದಲ್ಲಿ ಯಾವತ್ತೂ ತಾಳಮದ್ದಲೆ ನಡೆಯೋದು. ಅಮ್ಮನಿಗೆ ತಾಳಮದ್ದಲೆಯಲ್ಲಿ ಭಾಗವಹಿಸುವುದೆಂದರೆ ತುಂಬಾ ಇಷ್ಟ ತಾಳಮದ್ದಲೆ ನಡೆಯುವಂದು ಅಮ್ಮ ಅಡುಗೆ ಮನೆಯಲ್ಲೂ ತುಂಬ ಬ್ಯುಸಿ. ತಾಳಮದ್ದಲೆಗೆ ಬಂದವರಿಗೆ ಕಾಫಿ, ತಿಂಡಿ, ಹಣ್ಣು, ಊಟದ ಏರ್ಪಾಡು ಎಲ್ಲ ಅವರದ್ದೇ. ಅಮ್ಮನಿಗೆ ಯಕ್ಷಗಾನ ಬಯಲಾಟ ಅಂದ್ರೂ ತುಂಬ ಇಷ್ಟ ನಮ್ಮೂರಲ್ಲಿ ಯಕ್ಷಗಾನ ನಡೆದರೆ ನನ್ನನ್ನೂ ಕರೆದುಕೊಂಡು ಹೋಗೋರು. ಅಮ್ಮ ಚೆನ್ನಾಗಿ ಹಾಡುತಿದ್ರು ಕೂಡಾ. ಇಷ್ಟೇ ಅಲ್ಲ,ಅಮ್ಮ ಕೂಡಾ ಚೆನ್ನಾಗಿ ಆಡ್ತಿದ್ರು ಟೆನಿಸ್ ಕೋರ್ಟು ನಮ್ಮ ಮನೆ ಮುಂದೆಯೇ ಇತ್ತು. ಬೆಳಿಗ್ಗೆ - ಸಂಜೆ ಅಮ್ಮ ತನ್ನ ಒಡನಾಡಿಗಳೊಂದಿಗೆ ಟೆನ್ನಿಸ್ ಆಡೋರು.

ಅಮ್ಮ ಅಂದಿನ ಸಾಹಿತ್ಯದ ಬಗ್ಗೆ ಮಾತ್ರವಲ್ಲ ರಾಜಕೀಯದ ಬಗ್ಗೆಯೂ ಸಮಾನ ಮನಸ್ಕ ಒಡನಾಡಿಗಳಲ್ಲಿ ತುಂಬ ಚೆನ್ನಗಿ ಚರ್ಚಿಸುತ್ತಿದ್ರು. ದೇಶದ ಸ್ವಾತಂತ್ರ ಹೋರಾಟಕ್ಕೆ ಸಂಬಂಧಿಸಿದ ರಾಜಕೀಯದ ಬಗ್ಗೆ ನಮ್ಮ ಕುಟುಂಬದ ಆಪ್ತೇಷ್ಟರಲ್ಲಿ... ಬಂಧುಗಳ ಜತೆ ಉತ್ಸಾಹದಿಂದ ವಾದಿಸುತ್ತಿದ್ದರು.

ಅಮ್ಮನಲ್ಲಿ ಸಾಹಿತ್ಯಿಕ ಸಾಂಸ್ಕೃತಿಕ ವ್ಯಕ್ತಿತ್ವಗಳನ್ನು ಪರಿಚಯಿಸಿಕೊಳ್ಳುವ ಗೌರವಿಸುವ ಗುಣ ಅಪಾರವಾಗಿತ್ತು. ಅಮ್ಮನ ಈ ಗುಣದಿಂದಾಗಿ, ಮನೆಯ ಪಕ್ಕದಲ್ಲಿದ್ದ ಗುಂಡುಕಟ್ಟೆ ಎಸ್ಟೇಟ್ ಬಂಗಲೆಗೆ ಬರುತ್ತಿದ್ದ ಬೇಂದ್ರೆ, ಮಾಸ್ತಿ, ಕಾರಂತ, ಮುಳಿಯ ತಮ್ಮಪ್ಪಯ್ಯ ಮುಂತಾದ ಸಾಹಿತ್ಯ ದಿಗ್ಗಜರು ನಮ್ಮ ಮನೆಗೂ ಬಂದು ಅಮ್ಮನ ಸಾಹಿತ್ಯಕ ಬೆಳವಣಿಗೆಗೆ ಸಲಹೆ - ಮಾರ್ಗದರ್ಶನ ನೀಡುತ್ತಿದ್ದುದು ನನಗೆ ಈಗಲೂ ನೆನಪಿದೆ. ಅಮ್ಮ ತಾವು ಬರೆದ ಕಥೆಗಳ ಬಗ್ಗೆ ಅವರಲ್ಲಿ ಚರ್ಚಿಸುತ್ತಿದ್ದುದುಂಟು.

ಅಮ್ಮ ೧೯೨೬ ರಲ್ಲಿ ಹಿಂದಿ 'ವಿಶಾರದ' ಪರೀಕ್ಷೆಯಲ್ಲಿ ತೇರ್ಗಡೆಯಾದಾಗ ಮೈಸೂರಲ್ಲಿ ಅವರಿಗೆ ಖದ್ದರ್ ಶಾಲು (ಬಿಳಿ ಶಾಲಿಗೆ ನೇರಳೆ ಬಾರ್ಡರ್) ಹೊದಿಸಿ ಸರ್ಟಿಫಿಕೇಟ್ ನೀಡಿ ಸನ್ಮಾನ ಮಾಡುತ್ತಾರೆ. ಆ ಫಂಕ್ಷನ್ ಆರ್. ಕಲ್ಯಾಣಮ್ಮ ಬಂದಿದ್ದಾಗ... ಅಮ್ಮನಿಗೆ ಅಲ್ಲಿ ಅವರ ಪರಿಚಯವಾಗಿ ನಂತರ ಕಲ್ಯಾಣಮ್ಮನವರ ಜತೆ ಅಮ್ಮ ಸಾಹಿತ್ಯದ ವಿಚಾರವಾಗಿ ಹಲವು ಬಾರಿ ಪತ್ರವ್ಯವಹರ ನಡೆಸಿದ್ದಿದೆ.

'ನನ್ನ ಅಮ್ಮ ಹೊರಗೆ ಹೊರಟಾಗಲೆಲ್ಲ ಒಂದು ಚಂದದ ಪರ್ಸು ಹಿಡೀತಿದ್ರು... ಅಮ್ಮನ ಕನ್ನಡಕನೂ ಚಂದ... ಅವರು ಬರೆಯುತ್ತಿದ್ದ ಇಂಕು ಪೆನ್ನೂ ಚಂದದ್ದು... ಅವರು ನೀಟಾಗಿ ಖಾದಿ ಸೀರೆಗಳನ್ನು ಉಡುತ್ತಿದ್ರು... ಕೆಲವೊಮ್ಮೆ ಸೀರೆ ಮೇಲೆ ಖಾದಿಯ ಔತಜೆಡಿ ಛಠಚಿಣನ್ನು ಧರಿಸುತ್ತಿದ್ರು... ; ಅಮ್ಮ ನಮ್ಮಲ್ಲಿಗೆ ಗಾಂಧಿ ಬಂದು ಹೋದ ಮೇಲೆ ಮೈಸೂರು ಸಿಲ್ಕ್ ಸೀರೆ ಉಡೋದನ್ನ ಬಿಟ್ಟು ಬಿಟ್ರಂತೆ... ಖಾದಿ ಸೀರೆನೇ ಉಡುತಿದ್ರು...

ಸದಾ ಖಾದಿ ಸೀರೆ ಧರಿಸುತ್ತ ಸ್ವಾತಂತ್ರ ಹೋರಾಟ ಮಾತ್ರವಲ್ಲ... ಕೊಡಗಿನ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಕಾಣಿಸಿಕೊಳ್ಳುತ್ತಿದ್ದ ಗೌರಮ್ಮನವರನ್ನು ಬಾಲ್ಯದಿಂದಲೇ ಆರಾಧನಾ ದೃಷ್ಟಿಯಿಂದ ನೋಡುತ್ತಿದ್ದ ಕಾವೇರಮ್ಮನವರು (ಇವರು ಭಾರತೀಸುತರ ಸೊಸೆ, ಮೈಸೂರಿನ ಸರಕಾರಿ ಬಿಎಡ್ ಕಾಲೇಜಿನ ಪ್ರಾಂಶುಪಾಲೆಯಾಗಿ ನಿವೃತ್ತರಾದರು)... ಇದೀಗ ತಮ್ಮ ೮೭ ರ ಇಳಿವಯಸ್ಸಿನಲ್ಲಿ ಗೌರಮ್ಮನವರ ವ್ಯಕ್ತಿತ್ವವನ್ನು ತಮ್ಮ ನೆನಪಿನಿಂದಿಳಿಸಿ, ಅದನ್ನು ಕಟ್ಟಿಕೊಡುವುದು ಹೀಗೆ:

*ಗೌರಮ್ಮನವರ ತಂದೆ ವಕೀಲರು, ಅಣ್ಣ ಸೆಶ್ಯನ್ ಜಡ್ಜ್... Well educated family. ತಾಯಿಯಿಲ್ಲದ ತಬ್ಬಲಿಯೆಂದು ತಂದೆ ಆಕೆಯನ್ನು ಕಣ್ಣಬಿಂಬದ ಹಗೆ ಸಾಕ್ತಾರೆ. Convent education ಕೊಡಿಸ್ತಾರೆ. ಆಗಲೇ ಆಕೆ ಕನ್ನಡದ ಕೃತಿಗಳನ್ನು ಮಾತ್ರವಲ್ಲ ಪಾಶ್ಚಾತ್ಯ ಕಾವ್ಯ - ನಾವಲ್ ಗಳನ್ನು ಓದಿಕೊಂಡಾಕೆ. ಟೆನಿಸ್ - ಈಜಿನಲ್ಲೂ ಮುಂದು. ಹೈಸ್ಕೂಲ್ ನಲ್ಲಿರುವಾಗಲೇ ಮದುವೆ ಆದರೂ ಮದುವೆ ಆಯಿತೆಂದು - ಆಗಿನ ಹೆಣ್ಮಕ್ಕಳಂತೆ ಮನೆಯಲ್ಲಿ ಕೂತವರಲ್ಲ. ಆಕೆಯ ಈ ರೀತಿಯ ಬೆಳವಣಿಗೆಗೆ ಗಂಡನದ್ದೂ ಪ್ರೋತ್ಸಾಹವಿತ್ತು. ನಮ್ಮ ತಾಯಿ ಕಸಿನ್ ಗೆ ಆಕೆ ಚಿಕ್ಕಮ್ಮನಾಗಬೇಕು. ಆಕೆ ಒಳ್ಳೆಯ ಕಥೆ ಬರೀತಿದ್ರು... ಅಮ್ಮನಿಗೆ ಆಕೆಯ ಕಥೆಗಳು ತುಂಬಾ ಇಷ್ಟ. ಆಕೆಯ ಕೆಲವು ಕಥೆಗಳನ್ನು ಅಮ್ಮ ನಮಗೆ ಓದಿ ಹೇಳ್ತಿದ್ರು So ನಮಗೆಲ್ಲ ಆಕೆಯನ್ನು ಕಾಣುವಾಗಲೆಲ್ಲ ' ಕಥೆ ಬರೆವಾಕೆ' ಎಂದು ಅಭಿಮಾನವಾಗುತ್ತಿತ್ತು.*

*ಆಕೆ Patriotic symbol ಆಗಿ ಸದಾ ಖಾದಿ ಸೀರೆ ಉಡುತ್ತಿದ್ರು. ಆಕೆ ಒಮ್ಮೆ ಗಾಂಧಿಯವರ ಮುಂದೆ ಸತ್ಯಾಗ್ರಹ ಕೂತು ಅವರನ್ನುಬೇಸ್ತು ಬೀಳಿಸಿದ ಕಥೆ ನಿಮ್ಗೆ ಮತ್ತೆ ಹೇಳ್ತಿನಿ. ಗಾಂಧೀಜಿಯವರ ಆಶಯದಂತೆ ಇಡೀ ಭಾರತ ಭಾಷೆಯಲ್ಲಿ ಒಂದಾಗಬೇಕು ಎಂಬ ನಿಲುವು ಉಳ್ಳವರಾಗಿದ್ದ ಗೌರಮ್ಮನವರು, ಗಾಂಧಿ ಭೇಟಿಯ ನಂತರ ಹಿಂದಿ ಭಾಷೆಯಲ್ಲಿ ಕಲಿಯ ತೊಡಗಿ ವಿಶಾರದ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ತೇರ್ಗಡೆಯಾಗುತ್ತಾರೆ. ತಾನು ಮಾತ್ರವಲ್ಲ ತನ್ನಸನಿಹದವರೂ ಹಿಂದಿ ಭಾಷೆಯನ್ನು ಕಲಿಯಬೇಕೆಂದು ಅವರು ಪ್ರೋತ್ಸಾಹಿಸಿದ್ದರಂತೆ. ರಾಜಕೀಯದಲ್ಲಿ ಆಕೆಗೆ ತುಂಬಾ ಆಸಕ್ತಿ. ದೇಶದ ಸ್ವಾತಂತ್ರ ಹೋರಾಟದಲ್ಲಿ ಅವರದ್ದೂ ಅಳಿಲು ಸೇವೆ ಇದ್ದೇ ಇದೆ. ಗೌರಮ್ಮನಿಗೂ ನನಗೂ ವಯಸ್ಸಲ್ಲಿ ಸುಮಾರು ೧೦ - ೧೧ ವರುಷಗಳ ವ್ಯತ್ಯಾಸವಿದೆ. ನಾನು ಹೈಸ್ಕೂಲು ಮುಗಿಸುವಾಗ ಆಕೆ - ಸಾಹಿತ್ಯದಲ್ಲಿ ಹೆಸರು ಮಾಡಿದಾಕೆ. ನಮ್ಮ ಮಾಸ್ತಿ - ಬೇಂದ್ರೆ - ಕಾರಂತರು ಮಡಿಕೇರಿಗೆ ಬಂದಾಗಲೆಲ್ಲ ಕಥೆಗಾರ್ತಿ ಗೌರಮ್ಮನವರನ್ನು ಕಂಡು ಆಕೆಯ ಬರಹದ ಬಗ್ಗೆ ಸಲಹೆ - ಸೂಚನೆಗಳನ್ನು ನೀಡುತ್ತಿದ್ದರಂತೆ. ಗೌರಮ್ಮನವರನ್ನು ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡುವಷ್ಟು ಸ್ನಿಗ್ಧ ಸುಂದರಿ. ಎತ್ತರ ನಿಲುವಿನ ಆಕೆ fair looking, ಕೋಲುಮುಖ, ಮಿಂಚುವ ಕಣ್ಣು, ಹೊಳೆವ ಮೂಗುತಿ, ನೇರ ಬಕ್ತಲೆ... totally ಆಕೆ ಅರಳ ಸುಂದರಿ...*

ಶ್ರೀಮಂತ ಬದುಕಿಗೆಂದೂ ಆಸೆ ಪಡದೆ, ಸರಳತೆಯಲ್ಲೇ ಸಂತೃಪ್ತಿ ಕಂಡುಕೊಳ್ಳುವಂತಹ ಅಸಾಧಾರಣ ವ್ಯಕ್ತಿತ್ವವುಳ್ಳವರಾಗಿದ್ದ ಗವರಮ್ಮನವರು ತಮ್ಮ ಮಿತವಾದ ಆದಾಯದಲ್ಲೇ ಸಂಸಾರವನ್ನು ತೂಗುತ್ತಾ, ನೆಂಟರಿಷ್ಟರಿಗೆ ಆತಿಥ್ಯವನ್ನು ತೋರುತ್ತಿದ್ದ ಗೃಹಿಣಿಯಾಗಿದ್ದರು.

“ತನ್ನ ಸಂಸಾರದ ಖರ್ಚು ವೆಚ್ಚಗಳನ್ನು ತೂಗುವ ವಿಚಾರದಲ್ಲಿ ನಿಮ್ಮಮ್ಮ 'ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕೆನ್ನುವ' ಎಚ್ಚರವನ್ನು ಕಾಯ್ದುಕೊಂಡಾಕೆ” ಎಂದು ತನ್ನಪ್ಪ, ಅಮ್ಮನ ಬುದ್ಧಿವಂತಿಕೆಯನ್ನು ಯಾವತ್ತೂ ಹೆಮ್ಮೆಯಿಂದ ಹೇಳುತ್ತಿದ್ದುದನ್ನು ಅವರ ಮಗ ವಸಂತ ನೆನೆಪಿಸಿಕೊಳ್ಳುತ್ತಾರೆ. ಗೌರಮ್ಮನವರು, ಅಪ್ಪನ ಕುಟುಂಬದಲ್ಲಿ ಕೊನೆಯವರಾದ ಕಾರಣ ಅಕ್ಕ - ಅಣ್ಣಂದಿರ ಮಕ್ಕಳೆಲ್ಲ ಇವರ ' ಉಸ್ತುವಾರಿ' ಯಲ್ಲೇ ಅಥವಾ ಜತೆಯಲ್ಲೇ ಬಾಲ್ಯವನ್ನು ಕಳೆದುದ್ದರಿಂದ ಇವರಿಗೆ ಅಕ್ಕಂದಿರ ಮಕ್ಕಳೆಂದರೆ ವಿಪರೀತ ಸಲಿಗೆ ಮತ್ತು ಮಮತೆ. ಅಣ್ಣ - ಅಕ್ಕಂದಿರ ಜತೆಗಿಂತಲೂ ಅವರು ಮಕ್ಕಳ ಜತೆಗಿನ ಒಡನಾಟವೇ ಗೌರಮ್ಮನವರಿಗೆ ಪ್ರಿಯವಾದುದು. ಅವರೆಲ್ಲರ ಜತೆಗೆ ಗೌರಮ್ಮನವರು ಸದಾ ಪತ್ರ ಸಂಪರ್ಕವನ್ನಿಟ್ಟುಕೊಂಡು ಸಂಬಂಧ ಸಲಿಗೆ - ಪ್ರೀತಿಯನ್ನು ಕಾಪಾಡಿಕೊಳ್ಳುತ್ತಿದ್ದರು ಎಂಬುದಕ್ಕೆ ಒಂದು ನಿದರ್ಶನ:

ಗೌರಮ್ಮನವರು ತಮ್ಮ ಅಕ್ಕನ ಮಗನೊಬ್ಬನಿಗೆ ೧೯೩೪ ರ ಜೂನ್ ನಲ್ಲಿ ಬರೆದ ಈ ಪತ್ರ.

*My darling… babe of the honey, I am very glad to send you a letter from your sweet heart at last. I got it just now, only a few minutes back. Hope you received my last letter. Why did you not repily? Please write as soon as you receive this and please try to come over here at least for a day Hoping to hear from you very soon*

*yours lovingly*
*Aunty*

ಗೌರಮ್ಮನವರು ತಮ್ಮ ಮತ್ತೊಬ್ಬ ಅಕ್ಕ ತಂಗಮ್ಮನವರ ಮಗ ರಾಮಮೂರ್ತಿಗೆ ಅಣ್ಣ ಗೋಪಾಲಕೃಷ್ಣನವರ ಮದುವೆ 'ವೈಭವ' ದ ಬಗ್ಗೆ ೧೪ - ೮ - ೧೯೨೯ ರಂದುಮಡಿಕೇರಿಯಿಂದ ಬರೆದ ಪತ್ರವನ್ನು ಓದಿದ ಯಾರಿಗಾದರೂ ಅದು… ಅವರ ಮೊದಲ ಕಥೆಯೇನೋ ಎಂದು ಅನಿಸಿದರೆ ಆಶ್ಚರ್ಯವೇನಿಲ್ಲ. ಕಥಾ ಬರವಣಿಗೆಗೆ ಪತ್ರ ಮಾದರಿಯ ತಂತ್ರವನ್ನೇ ಅನುಸರಿಸುತ್ತಿದ್ದ ಗೌರಮ್ಮನವರು ಈ ಕಾಗದದ ಮೂಲಕ ಹೊಸ ಕಥೆಯೊಂದನ್ನು ಹೊಸೆದರೇನೋ ಎಂಬ ಭ್ರಮೆ ಹುಟ್ಟಿಸುಂತಿರುತ್ತಿತ್ತು. ಅಂತಹ ಒಂದು ಪತ್ರ ಇಲ್ಲಿದೆ.

ಗೌರಮ್ಮನವರು ಕಥೆಗಾರ್ತಿ ಎಂದು ಅನಿಸಿಕೊಳ್ಳುವುದಕ್ಕಿಂತ (ಬರೆದ ಮೊದಲಕಥೆ೧೯೩೧) ಮುಂಚೆಯೇ ಅಕ್ಕನ ಮಗ ರಾಮಮೂರ್ತಿಗೆ ಆತ್ಮೀಯತೆಯಿಂದ ಬರೆದ ಈ ಪತ್ರದ ಹಂದರದ ಚಂದ ಹೀಗಿದೆ.

*Mercara*
*೧೪.೮.೧೯೨೯*

***ರಾಮಮೂರ್ತಿ***

*ಅದೇಕೆ? ನೀನು ಈಗ ನನಗೆ ಕಾಗದವನ್ನು ಬರೆಯುವುದಿಲ್ಲವೇಕೆ? ಬಹುಶಃ ಉದಾಸೀನವಾಗಿರಬಹುದಲ್ಲವೇ? ಚಿಂತೆಯಿಲ್ಲ. ನಾನು ಬರೆಯುವೆನು. ಆದರೆ ಬರೆಯಲೇನನ್ನು? ಗೋಪಾಲಣ್ಣಯ್ಯನ ವಿವಾಹ ವೃತ್ತಾಂತವನ್ನು ಬರೆಯಲೇ? ಇನ್ನೇನೂ ವಿಶೇಷವಿಲ್ಲದುದರಿಂದ ಬರೆಯುವೆನು ಅದನ್ನೇ.*

*ನಾಲ್ಕು ದೊಡ್ಡ ಬರೆಗಳ ಮಧ್ಯದಲ್ಲಿ ಒಂದು ಸಾಧಾರಣ ತರಹದ ಹಳೆಯ ನಮೂನೆಯ ಮಹಡಿಯ ಮನೆ.ಮನೆಯ ಇದಿರಿನಂಗಳಕ್ಕೆ ಮುಟ್ಟಿದಂತೆ ಒಂದು ತೋಡು, ಮನೆಯ ಬಲಭಾಗದಲ್ಲಿ ದನಗಳ ಕೊಟ್ಟಿಗೆ, ಎಡಗಡೆಯಲ್ಲಿ ಬಚ್ಚಲು.*

*ಬಚ್ಚಲಿನಲ್ಲಿಯೂ ತೋಡಿನಲ್ಲಿಯೂ ಆಗುತ್ತಿದ್ದ ಗಲಭೆಯು ವರ್ಣನಾತೀತವಾಗಿದ್ದಿತು. ಬಚ್ಚಲಿನ ಮೇಲೆಲ್ಲಾ ಹೊಗೆ - ಕೆಳಗೆಲ್ಲಾ ನೀರು. ತೋಡಿನಲ್ಲಿ ಪಾತ್ರೆಗಳನ್ನು ಅಲ್ಲಲ್ಲಿ ಬೆಳಗುತ್ತಿರುವುದು,ಸೀರೆಗಳನ್ನು ಒಗೆಯುತ್ತಿರುವುದು, ಒಬ್ಬಿಬ್ಬರ ಜಾರುವಿಕೆ, ಬಾವಿಯಿಂದ ನೀರು ಸೇದುವ ಸೊಬಗು, ಬಟ್ಟೆಗಳನ್ನು ಹಿಂಡುವ ರೀತಿ, ಕಡ್ಡಾಯದ ಕೆಳಗೆ ಹಾಳೆಗಳಿಂದ ಬೆಂಕಿಯನ್ನು ಹೊತ್ತಿಸುವ ರೀತಿ… ಇವೆಲ್ಲವನ್ನು ನೋಡಿದರೆ ಮದುವೆಯ ಮನೆಯ ವಿಜೃಂಭಣೆಯು ವ್ಯಕ್ತವಾಗುತ್ತಿದ್ದಿತು.*

*ನಾಳೆ ದಿನ ಧಾರೆಯಾದುದರಿಂದ ಇಂದು ಬಹಳ ಕೆಲಸ ಒಂದು ಕಡೆಯಲ್ಲಿ ಗುಡಿಸುವಿಕೆ ಸಾರಿಸುವಿಕೆಯು ನಡೆಯುತ್ತಿದ್ದಿತು. ಆಗಲೇ ಅಡಿಗೆಯವನೊಬ್ಬನು ತಿರುಗಾಡುತ್ತಿದ್ದನು. ಅವನ ಸಹಾಯಕ್ಕೆ ಕೆಲವು ವಿಧವೆಯರು ತರಕಾರಿಯನ್ನು ಕೊಯ್ಯುತ್ತಾ, ಅಡಿಗೆಮನೆಯಿಂದ ಉಗ್ರಾಣಕ್ಕೂ, ಉಗ್ರಾಣದಿಂದ ಅಡಿಗೆ ಮನೆಗೂ ತಿರುಗಾಡುತ್ತಿದ್ದರು.'ಏ ತಿಮ್ಮಣ್ಣಾ ಬೇಗ ಅಡಿಗೆಯಾಗದಡೋ!' ಎಂದೊಂದು ಕಡೆಯೂ, 'ಎಂಥಾ ಬೊಜ್ಜಕ್ಕೆ ಕಾಪಿ,ಕುಡಿಯದು ನೀರು ಆಗುತ್ತಿಲ್ಲೆಯೋ?' ಎಂದು ಒಂದು ಕಡೆಯಲ್ಲಯೂ ಕೂಗಾಡುತ್ತಿರುವುದನ್ನು ಕೇಳಿದವರಿಗೆ ಮನಸ್ಸಿಗೆ ಬಹಳ ಆನಂದವಾಗುತ್ತಿದ್ದಿತು.*

*೧೨ನೇ ಜೂನ್ ಬುಧವಾರ x x x x x x x x x x x x x x x x ಇಂದು ಧಾರೆಯಾದುದರಿಂದ ರಾ.ಶಿ.ಈಶ್ವರಭಟ್ಟರ ನೆಂಟರಿಷ್ಟರೆಲ್ಲರೂ ಬಂದಿರುವರು. ಚಪ್ಪರದ ಒಂದು ಕಡೆಯಲ್ಲಿ ಹೆಂಗಸರು "ಕೊಪ್ಪು ಬುಗಡಿ"ಗಳಿಂದ ಅಲಂಕೃತರಾಗಿ ತಲೆಯನ್ನು ಬಿಗಿದುಕಟ್ಟಿ ಪಟ್ಟೆ ಸೀರೆಗಳನ್ನುಟ್ಟು ಕುಳಿತ್ತಿದ್ದರು.*

*ಇನ್ನೊಂದು ಕಡೆಯಲ್ಲಿ ಗಂಡಸರು ಐದುಮೊಳದ ಪಂಚೆಗಳನ್ನುಟ್ಟು ಹೆಗಲ ಮೇಲೆ ಕೆಂಪುವಸ್ತ್ರವನ್ನು ಹಾಕಿ ಹತ್ತಾರು ಜನರು ಒಂದೊಂದು ಕಡೆಯಲ್ಲಿ ಕುಳಿತು ಎಲೆಯಡಿಕೆ ಹೊಗೆಸೊಪ್ಪಿನಿಂದೊಡಗೂಡಿದ ತಟ್ಟೆಗಳನ್ನು ಮಧ್ಯದಲ್ಲಿಟ್ಟುಕೊಂಡು ಅವುಗಳನ್ನು ಜಗಿಯುತ್ತಾ "ನಂಬ್ರಗಳ ವಿಷಯವನ್ನು, ಹೋಟೇಲುಗಳ ವಿಷಯ"ವನ್ನೂ ಏಕಮನಸ್ಸಿನಿಂದ ಚರ್ಚಿಸುತ್ತಿದ್ದರು.*

*ಹೆಂಗಸರ ಗುಂಪಿನಲ್ಲಿ ಮದುಮಾಯನ ಸಿದ್ಧಿ ಮಾತನಾಡುತ್ತಿದ್ದರು. "ಮದುಮಾಯ ವಕೀಲನಡ - ಅವನ ಅಪ್ಪನೂ ವಕೀಲನಡ - ಅವನ ಅಣ್ಣಂಗೆ ಕಚ್ಚೇರಿಲಿ ಕೆಲಸ ಇದ್ದಡ - ಅಲ್ಲಿ ಕೂತದ್ದು ಅವನ ಅತ್ತಿಗೆಯಡ" ಇದೇ ಹೆಂಗಸರ ಮಾತಿನ ಸಾರಾಂಶ.*

*ವರನು ತಲೆಯ ಮೇಲೆ ದೊಡ್ಡದಾದ ರುಮಾಲನ್ನಿಟ್ಟು (ನೀನು ಇಲ್ಲಿರುವಾಗ ನೋಡಿರಬಹುದು: ಬಳೆಸಣ್ಣಪ್ಪ ಶೆಟ್ರ ರುಮಾಲಿನ ತರದ್ದು) ಬಂದನು. ಆತ ದೂರದಲ್ಲಿ ಬರುವಾಗಲೇ ಕೌಪೀನಧಾರಿ ಯಾದ ಮಾವನು ಬಂದು "ಬಂದಿರೋಳಿ" ಎಂದು ಕುಶಲ ಪ್ರಶ್ನೆಯನ್ನು ಮಾಡಿ ವರನನ್ನು ಧಾರಾಮಂಟಪಕ್ಕೆ ಕರೆತಂದು ಕುಳ್ಳಿರಿಸಿದನು.*

*ಮಹೂರ್ತಕ್ಕೆ ಸರಿಯಾಗಿ ವಧುವು ಬಂದಳು. ಎಡಗೈಯ್ಯಲ್ಲೊಂದು ವಾಲೆಕೊಡೆ, ಬಲಗೈಯ್ಯಲ್ಲಿ ದರ್ಭೆಕಟ್ಟು, ತಲೆಯಲ್ಲೊಂದು ಹೊರೆ ಹೂ: ಇನ್ನು ಒಡವೆಗಳ ವಿಜೃಂಭಣೆಯನ್ನು ಕೇಳಬೇಕೆ! ಆದರೆ ಅವುಗಳ ಹೆಸರುಗಳು ನನಗೆ ತಿಳಿಯದಲ್ಲ.*

*ಒಟ್ಟಿನಲ್ಲಿ ಹೇಳುವುದಾದರೆ ಹೊರಲಾರದ ಹೊರೆಯನ್ನು ಹೊತ್ತು ನಡೆಯಲಾರದ ಎತ್ತು, ಆ ಕಡೆ ಈ ಕಡೆ ಬಾಗಿಕೊಂಡು ಬರುವಾಗ, ಗಂಟೆಗಳ ಗಿಣಿಗಿಣಿದವನ್ನು ನಾದವನ್ನು ಬಿತ್ತರಿಸುವ "ಗಗ್ಗರ" ಗಳ ಶಬ್ದವನ್ನು ಮಾಡುತ್ತಾ ಬರುವ ವಧುವನ್ನು ನೋಡಿ ಮದುಮಾಯನಿಗೆ ಸಂತೋಷವಾಯಿತೆಂದು ಬೇರೆ ಹೇಳಬೇಕೇನು? ಧಾರೆಯಾಯ್ತು. ಊಟಮುಗಿಯಿತು. ಮದುಮಾಯನೊಡನೆ ಮದುಮಾಳು ಗಟ್ಟ ಹತ್ತಬೇಕಾಯ್ತು.*

*ನಾವೆಲ್ಲರೂ ಆರೋಗ್ಯದಿಂದಿರುವೆವು ನೀನು ಸಹ ಹುಶಾರಾಗಿರಬಹುದೆಂದು ಭಾವಿಸುತ್ತೇನೆ. ನಿಮ್ಮ ಬಾಳೆತೋಟದ ನಾರಾಯಣೈಯ್ಯನವರ ಹೆಂಡತಿಸತ್ತು ಹೋದದ್ದು*

*ನಿನಗೆ ಗೊತ್ತಿರಬಹುದು. ಕೃಷ್ಣದಾಸನು ಪ್ರೇಮಪೂರ್ವಕವಾದ ನಮಸ್ಕಾರಗಳನ್ನು ತಿಳಿಸಲು ನನ್ನಲ್ಲಿ ಹೇಳಿರುವನು. ನಿನಗೆ ಪರೀಕ್ಷೆ ಯಾವಾಗ? ಅಪ್ಪಯ್ಯ ಕರೆಯುತ್ತಿದ್ದಾರೆ. ಆದುದರಿಂದ ಈ ಕಾಗದವನ್ನು ಅಂತ್ಯಗೊಳಿಸುತ್ತೇನೆ.*

*ಇತಿ*

*"ಗೌರಮ್ಮ"*

*'ನಮ್ಮೂರಿಗೆ ಈಗ ಪಿ.ಮೇದಪ್ಪ ಹೈಕೋರ್ಟು ವಕೀಲರು ಸಬಾರ್ಡಿನೇಟ್ ಜಡ್ಜಿ. ನಿನಗಿದು ತಿಳಿದಿರಬಹುದು. ಈಗ ಕೋರ್ಟಿನಲ್ಲಿ ಹೆಚ್ಚೇನೂ ಕೆಲಸವಿಲ್ಲ. ನವಂಬರ್ ನಲ್ಲಿ ಇಲ್ಲಿಗೆ ವೈಸ್ರಾಯರು ಬರುತ್ತಾರಾದುದರಿಂದ ರಸ್ತೆಗಳ ಕೆಲಸವು ಅತಿ ಜಾತ್ರತೆಯಿಂದ ನಡೆಯುತ್ತಿದೆ. ಮಳೆ ಹೆಚ್ಚಿಲ್ಲ ನಮಗೆ ನೀರು ರಾತ್ರೆ ಬರುತ್ತದೆಷ್ಟೆ. ಈಗ ಇತರ ಊರುಗಳಂತೆ ಕೊಡಗೂ ಖೂನಿಗಳ ತೌರುಮನೆಯಾಗಿದೆ. ಮೂವರಿಗೆ ಪಾಶಿಯಾದರೂ ಈಗ ಒಂದು ತಿಂಗಳೊಳಗೆ ಏಳು ಖೂನಿಗಳಾದವು.*

*'ಗಣಪಯ್ಯನಿಗೆ ಒಂದು ಮಗುವಾಗಿದೆ. ಅವನ ಹೆಂಡತಿಗೆ ಕಾಯಿಲೆಯಾಗಿತ್ತು. ಮೊನ್ನೆ ದಿನ ಸೋಮವಾರ ಪೇಟೆಯಿಂದ ಮಕ್ಕಿಗೆ ಹೋಗಿರುತ್ತಾನೆ. ಈಗ ದೇವಮ್ಮನಿಗೆ ಕಾಯಿಲೆ ಸ್ವಲ್ಪ ವಾಸಿ ವೆಂಕಪ್ಪಯ್ಯನು ಈಗ ಸೋಮುವಾರಪೇಟೆಯಲ್ಲಿಲ್ಲ. ಅವನು ಮೈಸೂರಿಗೆ ಓಡಿಹೋಗಿದ್ದಾನೆ.*

*ಗೌರಮ್ಮ*

ಆಗಷ್ಟೇ ಮೆಟ್ರಿಕ್ ಪಾಸಾಗಿ, ಸ್ವಂತ ಸಂಸಾರವನ್ನು ನಿಭಾಯಿಸ ಹೊರಟಿದ ಹದಿನೇಳರ ಹರೆಯದ ಗೌರಮ್ಮನವರು ತಮ್ಮ ಈದು ಹಗೂ ಸಾಹಿತ್ಯಿಕ, ಸಾಂಸ್ಕೃತಿಕ, ಚಟುವಟಿಕೆಗಳ ನಡುವೆಯೂ ಆ ಕುಟುಂಬದ ಹತ್ತಿರದ ಬಳ್ಳಿಗಳ ಜತೆ ಮಾತ್ರವಲ್ಲ ದೂರದ ಸಂಬಂಧಿಗಳ ಜತೆಯೂ ಸೌಹಾರ್ದಯುತ ಸಂಬಂಧವನ್ನು ಜೋಪಾನವಾಗಿ ಕಾಪಾಡಿಕೊಳ್ಳುತ್ತಿದ್ದರು.

ಗೌರಮ್ಮನವರು ಹೈಸ್ಕೂಲ್ ಶಿಕ್ಷಣ ಮುಗಿಸಿದ ನಂತರದಲ್ಲಿ ಗೆಳತಿ ಮುತ್ತಮ್ಮನ ಜತೆ ಪತ್ರವ್ಯವಹಾರವನ್ನಿರಿಸಿಕೊಂಡವರು... ಮುಂದೆ ಆ ಮುತ್ತಮ್ಮ ಪಂಜಾಬಿನ ಗೆಳೆಯ ರಸ್ತೋಗಿಯನ್ನು ವರಿಸಿ 'ಪದ್ಮಾವತಿ ರಸ್ತೋಗಿ' ಯಾಗಿ ಬದಲಾದ ನಂತರವೂ ತಮ್ಮ ಪತ್ರಸ್ನೇಹವನ್ನು ಮುಂದುವರೆಸುತ್ತ... ಆಕೆಯಿಂದ ಸಕಾಲದಲ್ಲಿ ಸಾಹಿತ್ಯದ ಸಲಹೆ - ಸಹಕಾರವನ್ನು ಪಡೆದು ತಮ್ಮ ಪಾಶ್ಚಾತ್ಯ ಓದಿನ ದಾರಿಯನ್ನು ಸ್ಪಷ್ಟಪಡಿಸಿಕೊಂಡರು.

ಅಂತೆಯೇ ಸ್ನೇಹಜೀವಿ ಗೌರಮ್ಮನವರು ಬಲು ವಿಶ್ವಾಸದಿಂದ ದ. ಬಾ. ಕುಲಕರ್ಣಿ ಅವರಿಗೆ ಬರೆದ ಎರಡು ಪತ್ರಗಳ ತುಣುಕುಗಳು ಇಲ್ಲಿವೆ.

'ನಿಮ್ಮ ಕಾಗದ ಬಂದಾಗ ನಾನು ಟೆನ್ನೀಸು ಆಡುತ್ತಿದ್ದೆ. ಟಪಾಲಿನವನು ಕಾಗದ ಕೊಟ್ಟೊಡನೆಯೆ ನೋಡಿದೆ - ಯಾರದ್ದೆಂದು; ನಿಮ್ಮದು ! ಇಷ್ಟರವರೆಗೆ ಗೆಲ್ಲುತ್ತ ಬಂದವಳು, ನಿಮ್ಮ ಕಾಗದ ಓದುವ ಆತುರತೆಯಲ್ಲಿ ಸೋತೇ ಹೋದೆ.ನನಗೆ ಇದಿರಾಗಿ ಆಡುತ್ತದ್ದವರು, ನಿಮ್ಮನ್ನು ಬಹಳ ಹೊಗಲಿದರು; ನಿಮ್ಮ ಕಾಗದದಿಂದಾಗಿಗೆಲುವು ಅವರದ್ದಾಯ್ತಲ್ಲಾ - ಎಂದು. ನಾನು ನಿಮ್ಮ ಕಾಗದ ಸ್ವಲ್ಪ ದೂರಿದೆನೆಂದರೆ ನಿಮಗೆ ಕೋಪ ಬರುವುದೇನೋ? ಅಂತೂ ನಾವಿಬ್ಬರೂ ಜೋತೆಯಾಗಿಯೇ ಓದಿದೆವು. ಓದಿ, ಸೋತ ಬೇಸರ ಮರೆಯಿತು; ಅಷ್ಟೊಂದು ಚೆನ್ನಾಗಿದೆ ನಿಮ್ಮ 'ಕುಳಿತ ಕನ್ನೆ' 'ನನಗೆ ಎಲ್ಲ ಕಡೆಯಿಂದಲೂ ಪತ್ರ ಬರುತ್ತಿರಬೇಕು - ಎಂದರೆ ಬಹಳ ಇಷ್ಟ. ಆದರೆ ನಾನು ಸೋಮಾರಿ, ಸಮಯಕ್ಕೆ ಉತ್ತರ ಬರೆಯದೆ ಎಷ್ಟೋ ಜನರನ್ನು ಬೇಸರಪಡಿಸಿದ್ದೇನೆ'

(ಪತ್ರದ ಸಂದರ್ಭ: ದ. ಬಾ. ಕುಲಕರ್ಣಿ ಅವರು ಧಾರವಾಡದಿಂದ ತಮ್ಮ ಕಥೆಯೊಂದನ್ನು ಗೌರಮ್ಮನವರ ಅವಲೋಕನಕ್ಕಾಗಿ ಕಳುಹಿಸಿದಾಗ ಗೌರಮ್ಮನವರು ಆ ಪತ್ರಕ್ಕೇ ಪ್ರತಿಕ್ರಿಯಿಸಿದ್ದು)

"ಬಳ್ಳಾರಿ ಸಾಹಿತ್ಯ ಸಮ್ಮೇಳನವಾಗಿ ಒಂದು ವಾರ ಕಳೆದರೂ ನಿಮ್ಮ ಪತ್ರವೇ ಇಲ್ಲ. ನನಗಂತೂ ನಿಮ್ಮ ಪತ್ರದ ಹಾದಿ ನೋಡಿನೋಡಿ ಕಣ್ಣುನೋವು ಬಂದು ಹೋಗಿದೆ. ಸಾಹಿತ್ಯ ಸಮ್ಮೇಳನದ ವಿಷಯ ಪೇಪರುಗಳಲ್ಲಿ ಓದುವುದಕ್ಕಿಂತಲೂ ನಿಮ್ಮ ಪತ್ರದಲ್ಲಿ ಓದಿದರೆ ಹೆಚ್ಚು ಚೆಂದವೆಂದು ನನ್ನ ಭಾವನೆ. ಆದರೆ ನೀವು ಎಲ್ಲವನ್ನೂ - ಒಂದೂ ಬಿಡದೆ - ನನ್ನ ಗೆಳತಿ ಕುಮಾರಿ ಪದ್ಮಾವತಿಯ ವಿಷಯ ಸಹ - ಬರೆಯಬೇಕೆಂದು ಆಸೆ ನನಗೆ. ಪತ್ರಿಕೆಗಳಲ್ಲಿ ಕೇವಲ ಣ - ನ ದ ಜಗಳಗಳಲ್ಲದೆ ಬೇರೇನೂ ಇಲ್ಲ ಹೇಗೆ? ಬರೆಯುವುರೋ ಇಲ್ಲವೋ?" (ಪತ್ರದ ಸಂದರ್ಭ: ಬಳ್ಳಾರಿ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದ ದ.ಬಾ. ಕುಲಕರ್ಣಿ ಅವರು ಗೌರಮ್ಮನವರಿಗೆ ಕೊಟ್ಟ ಮಾತಿನಂತೆ ಸಮ್ಮೇಳನದ ಕುರಿತು ಪತ್ರ ಬರೆಯದೆ ಇದ್ದಾಗ ಗೌರಮ್ಮನವರು ಕಳುಹಿಸಿದ 'ನೆನಪಿನ ಓಲೆ')

ಕೆಲವೊಮ್ಮೆ ಅಂತರ್ಮುಖಿಯಾಗಿರುತ್ತದ್ದ ಗೌರಮ್ಮನವರು ಉತ್ತಮ ಮಾತುಗಾರ್ತಿ ಕೂಡಾ ಹೌದು. ಆದರೆ ಅವರು ವೇದಿಕೆ - ಸಮಾರಂಭ - ಸಭೆಗಳಲ್ಲಿ ಮಾತನಾಡಲು ಹಿಂಜರಿಯುತ್ತಿದ್ದರು. ಸಾಹಿತ್ಯದ ಸಭೆ - ಸಮಾರಂಭಗಳಲ್ಲಿ ಶ್ರೋತೃವಾಗಿ ಆಥವಾ ಸಾಹಿತ್ಯಿಕ ಪರಿಚಾರಿಕೆಯಾಗಿ ಪಾಲ್ಗೊಳ್ಳಲು ಸದಾ ಮುಂದಿರುತ್ತಿದ್ದ ಗೌರಮ್ಮನವರು... ಸಭೆಯಲ್ಲಿ ಸಾಹಿತ್ಯಿಕವಾಗಿ ಚರ್ಚಿಸಬೇಕಾದ ಸಂದರ್ಭದಲ್ಲಿ ತಕ್ಷಣವೇ ಮುಜುಗರದಿಂದ ಹಾಗು ಭಯದಿಂದ ಹಿಂಜರಿಯುತ್ತಿದ್ದರು - ಮಾತೇ ಆಡುತ್ತಿರಲಿಲ್ಲ.

ಗೌರಮ್ಮನವರ ಜೀವನಪ್ರೀತಿ, ಜೀವನದೃಷ್ಟಿ, ಸಾಮೂಹಿಕ ಬದುಕಿನಲ್ಲಿ ಅವರಿಗಿದ್ದ ಆಸ್ಥೆ, ಅವರೊಳಗಿದ್ದ ಆತ್ಮವಿಶ್ವಾಸ, ಲಿಂಗಭೇದವಿಲ್ಲದ ಸ್ನೇಹಶೀಲತೆ ಸರಳತೆ ಪ್ರಗತಿಶೀಲತೆ, ನಿರ್ಧಾರದೊಳಗಿನ ದೃಢತೆ, ನಾಡು - ನುಡಿಯ ಬಗೆಗೆ ಅವರಿಗಿದ್ದ ಸಾಮಾಜಿಕ ಅರಿವು, ಒಟ್ಟಿನಲ್ಲಿ ಅವರ ಮಾನವೀಯ ಅಂತಃಕರಣ, ಸುಸಂಸ್ಕೃತ ನಡವಲಿಕೆ, ಸನಾಜಮುಖಿ - ಜೀವನಾಭಿಮುಖಿ ಹಾಗೂ ಕ್ರಿಯಾಮುಖಿ ಸ್ವಭಾವದ ಪರಿಚಯವನ್ನು ಸಾಹಿತಿ ದ.ಬಾ. ಕುಲಕರ್ಣಿ ಅವರು ಗೌರಮ್ಮನವರ ಸಾವಿನ ಸಂದರ್ಭದಲ್ಲಿ ಬರೆದಿರುವ 'ನಾನು ಕಂಡ ಗೌರಮ್ಮ' ಎಂಬ ಲೇಖನದಲ್ಲಿ (೨೦-೦೪-೧೯೩೯) ಹೀಗೆ ಪ್ರತಿಬಿಂಬಿಸಿದ್ದಾರೆ (ಈ ಲೇಖನದಲ್ಲಿ ಅವರು ೧೯೩೯ ರ ಅಗಸ್ಟ್ ನಲ್ಲಿ ತಾವು ಪ್ರಕಟಿಸಿದ 'ಕಂಬನಿ' ಕಥಾಸಂಕಲನದ ಮೊದಲ ಆವೃತ್ತಿಯಲ್ಲಿ ಅಳವಡಿಸಿಕೊಂಡಿದ್ದಾರೆ). ಆ ಲೇಖನದಲ್ಲಿ ಭಾಗಶಃ ರೂಪ ಇಲ್ಲಿದೆ.

*ಜಮಖಂಡಿಯ ಕನ್ನಡ ಸಾಹಿತ್ಯ ಸಮ್ಮೇಳನದ ಮಂಟಪದಲ್ಲಿ ಗೌರವರ್ಣದ, ಅಷ್ಟು ಎತ್ತರವಲ್ಲದ, ತೆಳ್ಳಗಿದ್ದರೂ ಹಾಗೆ ಕಾಣದ, ಒಬ್ಬ ಮಹಿಳೆ ಕುಳಿತಿದ್ದನ್ನು ನೋಡಿದೆ: ಉಟ್ಟದ್ದೊಂದು ಖಾದಿಯ ಬಟ್ಟೆ; ತೊಟ್ಟದ್ದೂ ಖಾದಿಯೇ. ಮೂಗಿಗೊಂದು ಹರಳಿನ ಮೂಗು ಬಟ್ಟು. ಉಳಿದ ಯಾವ ಆಭರಣವೂ ಇಲ್ಲ. ಕಣ್ಣುಗಳಲ್ಲಿ ಅದೊಂದು ಬಗೆಯ ಒಳನೋಟ. ಮುಖದಲ್ಲಿ ಅದೇನೋ ಒಂದು ಗಂಭೀರಭಾವ. ಆದರೂ ಯಾರಾದರೂ ಮಾತನಾಡಿಸಿದರೆ ಮೊದಲು ನಗೆ, ಆಮೇಲೆ ಮಾತು. ಒಮ್ಮೊಮ್ಮೆ ನಗುವಷ್ಟೆ ನುಸುಳಿ, ಮಾತುಬಾರದೆ ಉಳಿಯುತ್ತಿತ್ತು. ಒಮ್ಮೆ ನೋಡಿದರೆ ಸಾಕು: ಇವರ ಪರಿಚಯವಾಗಬೇಕು ಎನಿಸುವಂತಹ ವ್ಯಕ್ತಿತ್ವ.*

*ಅವರು ಕೊಡಗಿನವರೆಂದು ತಿಳಿದಾಗ ನನಗೆ ತುಂಬ ಕುತೂಹಲವಾಯಿತು. ಮತ್ತೆ ವಿಚಾರಿಸಿದಾಗ, ಅವರೇ ಶ್ರೀಮತಿ ಗೌರಮ್ಮ - ಮಿಸೆಸ್ ಬಿ.ಟಿ.ಜಿ. ಕೃಷ್ಣ - ಎಂದು ತೀಳಿದು ಸಂತೋಷವಾಯಿತು.*

*ಅದಕ್ಕೂ ಮೊದಲು 'ರಂಗವಲ್ಲಿ' ಕಥಾಸಂಗ್ರಹದ ಕಾರ್ಯದಲ್ಲಿ, ಪತ್ರವ್ಯವಹಾರದಿಂದ ಅವರ ಪರಿಚಯವಾಗಿತ್ತು.*

*'ರಂಗವಲ್ಲಿಯ' ಗೌರಮ್ಮನವರ 'ಮನುವಿನ ರಾಣಿ' ಎಂಬ ಕಥೆಯ ಬಗ್ಗೆ ನನಗೆ ಬಂದ ಕೆಲವು ಪ್ರಶಂಸೆಗಳನ್ನು ಅವರಿಗೆ ತಿಳಿಸಿದಾಗ, ಅವರು ತಮ್ಮ ಆ ಕತೆಯ ವಿಷಯಕ್ಕಿದ್ದ ಅತೃಪ್ತಿಯನ್ನು ತಾವೇ ಸೂಚಿಸಿದರು. ಆಗಲೇ ಅವರು ಹೊಗಳಿಕೆಗೆ ಹಿಗ್ಗುವವರಲ್ಲ ಎನಿಸಿತು...*

*ತಮ್ಮ ಬರಹಗಳಿಗೆ ಶ್ರೀಮತಿ ಬಿ.ಟಿ.ಜಿ. ಕೃಷ್ಣ ಎಂದೇ ತಮ್ಮ ಹೆಸರನ್ನು ಬರೆದುಕೊಳ್ಳುತ್ತದ್ದ ಗವರಮ್ಮನವರನ್ನು - ಕೊಡಗಿನ ಹೊರಗಿರುವ ಓದುಗರು, ಸಾಹಿತ್ಯ ಪ್ರೇಮಿಗಳು,ಸಾಂಸ್ಕೃತಿಕ ಲೋಕದ ಸಂಗಾತಿಗಳೆಲ್ಲ ಬಲು ಅಕ್ಕರೆಯಿಂದ 'ಕೊಡಗಿನ ಗೌರಮ್ಮ' ಎಂದೇ ಕರೆದು ಗೌರಮ್ಮನವರ ಜತೆಗೆ ಕೊಡಗನ್ನೂ ಜನಪ್ರಿಯಗೊಳಿಸಿದರು.*

*೧೯೩೧ರಲ್ಲಿ ಗಂಡು ಮಗುವೊಂದರ ತಾಯಿಯಾದ ಗೌರಮ್ಮನವರು ಅದೇ ವರ್ಷ ಸ್ತ್ರೀ ವಿಮೋಚನೆ. ಬಂಡಾಯದ ಧ್ವನಿ ಇರುವ ತನ್ನ ಮೊದಲ ಕಥೆ 'ಪುನರ್ ವಿವಾಹ'ವನ್ನು ಕನ್ನಡ ಸರಸ್ವತ ಲೋಕಕ್ಕೆ ನೀಡಿದರು. ಗವರಮ್ಮನವರ ಬದುಕಿನಲ್ಲಿ ಮಗ 'ವಸಂತ' ನಾಗಮನವಾದ ನಂತರ ಅವರು ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದಲ್ಲಿ ಇನ್ನಷ್ಟು ಕ್ರಿಯಾಶೀಲರಾದರು. ಕುಮಾರವ್ಯಾಸ ಮತ್ತು ಉಮರ್ ಖಯಾಮ್ ಕಾವ್ಯದ ಬಗ್ಗೆ ಅಪಾರ ಆಸಕ್ತಿಯನ್ನು ಹೊಂದಿದ್ದ ಗೌರಮ್ಮನವರು, ಜನಪದ ಗೀತೆಗಳನ್ನು ಸೊಗಸಾಗಿ ಹಾಡುತ್ತಿದ್ದರಲ್ಲದೆ ಜನಪದ ಗೀತೆಗಳ ಸಂಗ್ರಹಣೆ ಕೂಡ ಅವರದ್ದೊಂದು ಹವ್ಯಾಸವಾಗಿತ್ತು. ಅವರು ತುಳವ ದುಡಿಮೆಯಾಳುಗಳಲ್ಲಿ ಪಾಡ್ದನ ಗಳನ್ನೂ ಹಡಿಸಿಕೊಳ್ಳುತ್ತಿದ್ದರಂತೆ.*

*ತಮ್ಮ ಮೊದಲ ಕಥೆ 'ಪುನರ್ ವಿವಾಹ' ದ ನಂತರ... ಮತ್ತೆ ಅಳುಕಿನಿಂದ ಹಿಂತಿರುಗಿ ನೋಡದೆ, ಕಥೆ ಬರೆಯಲಾರಂಭಿಸಿದ ಗೌರಮ್ಮನವರು - ಅವರ ಜೀವನವನ್ನು ೧೯೩೯ ಎಪ್ರಿಲ್ ೧೨ ರಂದು, ಹರದೂರಿನ ಹಟ್ಟಿಹೊಳೆಯು ನುಂಗಿ ನೀರು ಕುಡಿಯುವವರೆಗೂ ಒಟ್ಟು ೨೧ ಕಥೆಗಳನ್ನು ಬರೆದರು.*

*ಅಂದಿನ ಸಮಾಜದಲ್ಲಿದ್ದ ಸಂಪ್ರದಾಯ, ಬದಲಾಗುತ್ತಿರುವ ಜೀವನಶೈಲಿ, ಹೆಣ್ಣು - ಗಂಡುಗಳ ಆಕರ್ಷಣೆ - ವಿಕರ್ಷಣೆ, ತಮ್ಮ ಮಹಿಳಾ ಲೋಕದಲ್ಲಿನ ಕನಸು - ಆದರ್ಶಗಳಚಿತ್ರಣವನ್ನು ಅವರು ತಮ್ಮ ಎಲ್ಲ ಕಥೆಗಳಲ್ಲಿ ಯಥಾವತ್ತಾಗಿ ಚಿತ್ರಿಸಲು ಪ್ರಯತ್ನಿಸಿದರು.*

ಗೌರಮ್ಮನವರು ಬರೆದಿರುವ ಒಟ್ಟು ೨೧ ಕಥೆಗಳನ್ನು ಅವುಗಳಲ್ಲಿರುವ ಕಥಾವಸ್ತುಗಳ ಹಿನ್ನೆಲೆಯಲ್ಲಿ ಮುಖ್ಯ ಮೂರು ವರ್ಗಗಳಾಗಿ ವಿಭಾಗಿಸಬಹುದು.

೧. ಬಾಲ್ಯ ವಿವಾಹ, ವಿಧವಾ ಸಮಸ್ಯೆ ವಿಧವಾ ವಿವಾಹದ ಸುತ್ತ ಹೆಣೆದಿರುವ ಕಥೆಗಳು

೨. ಪ್ರೀತಿ ಪ್ರಣಯ ಕೇಂದ್ರಿತ ಸಂಭ್ರಮ ಮತ್ತು ವಿಷಾದದ ಕಥೆಗಳು

೩. ವರದಕ್ಷಿಣೆ ಸಮಸ್ಯೆ - ವಿದೇಶಿ ಶಿಕ್ಷಣ ವ್ಯಾಮೋಹಕ್ಕೆ ಸಂಬಂಧಿಸಿದ ಕಥೆಗಳು

ಇವರ ಈ ಎಲ್ಲ ಕಥೆಗಳು ಅಂದಿನ ಮೌಲಿಕ ಹಾಗೂ ಜನಪ್ರಿಯ ಪತ್ರಿಕೆಗಳಾದ '*ಜಯಕರ್ನಾಟಕ*' '*ರಾಷ್ಟ್ರಬಂಧು*' '*ಪ್ರಜಾಮತ*' ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾದವು. ಅವರ ಒಟ್ಟು ೨೧ ಕಥೆಗಳಲ್ಲಿ ೧೨ ಕಥೆಗಳು ಅವರ ಮರಣಾನಂತರ ಪ್ರಕಟಗೊಂಡ ಪ್ರಥಮ ಕಥಾಸಂಕಲನ '*ಕಂಬನಿ*'ಯಲ್ಲು ಇನ್ನುಳಿದ ೯ ಕಥೆಗಳು ಎರಡನೆಯ '*ಚಿಗುರು*' ಕಥಾಸಂಕಲನದಲ್ಲೂ ಅಡಕಗೊಂಡಿವೆ.

೧೯೩೭ರಲ್ಲಿ ಜಮಖಂಡಿಯಲ್ಲಿ ಬೆಳ್ಳಾವೆ ವೆಂಕಟನಾರಾಯಣಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕೊಡಗಿನ ಪ್ರತಿನಿದಿಯಾಗಿ ಏಕಾಂಗಿಯಾಗಿ ಭಾಗವಹಿಸಿ ಬಂದ ದಿಟ್ಟೆ - ಉತ್ಸಾಹಿ ಈ ಗೌರಮ್ಮನವರು. ದಕ್ಷಿಣ ಕನ್ನಡದ ಪ್ರತಿಷ್ಠಿತ ಸಾಂಸ್ಕೃತಿಕ ಸಂಸ್ಥೆಯಾದ ಉಡುಪಿಯ ಗೆಳೆಯರ ಬಳಗವು ಇವರ ಕತೆಯೊಂದಕ್ಕೆ ಚಿನ್ನದ ಪದಕ ನೀಡಿ ಗೌರವಿಸಿದ್ದರಿಂದ ಅವರ ಕಥೆ ಬರೆಯುವ ಉತ್ಸಾಹಕ್ಕೆ ಮತ್ತಷ್ಟು ಚೈತನ್ಯ ಸಿಕ್ಕಂತಾಗಿತ್ತು.

ಗೌರಮ್ಮನವರು ಜೀವಿಸಿರುವಾಗಲೆ ಪ್ರಕಟಿಸಲು ಯೋಜಿಸಿದ್ದ (ನಿಧನರಾಗುವದಕ್ಕಿಂತ ೬ ತಿಂಗಳ ಮೊದಲೆ ಪ್ರಕಟಿಸಬೇಕಾಗಿದ್ದ) ಅವರ ಮೊದಲ ಕಥಾಸಂಗ್ರಹಕ್ಕೆ 'ಚಿಗುರು' ಎಂಬ ಹೆಸರಿಡಲಾಗಿತ್ತು. ಆದರೆ ಸಾಯುವುದಕ್ಕಿಂತ ಒಂದರೆಡು ದಿನಗಳ ಹಿಂದೆ ಆ ಸಂಕಲನದ ಹೆಸರನ್ನು 'ಕಂಬನಿ' ಎಂದು ಮಾರ್ಪಡಿಸಬೇಕೆಂದು ಪ್ರಕಾಶಕರಲ್ಲಿ ಗೌರಮ್ಮನವರು ಕೇಳಿಕೊಂಡಿದ್ದರು. ತಮ್ಮ ಸಾವಿನ ಬಗ್ಗೆ ಪೂರ್ವಸೂಚನೆ ಇತ್ತು ಎಂಬಂತೆ ತಮ್ಮ ಪ್ರಥಮ ಸಂಕಲನದ ಶೀರ್ಷಿಕೆಯನ್ನು ಬದಲಿಸಿ ಬಿಟ್ಟು, ತನ್ನ ಆ ಪ್ರಕಟಿತ ಪುಸ್ತಕವನ್ನು ನೋಡದೆಯೇ ಮತ್ತೆಂದೂ ಬರಲಾಗದ ಜಗತ್ತಿಗೆ ನಡೆದ ಗೌರಮ್ಮನವರ ಬಗ್ಗೆ, ಆ ಪುಸ್ತಕದ ಪ್ರಕಾಶಕರು ದುಃಖಿತರಾಗಿ ಹೀಗೆನ್ನುತ್ತಾರೆ.

ಮೊನ್ನೆ ಮೊನ್ನೆ ಗೌರಮ್ಮನವರು '*ಚಿಗುರು*' ಎಂಬ ತಮ್ಮ ಕಥಾ ಸಂಕಲನದ ಹೆಸರನ್ನು '*ಕಂಬನಿ*' ಎಂದು ಮಾರ್ಪಡಿಸಿ, ತಾವು ಪುಸ್ತಕ ನೋಡದೆ ಕನ್ನಡಿಗರೆಲ್ಲ ಕಂಬನಿಗರೆಯುವಂತೆ ಮಾಡಿ, ನಮ್ಮನ್ನಗಲಿ ಹೋದರು. ಇವರ ಕಥೆಗಳಿಂದ ಚಿಗುರಿದ ಹೆಣ್ಣು ಮಕ್ಕಳ ಸಾಹಿತ್ಯ, ಕನ್ನಡ ಸಾಹಿತ್ಯದಲ್ಲಿ ಮಂಗಲಪ್ರದವಾಗಿ ಬೆಳೆಯುತ್ತಿರುವ ಈ ಕಾಲದಲ್ಲಿ, ಇವರ ಮರಣದಿಂದ ಕನ್ನಡ ನಾಡೇ ಮರುಗುವಂತಾಯಿತು. `ಓ' ಗೆಡದ ನಾಡಿಗೆ ನಡೆದು ಬಿಟ್ಟರವರು. ಈ ಎಲ್ಲ ಸವಿ ನೆನಪುಗಳ ಹಿಂದೆ ಒಂದು ಕರಾಳ ಸತ್ಯವು ತಾಂಡವವಾಡಿ ಅವರ ಬಳಗವನ್ನೂ - ಕನ್ನಡ ನಾಡನ್ನೂ ಅಪಾರ ಶೋಕಕ್ಕೀಡು ಮಾಡಿದೆ - ಎಂದು.

**ಬದುಕಿನ ಬತ್ತಿ ಆರಿದ ಹೊತ್ತು**

ಗೌರಮ್ಮನವರ ಕ್ರಿಯಾಮುಖಿಯಾದ ಸ್ವಭಾವ, ಅವರ ಚುರುಕುತನ, ಚಟುವಟಿಕೆ ಕಂಡವರಿಗೆ, ಇಷ್ಟೊಂದು ಕ್ರಿಯಾಶೀಲತೆ ಹೀಗೆ ಒಂದೆಡೆ... ಒಬ್ಬರಲ್ಲಿಯೆ ಶೇಖರಗೊಳ್ಳುವುದಕ್ಕೆ ಸಾಧ್ಯವೇ ಎಂಬ ಅಚ್ಚರಿ ಹುಟ್ಟಿಸುವಷ್ಟರ ಮಟ್ಟಿಗೆ ಅವರುಬದುಕಿನಲ್ಲಿ

ಉತ್ಸಾಹಿಯಾಗಿದ್ದವರು. ಸೊಪ್ಪು - ತರಕಾರಿಗಳ ಕೈತೋಟ ಮಾಡುವುದರಿಂದ ಹಿಡಿದು ಹೂ - ತೋಟ ಬೆಳೆಸುವುದರಲದಲಿ ನಿಷ್ಣಾತರಾಗಿದ್ದ ಗೌರಮ್ಮನವರು ಅಡುಗೆಯಲ್ಲೂ ಕೂಡಾ ಅಷ್ಟೇ ಪ್ರವೀಣೆ. ಕಸೂತಿ ಹಾಕುವುದರ ಜೊತೆಗೆ ಟೆನಿಸ್ ಆಟದಲ್ಲಿ ಬಲು ಚುರುಕು. ಈಜು ಕೂಡ ಇವರಿಷ್ಟದ ಕ್ರೀಡೆ. ಆಗಷ್ಟೇ ಈಜು ಕಲಿತು ಮೀನಿನಂತೆ ಈಜುತ್ತಿದ್ದ ಗೌರಮ್ಮನವರು ಬಿಡುವಾದಾಗಲೆಲ್ಲಾ ಈಜಲು ಹಾರುತ್ತಿದ್ದುದು ಹರದೂರಿನ ಹಟ್ಟಿಹೊಳೆಗೆ. ಇದನ್ನು 'ಹರದೂರ ಹೊಳೆ ' ಎಂದೂ ಕರೆಯುತ್ತಾರೆ. ಈ ಹೊಳೆಯೇ ಮುಂದೆ ಹೋಗಿ ಮಸಾಪುರ ಹೊಳೆಯನ್ನು ಸೇರಿ ಅಲ್ಲಿಂದ ಮುಂದುವರೆದು ಹಾರಂಗಿ ಹೊಳೆಯಾಗುತ್ತದೆ. ಆ ಹೊಳೆಯ ನಂತರ ಕಾವೇರಿಯನ್ನು ನದಿಯನ್ನು ಸೇರುತ್ತದೆ.

ಗೌರಮ್ಮನವರು ತಮ್ಮ ವಾಸ್ತವ್ಯವನ್ನು ಗುಂಡುಕುಟ್ಟಿ ಬಂಗ್ಲೆಯ ಪಕ್ಕದಲ್ಲಿದ್ದ ತಮ್ಮ ಹಳೆಮನೆಯಿಂದ ಸುಮರು ಮೂರು ಫರ್ಲಂಗ್ ದೂರದಲ್ಲಿರುವ ಮತ್ತು ಯಲಕ್ಕಿ ಗುಂಡಿಗೆ ಸುಮರು ಒಂದುವರೆ ಫರ್ಲಂಗ್ ಹತ್ತಿರದಲ್ಲಿದ್ದ ಯುರೋಪಿಯನ್ ಬಂಗ್ಲೆಗೆ (ಎಸ್ಟೇಟ್ ಮಾಲೀಕ ಗುಂಡುಕಟ್ಟಿ ಮುಂಜುನಾಥಯ್ಯನವರು ಹೊಸದಾಗಿ ಖರೀದಿಸಿದ್ದ) ಬದಲಾಯಿಸಿದ ನಂತರ ಅವರು ಬಿಡುವಾದಾಗಲೆಲ್ಲ ಈಜುವುದಕ್ಕೆ ತೆರಳುತ್ತಿದ್ದುದು - ತಮ್ಮ ಮನೆ ಬಳಕೆಗೆ ನೀರು ತರುತ್ತಿದ್ದ ಯಾಲಕ್ಕಿ ಗುಂಡಿಗಿಂತ ಕೂಗಳತೆಯ ದೂರದಲ್ಲಿದ್ದ ಹರದೂರು ಹೊಳೆಗೆ. ತಮ್ಮ ಸೋದರನಷ್ಟೇ ಇಷ್ಟದ ಮೈದುನ ಗೋವಿಂದಯ್ಯನವರಲ್ಲಿ ಈಜು ಕಲಿತಿದ್ದ ಗೌರಮ್ಮನವರು… ಬೇಸಿಗೆ ದಿನಗಳಲ್ಲಿ ಸಾಮಾನ್ಯವಾಗಿ ದಿನವೂ ತೆರಳುತ್ತಿದ್ದುದು ಸಮಾನ ಮನಸ್ಕ ಆತ್ಮೀಯರೊಂದಿಗೆ. ಕೆಲವೊಮ್ಮೆ ಪತಿ ಗೋಪಾಲಕೃಷ್ಣಯ್ಯ ಹಾಗೂ ಮೈದುನ ಗೋವಿಂದಯ್ಯನವರೂ ಅವರೊಂದಿಗೆ ಈಜಿಗೆ ತೆರಳುತ್ತಿದ್ದುದು ಇತ್ತು.

ಆದರೆ ಅಂದು… ಅಂದರೆ ಹಟ್ಟಿಹೊಳೆ ಗೌರಮ್ಮನವರು ಜೀವವನ್ನು ನುಂಗಿದ ದಿನ ಅವರ ಪತಿ ಗೋಪಾಲಕೃಷ್ಣಯ್ಯನವರು ಮಡದಿಯೊಂದಿಗೆ ಈಜಲು ತೆರಳಬೇಕಾಗಿತ್ತು. ಆದರವರು ಕಾರ್ಯನಿಮಿತ್ತ ಕುಶಾಲನಗರಕ್ಕೆ ಹೊರಡುವುದು ಅನಿವಾರ್ಯವಾಗಿದ್ದ ಕರಣ… ಅಂದು ಗೌರಮ್ಮನವರು ಈಜಿಗೆ ತೆರಳಿದ್ದ ತನ್ನ ಹಿರಿಯಣ್ಣ ಸುಬ್ರಾಯರ ಮಗ ೧೫ ರ ಹರೆಯದ ಗೋವಿಂದ ಶರ್ಮನ (ವಿಶು)ಜೊತೆ. ಅವರಿಬ್ಬರು ಹಟ್ಟಿಹೊಳಗೆ ಬರುವಷ್ಟರಲ್ಲೇ ಎಸ್ಟೇಟ್ ಮಾಲೀಕ ಗುಂಡುಕುಟ್ಟಿ ಮಂಜುನಾಥಯ್ಯನವರಾಗಲೇ ಅಲ್ಲಿ ಈಜುತ್ತಿದ್ದರು…

ಗೌರಮ್ಮನವರು ಎಂದಿನಂತೆ ತಮ್ಮ ಮೈದುನ ಪರವೂರಿನಿಂದ ತಂದಿದ್ದ ಈಜುಡುಗೆಯನ್ನು ಧರಿಸಿ, ತಾವು ಈಜಬೇಕಾಗಿದ್ದ ಮಡುವಿನ ಮೇಲಿನಿಂದ.. ಅಡ್ಡ ಬೆಳೆದಿದ್ದ ಮರದ ಕೊಂಬೆಯನ್ನು ಹತ್ತಿ… ಅತ್ಯಂತ ಉತ್ಸಾಹದಿಂದ ಮಡುವಿಗೆ ಹಾರಿದ್ದಾರಷ್ಟೆ… ಹಾಗೆ ಹಾರಿದ ಗೌರಮ್ಮ ಮತ್ತೆ ಮಡುವಿನಿಂದ ಮೇಲೆ ಬರಲೇ ಇಲ್ಲ!

ಗೌರಮ್ಮನವರು ಯಾವತ್ತೂ ಅದೇ ಮಡುವಿಗೆ… ಅದೇ ಕೊಂಬೆಯಿಂದ ಹಾರಿ ಜೊತು ಈಜುತ್ತಿದ್ದದು ಮಾಮೂಲಾಗಿತ್ತು. ಆದರೆ ಆ ದಿನ ಅವರ ಆ ಪ್ರೀತಿಯ ಮಡು ಅವರಿಗೆ ಹೇಗೆ ಕೈ ಕೊಟ್ಟಿತು… ಎಂದು ಅವರ ಸಾವಿನ ಕಾಲಕ್ಕೆ ಎಳೆ ಹುಡುಗನಾಗಿದ್ದು ಈಗ ವೃದ್ಯಾಪ್ಯದ ಅಂಚಿನಲ್ಲಿರುವ ಮಗನಲ್ಲಿ ಕೇಳಿದರೆ ಮಗ ಕೊಡುವ ವಿವರಣೆ ಹೀಗಿದೆ:

ಗೌರಮ್ಮನವರು ಹೊಳೆ ಸುಳಿಗೆ ಸಿಲುಕಿ ಜೀವ ಕಳೆದುಕೊಂಡ ಸುದ್ದಿ ಕೇಳಿ ಕನ್ನಡದ ಹಲವು ಸಾಹಿತಿಗಳು ಬರಹ - ಕವನಗಳ ಮುಖೇನ ತಮ್ಮ ದುಃಖವನ್ನು ಅಭಿವ್ಯಕ್ತಿಸಿಕೊಂಡರು ತಂಗಿಯಂತೆ ಕಾಣುತ್ತಿದ್ದ ಬೇಂದ್ರೆಯವರೂ ಆ ಸಂದರ್ಭದಲ್ಲಿ ತುಂಬಿ ಬಂದ ದುಃಖ ಭಾವಗಳಿಂದಲೇ 'ತಂಗಿ ಗೌರಮ್ಮ' ಎಂಬ ಕವನವೊಂದನ್ನು ಬರೆದು, ಗೌರಮ್ಮನವರ ಸುಂದರ, ಸುಖದಾಂಪತ್ಯದ ಚಿತ್ರಣವನ್ನು ಆ ಕವನದಲ್ಲಿ ಕಟ್ಟಿಕೊಟ್ಟು ಕನ್ನಡಿಗರ ಮುಂದೆ ನಿಲ್ಲಿಸಿದ್ದಾರೆ ; ಆ ಕವನ ಹೀಗಿದೆ:

**ತಂಗಿ ಗೌರಮ್ಮ**

*ಜಲದೇವತೆ ವನದೇವತೆ ಒಂದಡೆಯಲಿ ಸೇರಿ ಬಿನದಿಸುತಿಹ ಹೊಳೆಮಡುವಿಗೆ ನೀನೀಸಲು ಹಾರಿ ತಾಯೊಡಲನು ಕೂಸಾಟಕೆ ತಾಯ್ಮಡಲಿಗೆ ಬೀರಿ ತೀರಲು, ಜಡವಾಗಳೆ ಕಾವೇರಿಯೇ ತಂಪೇರಿ? ನೆನೆದರೆಯೇ ನಾ ನಡುಗುವೆ ಇದು ಆದುದದೆಂತೋ?*

*ಎಲ್ಲಿಂದೀ ಎಳೆಜೀವಕೆ ಸಾವೆಂಬುದು ಬಂತೋ? ಪತಿಯೊಲವಿನ ಸುತನೊಲವಿನ ಕೆಳೆಯೊಲವಿನ ತಂತು ಜಗ್ಗದೆ ನಿನ್ನನು ಮೇಲಕೆ? ನೀ ಮುಳುಗಿದೆಯೆಂತು?*

*ಗೌರವಸ್ತ್ರ ಗೌರಸ್ಮಿತ ಗೌರವದೀ ಗೌರೀ ಮಿಂಚಿದಳದೊ ಬಾನಂಚಿಗೆ ಕಾವೇರಿಯ ಕುವರಿಬೆಳುಂದಿಗಳೆ ಕರುವಿಟ್ಟಿತೊ ಈ ನಿರ್ಮಲಮೂರ್ತಿ ಮೊದಲಿಲ್ಲಿಯೆ ಕುಡಿಬಿಟ್ಟಿತೊ ಮುಗಳಿಟ್ಟಿತೊ ಕೀರ್ತಿ? ಉಪೆಸುರಿಸುವ ಇಬ್ಬನಿಯೊಲು ಕರುಣೆಯ ಕಂಬನಿಯ ಬಾಳ್ ಬಳ್ಳಿಗೆ ಬೀರಿದೆ ನೀ ಮಧುಹಾಸ್ಯದ ಹನಿಯ.*

ಕಥೆಗಾರ್ತಿ ಗೌರಮ್ಮನವರ ಸಾವಿನ ನಂತರ ೧೯೩೯ ರಲ್ಲಿ ಪ್ರಕಟಗೊಂಡ ಅವರ ಮೊದಲ ಕಥಾಸಂಕಲನ 'ಕಂಬನಿಗೆ ' ದಿ ೨.೮.೧೯೩೯ರಂದು ಮುನ್ನುಡಿ ಬರೆದ ಬೇಂದ್ರೆಯವರು ಆ ಮುನ್ನುಡಿಯಲ್ಲೂ ತಂಗಿ ಗೌರಮ್ಮನವರ ಬಗ್ಗೆ ಹೀಗೆ ಕಂಬನಿ ಮಿಡಿದಿದ್ದಾರೆ:

*ತಂಗಿ ಗೌರಮ್ಮನವರ ಕಥಾಸಂಗ್ರಹಕ್ಕೆ ಮುನ್ನುಡಿಯನ್ನು ಬರೆಯಲು ನಾನು ಒಪ್ಪಿಕೊಂಡಾಗ ಅವರು ಇಷ್ಟು ಆಕಸ್ಮಾತ್ತಾಗಿ, ದಾರುಣವಾಗಿ ನಮ್ಮನ್ನಗಲಿ ಹೋಗುವರೆಂದು ನಾನು ಭಾವಿಸಿರಲಿಲ್ಲ. ಅವರ ಕಥಾಸಂಗ್ರಹಕ್ಕೆ "ಕಂಬನಿ"ಯೆಂಬ ಹೆಸರನ್ನು ಸೂಚಿಸಿದಾಗ ಅವರನ್ನುಕುರಿತೇ ಕಂಬನಿಗಳುರುಳುವವೆಂದು ನಾನು ಎಣಿಸಿರಲಿಲಲ್ಲ. ಯಾವ ಕೆಲಸ ಸಂತೋಷ ಅಭಿಮಾನಗಳೆಂದು ನಾನು ಬಗೆದಿದ್ದೆನೋ ಅದರೊಳಗಿನ ಅಬಿಮಾನ ಉಳಿದಿದೆ; ಆದರೆ ಸತೋಷದ ಅಸ್ಥಳವನ್ನು ಸಂತಾಪವು ವ್ಯಾಪಿಸಿದೆ. ಆ ಸಂತೋಷದಂತೆಯೇ ಈ ಸಂತಾಪದಲ್ಲಿಯೂ ಒಂದು ವಿವಿಧ ಸವಿಯಿರುವುದಾದರೂ ಅದೆಲ್ಲವೂ ಕಣ್ಣೀರು ಸವರಿದ ನಾಲಗೆಯಿಂದ ಪೆಪ್ಪರಮಿಂಟು ಚಪ್ಪರಿಸಿದಂತೆಯೇಸರಿ. ಗೌರಮ್ಮನವರ ಜೀವನದಲ್ಲಿ ಒಂದು ಬಗೆಯ ಸಮಾಧಾನವಿದ್ದರೂ ಅವರ ಜೀವನ ಸಹಾನುಭೂತಿಯಲ್ಲಿ ಪರಗತದಃಖಾಸ್ವಾದನೆಯಿಂದ ಬಂದ ಮಧುರ ವಿಷಾದಕ್ಕೆ ಅಪಾರವಾದ ಸ್ಥಳವಿತ್ತು. ಅಂತೆಯೇ, ಅವರ ಕಥಾಫಲಗಳಿಗೆ ಬೇವಿನ ಹಣ್ಣುಗಳ ಕಟುಮಧುರತೆಯಿದೆ.ಉದಿತೋದಿತ ಕೀರ್ತಿಯ ಈ ಕಥೆಗಾರ್ತಿಯರು ಅಕಾಲಿಕ ಮರಣವುಕಟುಮಧುರ ! ಅವರ ಸಹಾನುಭೂತಿಯ ಕಥಾ ವಸ್ತುಗಳು ಕಟುಮಧುರ ! ಈ ಎರಡರಿಂದುದುರುವ ಕಂಬನಿಗಳೂ ಕಟುಮಧುರ! ಒಂದಕ್ಕೊಂದು ಹೊಂದಿಕೆಯಗಿಯೇ ಇದೆ!*

ಗೌರಮ್ಮನವರ ಸಾವಿಗೆ ಇದೇ ಸಂದರ್ಭದಲ್ಲಿ ಕಂಬನಿ ಮಿಡಿದ ಕನ್ನಡದ ಸಾಹಿತಿ ದಿ. ಮಲ್ಲಾರಿ ಅವರು ೩.೮.೧೯೩೯ ರಂದು ಗವರಮ್ಮನವರ ಬಗ್ಗೆ ನೋವಿನಿಂದ ಬರದ ಕವನದ ಒಂದು ತುಣುಕು ಇಲ್ಲಿದೆ.

*ಕನ್ನಡದ ತೋಟವನ್ನು ಕೃಷಿಮಾಡಿ ಜೀವನವ ನೆರೆದೋವ ತೋಟಗತ್ತಿ ಹೋದ ಮೇಗೆ ಇನ್ನು ರಸಚಿಗುರು ಮೊಗಬತ್ತಿ ಬನ ಮೌನದಲಿ ಮರುಗದೋ ಅರಳು ಕಂಬನಿಗಳಾಗೆ!*

ಹಾಗೆಯೇ ಕನ್ನಡದ ಮತ್ತೊಬ್ಬ ಬರಹಗಾರ ದಿ. ಪಿ.ವಿ ಆಚಾರ್ಯ ಅವರುಗೌರಮ್ಮನವರ ಸಾವಿಗೆ ಭಾವಪೂರ್ಣವಾಗಿ ಕಂಬನಿ ಮಿಡಿದಿದ್ದು ಹೀಗೆ -

*ಬರಡು ಕೊರಡ ಕೊನೆಯೊಳಿಂದು ಚಿಗುರು ಕೊನರಿ ಕಾಂಬುದೊಂದು ಹೆಣ್ಣು ಜೀವವೊಂದು ಎರೆದುದಿದಕೆ ನೊಂದ ಕಂಬನಿ*
*ಕಠೆದಕೊಡವು ಒಡೆದರೇನು? ಮಿಡಿದ ತಂತಿ ಡಿದರೇನು? ನುಡಿದ ನಾದ ನುಡಿಸದೇನು ವೀಣೆಯೊಡಲ ಕಾಹಿನಿ? ಎಂದು.*

ಅಕಾಲ ಸಾವಿಗೀಡಾದ ಈ ಸುಸಂಸ್ಕೃತ ಭಾವಜೀವಿ, ಸ್ನೇಹಪೂರ್ಣವ್ಯಕ್ತಿತ್ವದ ಕಥನಗಾರ್ತಿಯ ಕಥನಗಳ... ಶಕ್ತಿ ಓಘ, ಲಾಲ್ಕಿತ್ಯ, ಜೀವಂತಿಕೆಯನ್ನು ಕಂಡಾಗ 'ಗೌರಮ್ಮನವರ ಸಾವಿನಿಂದ ಕನ್ನಡ ಕಥನಲೋಕ' ಬಡವಾಯಿತು ಎಂಬ ಅವರ ಸಾಹಿತ್ಯಾಭಿಮಾನಿಗಳ ಅನಿಸಿಕೆಗಳಲ್ಲಿ ಖಂಡಿತ ಯಾವ ಉತ್ಪ್ರೇಕ್ಷೆಯೂ ಇಲ್ಲ.

**ಗೌರಮ್ಮನವರ ಬರಹ**

ಗೌರಮ್ಮನವರು ಕನ್ನಡ ಕಥಾಲೋಕಕ್ಕೆ ಪ್ರವೇಶ ಪಡೆದಿದ್ದು ನವೋದಯ ಸಾಹಿತ್ಯ ಸಂದರ್ಭದಲ್ಲಿ. ಅಂದಿನ ಸಮಾಜದಲ್ಲಿ ಹಲವು ಸಮಾಜಿಕ ಸಮಸ್ಯೆಗಳ ಜೊತೆಗೆ ವಸಾಹತುಶಾಹಿ ವ್ಯವಸ್ಥೆಯಡಿಯ ಶೋಷಣೆಯನ್ನು ಕುರಿತು ಹಲವು ಬವಣೆಗಳು ಈ ಬರಹಗಾರ್ತಿಉ ದಿವ್ಯಪ್ರಜ್ಞೆಗೆ ದಕ್ಕಿದ್ದರೂ ಅವೆಲ್ಲವನ್ನೂ ನಿರ್ಲಕ್ಷಿಸಿ - ಅತ್ಯಂತ ಮುಖ್ಯವಾದ ಸಮಸ್ಯೆ - ಎಂದು ತಮ್ಮ ಬರಹಗಳಿಗೆ ಪ್ರಮುಖವಾಗಿ ಅವರು ಆಯ್ದುಕೊಂಡಿದ್ದ, ಸ್ತ್ರೀಪರ ಕಳಜಿಯುಳ್ಳ ಕಥಾವದ್ತುಗಳನ್ನು! ಅವರು ಬಾಲ್ಯವಿವಾಹ, ಬಾಲವೈಧವ್ಯ, ವಿಧವಾವಿವಾಹ ಸಮಸ್ಯೆಗಳಂತಹ ಕಥಾವಸ್ತುಗಳ ಜತೆಗೆ ವರ್ಗಬೇಧ, ಮತಾಂತರ, ಸ್ತ್ರೀಶಿಕ್ಷಣ, ವರದಕ್ಷಿಣೆ, ಹದಿಹರೆಯದ ಸಮಸ್ಯೆ ಇತ್ಯಾದಿ ಕಥಾವಸ್ತುಗಳನ್ನು ನಿರ್ವಹಿಸಿದ ರೀತಿಯೇ ಅತ್ಯಂತ ಜೀವಪರವಾದುದು. ಈ ಕರಣಕ್ಕಾಗಿಯೇ ಇವರನ್ನು ಕನ್ನಡದ ಪ್ರಥಮ ಬಂಡಾಯ ಹಾಗೂ ಸ್ತ್ರೀ ವಿಮೋಚನಾವಾದಿ ಮನೋಭಾವದ ಕಥೆಗಾರ್ತಿ ಎಂದೇ ಗುರುತಿಸಬಹುದಾಗಿದೆ. ಗೌರಮ್ಮನವರು ತಮಗೆ ಮೌಢ್ಯವೆನಿಸಿರುವ ಹಳೆಯ ಜೀವವಿರೋಧಿ ಕಂದಾಚಾರ ಸಂಪ್ರದಾಯಗಳನ್ನು ಓದುಗರ ಮನ ಮುಟ್ಟುವಂತೆ ಚಿತ್ರಿಸಿ, ಆ ಸಂಪ್ರದಾಯಗಳನ್ನು ತನ್ನ ಪಾತ್ರಗಳ ಮೂಲಕ ಚರ್ಚಿಸಿ ಟೀಕಿಸಿ ಓದುಗರ ಸಂಪ್ರದಾಯ ಸಮಾಜದ ಮುಂದಿಟ್ಟರು.

ಅಂದಿನ ಸಾಮಾಜಿಕ ಸಮಸ್ಯೆಗಳಲ್ಲಿ ಅತೀ ಅಮಾನವೀಯವಾದುದು ವಿಧವಾ ಸಮಸ್ಯೆ. ವಿಧವೆಯರ ದೀನ ಬದುಕು. ಗೌರಮ್ಮನವರು ತೀರ ಹತ್ತಿರದಲ್ಲೇ ಅಂತಹ ಬದುಕನ್ನು ಕಂಡು ನೊಂದಿರಬಹುದಾದ ಕಾರಣಕ್ಕಾಗಿಯೇ ಏನೋ ತಮ್ಮ 'ವಾಣಿಯ ಸಮಸ್ಯೆ', 'ಒಂದು ಪುಟ್ಟ ಚಿತ್ರ', 'ಅಪರಾಧಿ ಯಾರು?,' ದಂತಹ ಕಥೆಗಳಲ್ಲಿ ವಿಧವೆಯರ ಅಂತರಂಗದೊಳಗಿನ ನೋವಿನ ಕಡಲ ಪ್ರಕ್ಷುಬ್ಧ ಅಲೆಗಳನ್ನು ಚಿತ್ರಿಸುತ್ತ.... ಆ ನೋವಿನಲೆಗಳಿಗೆ ಕಾರಣವಾಗಿರುವ ಕ್ರೂರ ಪುರುಷ ಮನಸ್ಸುಗಳನ್ನು ಅನಾವರಣ ಮಡುವ ಪರಿ ಹೇಗಿದೆಯೆಂದರೆ ಸನಾತನ ಪರಂಪರೆಯನ್ನು ಆರಾಧಿಸುವ ಸಂಪ್ರದಾಯಸ್ಥರತ್ತ 'ಕಾಸದ ಕಬ್ಬಿಣದ ನೀರು' ಎಸೆದು 'ಮಂಗಳಾರತಿ' ಮಾಡಿದಂತಿದೆ.

ಅವರು ಆ ಕಥೆಗಳನ್ನು ಹೊಸೆದ ಕಾಲವನ್ನು ಗಮನಿಸಿದರೆ ಅಂದಿನ ಸಮಾಜದಲ್ಲಿದ್ದ ಲಿಂಗಭೇದ ನೀತಿಯನ್ನು ತಮ್ಮ ಕಥಾಪಾತ್ರಗಳ ಮೂಲಕ ಒಪ್ಪು ನೇರ ಮತ್ತು ವ್ಯಂಗ್ಯವಾಗಿ ಟೀಕಿಸಿ, ಆನೀತಿಗೆ ಆಕ್ರೋಶ - ಆವೇಶ ವ್ಯಕ್ತಪಡಿಸಿದ ಬಂಡಾಯ ಕಥನಕಾರ್ತಿ ಆ ಕಾಲಘಟ್ಟದಲ್ಲಿ ಇನ್ನೊಬ್ಬರಿಲ್ಲ ಎಂಬುದು ಕೂಡಾ ಅಷ್ಟೇ ನಿಜ.

ಅವರ ಮೊದಲ ಕಥೆ 'ಪುನರ್ವಿವಾಹ'ದಲ್ಲಿ ವಿದುರರಿಗೊಂದು ನೀತಿ - ವಿಧವೆಯರಿಗೊಂದು ನೀತಿ ಇರುವ ಕೊಳಕು ಸಮಾಜವನ್ನು 'ವಿಶೇಷವಾಗಿ ಉಜ್ಜಿ ತೊಳೆಯಲು' ಕಥೆಗಾರ್ತಿ ಕಥಾನಾಯಕಿಯ ಪಾತ್ರದ ಮೂಲಕ ಸುದೀರ್ಘ ಭಾಷಣಕೊಡಿಸುವುದು ಮತ್ತು ಬಾಲವಿಧವೆಯರು ಪರಧರ್ಮಗಳಿಗೆ ಸೇರುವುದಕ್ಕೆ ಹಾಗೂ ದೀನವಾಗಿ ವೇಶ್ಯಾಜೀವನಕ್ಕೆ ತಳ್ಳಲ್ಪಟ್ಟು ನಿರ್ಲಜ್ಜ ಬದುಕು ನಡೆಸುತ್ತಿರುವುದಕ್ಕೆ ಈ ಹಿಂದೂ ಸಮಾಜ ಮತ್ತು ಸಂಪ್ರದಾಯ ಹೇಗೆ ಕಾರಣ ಎಂಬುದನ್ನು ಕೂಡಾ ಪಾತ್ರದ ಮೂಲಕ ವಿಮರ್ಶಿಸುವುದು - ಗೌರಮ್ಮನವನ್ನೊಳಗಿರುವ ಸ್ತ್ರೀಪರ ಚಿಂತನೆ ಹಾಗೂ ಸ್ವಜನ ಪಕ್ಷಪತವಿಲ್ಲದೆ ಸುಧಾರಕ ದೃಷ್ಟಿ ಎಷ್ಟು ತೀಕ್ಷ್ಣವಾದುದು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಗೌರಮ್ಮನವರು ೧೯೩೪ ರಲ್ಲಿ ಬರೆದ 'ಅಪರಾಧಿ ಯಾರು?' ಎಂಬ ಕಥೆಯಲ್ಲಿ ಅವರು ವಿಶೇಷವಾಗಿ ಹಿಂದೂ ಸಮಾಜದ ಮೇಲೆ ಮಾಡಿದ 'ಟೀಕಾಪ್ರಹಾರ,' ಅವರೊಳಗಿನ ಪ್ರಗತಿಶೀಲ - ಬಂಡಾಯ ಪ್ರಜ್ಞೆಯನ್ನು ಪ್ರತಿಬಿಂಬಿಸುವಂತಹದ್ದು. ಈ ಕಥೆಯಲ್ಲಿ ಹಿಂದೂ ಸಮಾಜ ಅಬಲೆ ಹೆಣ್ಣನ್ನು ಆತ್ಮಹತ್ಯೆಯ ಸಂಕಷ್ಟಕ್ಕೆ ತಳ್ಳಿದಾಗ ಆಕೆಯನ್ನು ಮುಸ್ಲಿಂ ಸಮುದಾಯ ರಕ್ಷಿಸಿ ಆಕೆಯ ಇಷ್ಟದಂತೆ ತನ್ನ ಧರ್ಮಕ್ಕೆ ಸ್ವೀಕರಿಸುತ್ತದೆ.

`ಅಪರಾಧಿ ಯಾರು?' ಕಥೆಯ ಕಥಾನಾಯಕಿ ಪುಟ್ಟ ಹೆಣ್ಣುಮಗುವುಳ್ಳ ಒಬ್ಬ ಅನಾಥ ಬಡ ಬ್ರಾಹ್ಮಣ ವಿಧವೆ. ಹೊಟ್ಟೆಪಾಡಿಗಾಗಿ ಅಡುಗೆಯವಳಾಗಿ ಸೇರುತ್ತಾಳೆ. ಅಲ್ಲಿ ಆ ಗಣ್ಯನಿಂದಲೇ ಅತ್ಯಾಚಾರಕ್ಕೆ ಒಳಗಾಗಿ ಅಪವಾದದ ಹೊರೆಹೊತ್ತು ಆತನ ಕುಮ್ಮಕ್ಕಿನಿಂದ ತನ್ನ ಸಮಾಜದವರಿಂದಲೇ ಬಹಿಷ್ಕಾರ ಹಾಕಿಸಿಕೊಂಡು ಆತನಿಂದಲೇ ಮನೆಯಿಂದ ಹೊರದಬ್ಬಲ್ಪಡುತ್ತಾಳೆ. ತಮ್ಮವರಿಂದ ಬಹಿಷ್ಕರಿಸಲ್ಪಟ್ಟ ಆ ಅಸಹಾಯಕ ಹೆಣ್ಣು ತನಗಿನ್ನು ಆತ್ಮಹತ್ಯೆಯೇ ಗತಿ ಎಂದು ತನ್ನ ಮಗುವಿನೊಂದಿಗೆ ಆ ಕೃತ್ಯಕ್ಕೆ ಮುಂದಾದಾಗ ಪರಿಚಿತ ಮುಸಲ್ಮಾನ ಬಂಧುಗಳು ಆಕೆಯನ್ನು ರಕ್ಷಿಸಿ 'ನಮ್ಮ ಧರ್ಮದಲ್ಲಿ ನಿನಗೆ ರಕ್ಷಣೆ ಇದೆ' ಎಂದು ಸಮಧಾನಿಸಿ ಆಕೆಯ

ಇಚ್ಛೆಯಂತೆ ಆಕೆಯನ್ನು ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುತ್ತಾರೆ. ಈ ಮತಾಂತರದ ಸುದ್ದಿ ತಿಳಿದಾಕ್ಷಣ ಆ ಹೆಣ್ಣಿಗೆ ಅನ್ಯಾಯ ಎಸಗಿದ ಗಣ್ಯವ್ಯಕ್ತಿ ಊರಿನ ಹಿಂದೂಗಳ ಸಭೆ ಕರೆದು 'ಮೊನ್ನೆ ದಿನ ಹಿಂದೂ ರಮಣಿಯೊಬ್ಬಳು ಮುಸಲ್ಮಾನ ಧಮ ಸ್ವೀಕರಿಸಿದ್ದು ಊರಿನ ಹಿಂದುಗಳಿಗೆಲ್ಲ ಬಹಳ ವಿಷಾದವನ್ನುಂಟುಮಾಡಿದೆ. ಇನ್ನು ಮುಂದೆ ಈ ರೀತಿಯ ಅನಾಚಾರ ಸಂಭವಿಸಿದಂತೆ ಎಚ್ಚರ ವಹಿಸಬೇಕು ಹಾಗೂ ಹಿಂದೂ ರಕ್ಷಣೆ ಮಾಡಬೇಕು' - ಎಂದು ತನ್ನ ಅಧ್ಯಕ್ಷತೆಯಲ್ಲೇ ಧರ್ಮರಕ್ಷಣೆಯ ತೀರ್ಮಾನವನ್ನು ಕೈಗೊಳ್ಳುತ್ತಾನೆ.

ಈ ಕಥಾಚೌಕಟ್ಟಿನಲ್ಲಿ ಕಥೆಗಾರ್ತಿ ಗೌರಮ್ಮನವರು, ಮನುಷತ್ವ ತೋರದ ಹಿಂದೂ ಸಮಾಜ ಮತ್ತು ಆ ಸಮಾಜದ ಗಣ್ಯ ಪರುಷರ ಆಷಾಢಭೂತಿತನ ಹಾಗೂ ಪರುಷ ಸಮಾಜವು ಮಹಿಳೆಯರ ಮೇಲೆ ನಡೆಸುವ ಅನ್ಯಾಯವನ್ನು, ಪಾತ್ರಗಳ ಮೂಲಕ ಎಷ್ಟು ಕಟುವಾಗಿ ಮತ್ತು ಮಾರ್ಮಿಕವಾಗಿ ಚಿತ್ರಿಸಿದ್ದಾರೆಂದರೆ - ವಿಧವೆ ಕಥಾನಯಕಿಯ ದುರಂತ ಬದುಕನ್ನು ಕಂಡು ಆಕೆಯ ಮುಸಲ್ಮಾನ ಗೆಳತಿ ತನ್ನ ಅಣ್ಣನಲ್ಲಿ ಹೀಗನ್ನುತ್ತಾಳೆ: 'ಅನಾಥ ಅಬಲೆಯರು ಅತ್ಯಾಚಾರಿಯ ಅತ್ಯಾಚಾರಕ್ಕೆ ತಾವೇ ಪ್ರಾಯಶ್ಚಿತವನ್ನು ಮಾಡಿಕೊಳ್ಳುವುದು ಅವರ ಜಾತಿಯ ನೀತಿಯಾದರೆ ನಮಗಾ ಜಾತಿಯಲ್ಲಿ ಜನ್ಮಕೊಡದಿದ್ದುದಕ್ಕೆ ದೇವರನ್ನು ಎಷ್ಟು ವಂದಿಸಿದರೂ ಸ್ವಲ್ಪವೇ' ಎಂದು ಹೀಗೆಯೇ ಕಥಾನಾಯಕಿಯ ದುರಂತವನ್ನು ಕಂಡು ಆಕೆಯದ್ದೆ ಸಮಾಜಕ್ಕೆ ಸೇರಿದ ಮತ್ತೊಬ್ಬಳು ಗೆಳತಿ ಹೀಗನ್ನುತ್ತಾಳೆ: 'ನಮ್ಮವರ ಹೃದಯದಲ್ಲಿ ಜಾತಿಗಲ್ಲದೆ ದಯೆಗೆ ಎಡೆಯಿಲ್ಲ. ಅದೂ ಜಾತಿ ನಿಯಮಗಳು ಹೆಂಗಸರಿಗೆ ಮಾತ್ರ, ಗಂಡಸರು ಈ ನಿಯಮಕ್ಕೆ ಒಳಪಡಬೇಕ್ಕಾಗಿಲ್ಲ. ಇದೇ ನೋಡು ನಮ್ಮ ಜಾತಿಯ ದೊಡ್ಡತನದ ಕುರುಹು; ' ಎಂದು.

ಹಿಂದೂ ಸಮಾಜದ ಲಿಂಗಭೇದ ನೀತಿಯನ್ನು ಪ್ರತಿಬಿಂಬಿಸುವ ಈ ಕಥೆ - ಮಾನವೀಯತೆಯನ್ನು ಮರೆತು ಧರ್ಮರಕ್ಷಣೆಯ ಬಗ್ಗೆ ಮಾತಾಡುವ ಪುರುಷ ಕೇಂದ್ರಿತ ಸಮಾಜದ ಅಮಾನವೀಯ ನಡವಳಿಕೆಯನ್ನು ಹಾಗೂ ಪುರುಷನಿಂದ ಅನ್ಯಾಯಕ್ಕೊಳಗಾದ ಹೆಣ್ಣನ್ನು ಶಿಕ್ಷೆಗೊಳಪಡಿಸುವ ಸಮಾಜದ ತಾರತಮ್ಯ ನೀತಿಯನ್ನು ತೀಕ್ಷ್ಮವಾಗಿ ಖಂಡಿಸುತ್ತದೆ. ಇಲ್ಲಿ ಗೌರಮ್ಮನವರು ಮಹಿಳಾ ಸಂಕುಲಕ್ಕಾಗುವ ಅನ್ಯಾಯವನ್ನು ಪ್ರತಿಭಟಿಸುವಾಗ 'ತನ್ನವರು ತನ್ನ ಧರ್ಮ' ಎಂಬ ಪಕ್ಷಪಾತ ತೋರದಿರುಹುದು ಅವರೊಳಗಿನ ಅಪ್ಪಟ ಸ್ತ್ರೀವಿಮೋಚನಾವಾದಿ ಹಾಗೂ ಜೀವಪರ ಪ್ರಜ್ಞೆಗೆ ಸಾಕ್ಷಿ.

ಬರವಣಿಗೆಯ ಆರಂಭದಲ್ಲಿ ಗವರಮ್ಮನವರು ಎಲ್ಲ ಯುವ ಬರಹಗಾರರಂತೆ ತಮ್ಮ ಪ್ರಗತಿಪರ ಚಿಂತನೆಗಳಿಂದ ಹೊಸ ಸಮಾಜ ನಿರ್ಮಾಣದ ಕನಸು ಕಾಣುತ್ತಾ... ತೀವ್ರ ಭಾವಾವೇಷದಿಂದ ತಮ್ಮ ಕಥೆಗಳನ್ನು ಬರೆಯತೊಡಗಿದರೂ... ಕಾಲ ಉರುಳುತ್ತಿದ್ದಂತೆ ಅವರ ಅನುಭವ, ತಿಳುವಳಿಕೆ, ಜೀವನದೃಷ್ಟಿ ವಿಶಾಲವಾಗುತ್ತಲೇ... ಅವರ ಆವೇಶ, ಆಕ್ರೋಶಗಳೆಲ್ಲ ಒಂದು 'ಹದಕ್ಕೆ' ಬಂದು ನಿಂತಿತ್ತು - ಎನ್ನುವುದಕ್ಕೆ ಅವರು ತಮ್ಮ ಸಾವಿನ ಹಿಂದಿನ ದಿನವಷ್ಟೇ ಬರೆದು ಮುಗಿಸಿದ್ದ ಕಥೆ 'ಮುನ್ನಾದಿನ' ಒಂದು ಅತ್ಯುತ್ತಮ ನಿದರ್ಶನ.

ವಸಂತಗಳು ಸರಿದಂತೆ ತನ್ನ ಭಾವನೆ, ಅನುಭವ, ತಿಳುವಳಿಕೆ ಜೀವನ ದೃಷ್ಟಿಯಲ್ಲಿ ತುಂಬ ಬದಲಾವಣೆ ಅಗಿದೆ - ಎಂಬುದನ್ನು ಗೌರಮ್ಮನವರೇ ಒಂದೆಡೆ ಪ್ರಾಮಾಣಿಕವಾಗಿ ಬರೆದುಕೊಂಡಿದ್ದಾರೆ: ೧೯೩೦ ರಲ್ಲಿ ತಾವು ಬರೆದ ಮೊದಲ ಕಥೆ 'ಪುನರ್ವಿವಾಹ'ವನ್ನು ತಮ್ಮ ಮೊದಲ ಕಥಾಸಂಕಲನ 'ಕಂಬನಿ' ಯಲ್ಲಿ ಸೇರಿಸುವ ಸಂದರ್ಭದಲ್ಲಿ ಅವರು ಮತ್ತೊಮ್ಮೆ ಆ ಕಥೆಯನ್ನು ಓದಿ ಆ ಓದಿನ ನಂತರ ತಮ್ಮಲ್ಲುಂಟಾದ ಭಾವ ಅನಿಸಿಕೆಯನ್ನು ಪ್ರಕಟಿತ ಸಂಕಲನದ ಅದೇ ಕಥೇಯ ಅಡಿಟಿಪ್ಪಣಿಯಲ್ಲಿ ಹೀಗೆಂದು ಬರೆದುಕೊಂಡಿದ್ದಾರೆ : 'ಆಗ ನನಗೀ ಕಥೆ (ಪುನರ್ವಿವಾಹ) ಬಹಳ ಸೊಗಸಾಗಿದೆ ಎಂಬ ಭಾವನೆಯಿತ್ತು. ಈಗ ಓದಿದರೆ ಆಗಿನ ಭಾವನೆಗಳನ್ನೆಲ್ಲ ನೆನಸಿಕೊಂಡರೆ ನಗು ಬರುತ್ತೆ. ಆದರೂ ಮೊಟ್ಟಮೊದಲಿನ ಪ್ರಯತ್ನ ನೋಡಿ. ಅದ್ದರಿಂದ ಈ ಕಥೆಯೆಂದರೆ ಸ್ವಲ್ಪ ಮಮತೆ' ಎಂದು

ಗೌರಮ್ಮನವರ ಕಥೆಗಳು ಭಾಷೆ, ತಂತ್ರ ಮತ್ತು ಶೈಲಿಯ ದೃಷ್ಟಿಯಿಂದ ತುಂಬ ಉತ್ಕೃಷ್ಟ. ಅವರ ಕಥೆಗಳಲ್ಲಿ ಸಂಪ್ರದಾಯದ ಬಿಗಿತ, ಕಾಲಕ್ಕೆ ತಕ್ಕಂತೆ ಬದಲಾಗುತ್ತಿರುವ ಜೀವನ ಶೈಲಿ, ಹೆಣ್ಣು ಗಂಡುಗಳ ಪ್ರೇಮ - ವಿರಹಗಳ ಬಗ್ಗೆ ವಾಸ್ತವಿಕ ಚಿತ್ರಣವಿದೆ. ಹಾಗೆಯೇ ಹೆಚ್ಚಿನ ಮಹಿಳಾ ಬರಹಗಳಲ್ಲಿರುವಂತೆ ಭ್ರಮೆ, ಕನಸು, ಅತಿರಂಚಿತ ಪ್ರೀತಿ - ಪ್ರೇಮ - ಕಾಮ - ಸಿಟ್ಟು - ಸಿಡುಕು - ದ್ವೇಷ ಮುಂತಾದ ಅವಾಸ್ತವ ಚಿತ್ರಣಗಳು ಇವರ ಕಥೆಗಳಲ್ಲಿಲ್ಲ. ಲಿಂಗಭೇದ ನೀತಿಯಡಿ ಲೋಕದ ನೀತಿ - ನ್ಯಾಯಗಳನ್ನು ಪ್ರಶ್ನಿಸುವ ಇವರ

ಕಥೆಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ವಿಶ್ಲೇಷಿಸಿದರೆ ಅವು ಅಂದಿಗೂ ಇಂದಿಗೂ ಎಲ್ಲ ಕಾಲಕ್ಕೂ ಪ್ರಸ್ತುತವೆನಿಸುವಷ್ಟು ವೈಶಿಷ್ಟ್ಯಪೂರ್ಣವಾದುವು.

ಮಹಿಳಾ ಸಾಹಿತಿಗಳನ್ನು ಸಹಾನುಭೂತಿಯಿಂದ ಸ್ವಾಗತಿಸುತ್ತಿದ್ದ ಅಂದಿನ ಆ ಸಾಹಿತ್ಯ ಕಾಲಘಟ್ಟದಲ್ಲಿ ನಮ್ಮ ವರಕವಿ ಬೇಂದ್ರೆಯವರು ಗೌರಮ್ಮನವರ ಮೊದಲ ಕಥಾಸಂಕಲನ 'ಕಂಬನಿ' ಕಥೆಗಳನ್ನು (೧೯೩೯ರಲ್ಲಿ ಪ್ರಕಟ) ಕುರಿತು ಹೀಗೆನ್ನುತ್ತಾರೆ:

*'ಶ್ರೀಮತಿ ಗೌರಮ್ಮನವರು ಜೀವಿಸಿದ್ದೆ ೨೭ ವರ್ಷ. ಈ ಸಂಗ್ರಹದೊಳಗಿನ ಹನ್ನೆರಡು ಕಥೆಗಳು ಅವರ ಆಯುಷ್ಯದ ಕೊನೆಯ ಏಳು ವರ್ಷಗಳಲ್ಲಿ ಬರೆದವುಗಳು. ಈ ಹನ್ನೆರಡೂ ಕಥೆಗಳು ಒಂದಿಲ್ಲೊಂದು ವಿಧದಿಂದ ಹೆಣ್ಣು - ಗಂಡಿನ ಜೀವನದ, ಅದರ ಭಾಗ್ಯ - ದುರ್ಭಾಗ್ಯದ, ಪ್ರಯಣದ ಆಖ್ಯಾನಗಳಾಗಿವೆ. ಗಂಡಸಿನ ದೌರ್ಜನ್ಯ, ದಾರಿದ್ರ - ಕುರೂಪತೆಗಳ ದೌರ್ಭಾಗ್ಯ, ಹೆಂಗಸಿನ ಯುಗ ಯುಗದ ದುರ್ವಿಧಿ ವಿಲಾಸ, ಸಮಾಜದ ವಿಪರೀತ ದುರ್ಬುದ್ಧಿ, ಶಿಷ್ಟಾಚಾರಗಳ ಅಂಧವಿರೋಧ ಇವೇ ಮೊದಲಾದ ಕಾರಣಗಳಿಂದ ಸ್ತ್ರೀಯರಿಗಾಗುವ ದುಃಖಕ್ಕಾಗಿ ಗವರಮ್ಮನವರ ಕರುಳಿನ ತಂತಿಯಿಂದ ಮಿಡಿದು ಬಂದ ಮೂಕಶೋಕವು ಹೃದಯಬೇದಕವಾಗಿಯೂ ಹೃದಯ ಬೋಧಕವಾಗಿಯೂ ಆಗಿರುವುದು.*

*ಇಲ್ಲಿ ಎಲ್ಲ ಕಥೆಗಳೂ ವಿಶೇಷವಾಗಿ ಹೆಣ್ಣಿನ ಹೃದಯವನ್ನೇ ಅವಿಷ್ಕರಿಸುತ್ತಿದ್ದರೂ 'ಸನ್ಯಾಸಿ ರತ್ನ', 'ಹೋಗಿಯೇ ಬಿಟ್ಟಿದ್ದ', 'ಪ್ರಾಯಶ್ಚಿತ್ತ' ಈ ಕಥೆಗಳಲ್ಲಿನ ಗಂಡಿನ ಮೂಲಕವಾಗಿ ಪ್ರಣಯವನ್ನು ಪ್ರದರ್ಶಿಸಿದ್ದಾಗಿದೆ. ಮೊದಲಿನೆರಡು ಕಥೆಗಳಲ್ಲಿ ಕತೆಗಾರಿಕೆಯಲ್ಲಿಯೂ ಕಟ್ಟಿನಲ್ಲಿಯೂ ಒಂದು ಚಮತ್ಕಾರವಿದೆ. ಮೂರನೆಯ ಕಥೆಯಲ್ಲಿ ಗಂಡಿನಷ್ಟೆ ಹೆಣ್ಣು ಜೀವಾಳವಾಗಿದೆ.*

*ದಿನಚರಿ, ಕಾಗದ ಮೊದಲಾದ ಕಥಾಪ್ರಕಾರಗಳನ್ನು ಅವರು ಕೈಯಾಡಿಸಿ ನೋಡಿದ್ದಾರೆ. ಇಲ್ಲದರಲ್ಲಿ ಅವರ ಕೈ ತಡೆಯಿಲ್ಲದೆ ಸಾಗುವುದು. ಆದರೆ ಈ ಎಲ್ಲ ಕಥೆಗಳ ನಿಜವಾದ ವೈಲಕ್ಷಣ್ಯವೆಂದರೆ ಮಾನಸ ವ್ಯಾಪರಗಳ ಹೇಳಿಕೆ 'ಕೌಸಲ್ಯಾನಂದನ,' 'ಸುಳ್ಳುಸ್ವಪ್ನ', 'ವಾಣಿಯ ಸಮಸ್ಯೆ', 'ಮುವಿನ ರಾಣಿ' '...ಯಾರು?' ಮೊದಲಾದವುಗಳಲ್ಲಿ ಗೌರಮ್ಮನವರ ಸಹಾನುಭವವು ನಮ್ಮನ್ನು ಮೆಚ್ಚಿಸುವುದು. ೧೯೩೨ ರ ಅಕ್ಟೋಬರದಲ್ಲಿ ಬರೆದ ಅವರ 'ಒಂದು ಪುಟ್ಟ ಚಿತ್ರಕ್ಕೂ' ೧೯೩೯ರ ಫೆಬ್ರವರಿಯಲ್ಲಿ ಬರೆಯಲಾದ 'ಅವಳ ಭಾಗ್ಯ' ಕ್ಕೂ ಆರು ವರ್ಷದ ಅಂತರವಿರುವಂತೆಯೇ ಕಿರಿದರಲ್ಲಿ ಹಿರಿದು ಭಾವ ತುಂಬವ ಅವರ ಕಥೆಗಾರಿಕೆಯ ಬೆಳವಣಿಗೆಯಲ್ಲಾದ ಅಂತರವನ್ನು ಕಂಡು, ಅವರ ಜೀವನದ ಕಥೆ ಇಷ್ಟಕ್ಕೆ ಮುಗಿಯೀತೇ - ಎನಿಸುವುದು.*

*ಕಥೆಗಳಲ್ಲಿ ಕಟುತ್ವವಿದ್ದರೂ ರೊಚ್ಚಿಲ್ಲ; ಸೋದ್ದೇಶಲೇಖನದ ಸೂಚನೆಯಿದ್ದರೂ ಅವಾಸ್ತವ ಆರ್ಭಟೆಯಿಲ್ಲ; ಕಲೆಯು ನೈಜ್ಯವನ್ನು ಮರೆಮಾಚಿಲ್ಲ. - ಎಲ್ಲೆಲ್ಲಿಯೂ ಹೆಣ್ಣಿನ ಹೃದಯದ ಸಾಕ್ಷಿಯನ್ನು ಸಾರುವ ಈ ಕಥಾಗುಚ್ಛವೂ 'ಶ್ರೀನಿವಾಸ' 'ಆನಂದರ' ಕಥೆಗಳನ್ನು ಓದಿದ ವಾಚಕರಿಗೆ ಮನೋವಿಶ್ಲೇಷಣಾತ್ಮಕ ಕಥೆಗಲ ಮಾದರಿಯಾಗಿ ಹೃದಯಂಗಮವಾಗುವದೆಂದು ನಾನು ನಂಬಿದ್ದೇನೆ.*

ಗೌರಮ್ಮನವರ ಕಥಾತಂತ್ರ ಆ ಸಾಹಿತ್ಯ ಕಾಲಘಟ್ಟಕ್ಕೆ ತೀರಾ ವಿಶಿಷ್ಟವಾದುದು. ತಮ್ಮ ಕಥಾನಿರೂಪಣಾ ತಂತ್ರವಾಗಿ ದಿನಚರಿ ಹಾಗೂ ಪತ್ರಗಳ ರೂಪದಲ್ಲಿ ಕಥೆ ನಿರೂಪಿಸುವ ಹೊಸ ತಂತ್ರವೊಂದನ್ನು ಅವರು ಅಳವಡಿಸಿಕೊಂಡಿದ್ದು, ಅದು ಅವರ ಕಥಾರಚನಾ ಕೌಶಲ್ಯಕ್ಕೆ ಹಿಡಿದ ಕನ್ನಡಿ ಎನ್ನಬಹುದು. ಕಥೆ 'ಸುಳ್ಳುಸ್ವಪ್ನ' ದಿನಚರಿಯ ಮಾದರಿಯಲ್ಲಿದ್ದರೆ 'ನಾಲ್ಕು ಘಟನೆ' 'ಒಂದು ಪುಟ್ಟ ಚಿತ್ರ' 'ಕೆಲವು ಕಾಗಗದಗಳು' ಪತ್ರ ರೂಪದಲ್ಲಿರುವ ಕಥೆಗಳು. ಅವರ 'ಕೆಲವು ಕಾಗದಗಳು' ಕಥೆಯಲ್ಲಿನ ಕಥಾ ತಂತ್ರಗಾರಿಕೆಯನ್ನು ಕುರಿತು - ಅವರು ಕಥಾ ಬರವಣಿಗೆ ಮಾಡುತ್ತಿರುವಾಗಲೇ ಕನ್ನಡದ ವಿದ್ವಾಂಸರಾದ ಮುಳಿಯ ತಿಮ್ಮಪ್ಪಯ್ಯನವರು ಪ್ರತಿಕ್ರಿಯಿಸಿದ್ದು ಹೀಗೆ :

*"ಇವು ಕಾಗದ ಪತ್ರಗಳೇ ಆದರೂ ಬರೆದವರ ಜಾಣ್ಮೆಯಿಂದಾಗಿ 'ಸಾಹಿತ್ಯ'ದ ಸಾಲಿನಲ್ಲಿ ಸೇರಿವೆ. ಕನ್ನಡದಲ್ಲಿ ಇದೊಂದು ಹೊಸ ದಾರಿ. ಬರೆದವರ ವಿಶಿಷ್ಟತೆ, ಪ್ರಾಯ ಮೊದಲಾದವನ್ನೆಣಿಸಿದರೆ ಇವರು ಕನ್ನಡ ಬರಹಗಾರರೊಳಗೆ ಒಂದಡೆಯನ್ನು ಪಡೆದು ಕೊಳ್ಳುವವರೆಂದು ತೋರುತ್ತದೆ. ಇವರು ತಮ್ಮ ಈ ಲೇಖನ ಕರ್ತವ್ಯವನ್ನು ಸಾಗಿಸುತ್ತ ಕನ್ನಡವನ್ನು ಬೆಳಗಿಸುವಂತಾಗಲಿ ಎಂದು ನಾನು ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ".*

ಕಥೆಗಾರ್ತಿ ಗೌರಮ್ಮನವರು ತಮ್ಮ ಹಲವು ಕಥೆಗಳಲ್ಲಿ ಜೀವಸಹಜವೆನಿಸಿರುವ ಪ್ರಣಯಭಾವದ ಅಭಿವ್ಯಕ್ತಿಯನ್ನು ಅತ್ಯಂತ ಸಹಜ ಹಾಗೂ ಸಮರ್ಥವಾಗಿ ನಿರ್ವಹಿಸಿರುವುದು ಅವರ ಕಥನಗಾರಿಕೆಯ ಮತ್ತೊಂದು ವಿಶೇಷ. 'ಸನ್ಯಾಸಿ ರತ್ನ' 'ಕೌಸಲ್ಯಾನಂದನ', 'ಹೋಗಿಯೇ ಬಿಟ್ಟಿದ್ದ', 'ಪ್ರಾಯಶ್ಚಿತ'... ಮುಂತಾದ ಕಥೆಗಳಲ್ಲಿ ಪ್ರಣಯ ಭಾವ ಉತ್ಕಟವಾಗಿ ಪ್ರಕಟಗೊಂಡಿದೆ.

ಗೌರಮ್ಮನವರು ಪರಂಪರೆಯ ನಂಬಿಕೆ - ಕಟ್ಟುಪಾಡುಗಳಿಗೆ ಜೋತುಬೀಳದೆ... ಇತ್ತ ಸಂಪ್ರದಾಯ ವಿರೋಧಿ, ಧರ್ಮವಿರೋಧಿ ಎಂಬ ಹೀಗಳಿಕೆಗೂ ತುತ್ತಾಗದೆ, ತಮ್ಮೊಳಗಿನ ಸೂಕ್ಷ್ಮ ಕಥನಗಾರಿಕೆಯ ಮೂಲಕ 'ಮತಾಂತರ' ದಂತಹ ಸೂಕ್ಷ್ಮಾತಿಸೂಕ್ಷ್ಮವಿಷಯವನ್ನು ತಮ್ಮ ಕಥನನೇಯ್ಗೆಗೆ 'ಸರಕಾಗಿ' ಆಯ್ಕೆ ಮಾಡಿಕೊಂಡಿರುವುದು ಅವರ ಪ್ರಗತಿಪರತೆ ಹಾಗೂ ಅವರೊಳಗೆ ಧರ್ಮಾತೀತವಾದ ಮಾನವೀಯ ಮನಸ್ಸೊಂದಿದೆ ಎಂಬುದನ್ನು ಸಾಬೀತುಪಡಿಸುತ್ತದೆ.

ಹಸಿವು - ಪ್ರೀತಿ - ಪ್ರಣಯದಂತಹ ಜೀವಜನ್ಯ ಸಂಗತಿಗಳ ಮುಂದೆ, ಮನುಷ್ಯ ನಿರ್ಮಿತ ಜತಿ - ಧರ್ಮಗಳೆಲ್ಲ ತೃಣ ಸಮಾನ ಎನ್ನುವುದನ್ನೂ ಈ ಕಥನಗಾರ್ತಿತಮ್ಮ ಕಥೆಗಳ ಮೂಲಕ ಪ್ರತಿಪಾದಿಸಿದ್ದಾರೆ.

ಗೌರಮ್ಮನವರು ಮೇಲು ಜಾತಿಯ ಸುಶಿಕ್ಷಿತ, ಮಧ್ಯಮ ವರ್ಗದಲ್ಲಿ ಹುಟ್ಟಿ ಬೆಳೆದಿದ್ದರೂ, ಅವರೂ ತಮ್ಮ ಬದುಕು - ಅನುಭವದಲ್ಲಿ ಕಂಡ ಶೂದ್ರರು, ಆರ್ಥಿಕ ದುರ್ಬಲರ ಸಮಸ್ಯೆಗಳನ್ನೆಲ್ಲ ತಮ್ಮ ಕಥೆಗಳಾದ 'ಹೋಗಿಯೇ ಬಿಟ್ಟಿದ್ದ,' 'ಅಪರಾಧಿ ಯಾರು,' 'ಆಹಿತಿ,' 'ಅವಳ ಭಾಗ್ಯ' 'ಮುನ್ನಾದಿನ' ಗಳಲ್ಲಿ ಮಾನವೀಯವಾಗಿ ಹೆಣೆದಿರುವುದು.... ಅವರೊಳಗಿನ ಸೂಕ್ಷ್ಮ ಸಂವೇದನೆ ಹಾಗೂ ಸಾಮಾಜಿಕ ಪ್ರಜ್ಞೆಗೊಂದು ಸಾಕ್ಷಿ.

ಗೌರಮ್ಮನವರು ತಮ್ಮ ಕಥೆಗಳಲ್ಲಿ ಸಾಮಾಜಿಕ ಆದರ್ಶಗಳನ್ನು ಪ್ರತಿಪಾದಿಸುವ ಸಂದರ್ಭ ಅಥವ ಸಾಮಾಜಿಕ ಸಮಸ್ಯೆಗಳಿಗೆ ತಮ್ಮ ಕಥಾ ಚೌಕಟ್ಟಿನಲ್ಲೇ ಪರಿಹಾರ ದೊರಕಿಸುವ ಸಂದರ್ಭದಲ್ಲಿ, ಕಥಾನಿರೂಪಣೆಗೆ ಭಂಗ ತಾರದಂತೆ ಕಲಾತ್ಮಕವಾಗಿಯೇ ವ್ಯಂಗ್ಯವನ್ನು ಬಳಸಿಕೊಂಡಿರುವುದು ಅವರ ಬರವಣಿಗೆಯ ಮತ್ತೊಂದು ವೈಶಿಷ್ಟ್ಯ. ಪುರುಷ ಕೇಂದ್ರಿತ ಸಮಾಜದ ಲಿಂಗಭೇದ ನೀತಿ, ವರ್ಗಭೇದ ನೀತಿ, ಆರ್ಥಿಕ ಅಸಮಾನತೆ, ಶ್ರೇಣಿಕೃತ ಜಾತಿ ವ್ಯವಸ್ಥೆ, ವರದಕ್ಷಿಣೆ, ಬಾಲ್ಯವಿವಾಹ, ವಿಧವಾವಿವಾಹ, ವಮ ದಾಂಪತ್ಯದಂತಹ ಸಮಸ್ಯೆಗಳನ್ನು ನಿರ್ವಹಿಸುವಾಗ ಈ ವ್ಯಂಗ್ಯವು ಪರಿಣಾಮಕಾರಿಯಾಗಿ 'ಕಾರ್ಯ' ನಿರ್ವಹಿಸುವಂತೆ ಕಥನಗಾರ್ತಿ ಎಚ್ಚರಿಕೆ ವಹಿಸಿರುವುದು ಅವರ ಕಥನಗಾರ್ತಿ ಎಚ್ಚರಿಕೆ ವಹಿಸಿರುವುದು ಅವರ ಕಥನಗಾರಿಕೆಯೊಳಗಿನ ಒಂದು ಹೆಚ್ಚುಗಾರಿಕೆ.

ಗೌರಮ್ಮನವರು ವರದಕ್ಷಿಣೆ ಸಮಸ್ಯೆಯನಿಟ್ಟು ಬರೆದ 'ಆಹುತಿ' ಮತ್ತು 'ನನ್ನ ಮದುವೆ' ಎಂಬ ಕಥೆಗಳಲ್ಲಿ ಕಥಾನಾಯಕರಿಬ್ಬರೂ ಬಡ ವಿದ್ಯಾವಂತರು. ವರದಕ್ಷಿಣೆ ಪಡೆದಾದರೂ ವಿದೇಶಕ್ಕೆ ಹೋಗಿ ವಿದ್ಯಾವಂತರಾಗಿ ಮರಳಿ ಬಂದು ಶ್ರೀಮಂತಬದುಕನ್ನು ನಡೆಸಬೇಕು ಎಂಬ ಕನಸುಕಟ್ಟಿಕೊಂಡವರು. ಆ ಕಥಾನಾಯಕರಿಬ್ಬರೊಳಗಿನ ಮಾನವತೆಯ 'ಕಣ್ಣು' ಗಳ ಮೇಲೆ ವರದಕ್ಷಿಣೆ ಎಂಬ ಭೂತ ಅಮಲೇರಿ ಕೂತ ಪರಿಯನ್ನು ಗೌರಮ್ಮನವರು ಎಷ್ಟು ಕಲಾತ್ಮಕ, ಸೂಚ್ಯ ಹಾಗೂ ವ್ಯಂಗ್ಯವಾಗಿ ಚಿತ್ರಿಸಿದ್ದಾರೆಂದರೆ ಅದು ಗೌರಮ್ಮನವರ ಕೇವಲ ಕಥನಕೌಶಲ್ಯಕ್ಕೆ ಮಾತ್ರ ನಿದರ್ಶನವಲ್ಲ - ಅದು ಅವರೊಳಗಿನ ಸಾಮಾಜಿಕ ಪ್ರಜ್ಞೆಯ ಅಭಿವ್ಯಕ್ತಿಯೂ ಹೌದು.

ಗೌರಮ್ಮನವರು ಹೆಣ್ಣುಗಳ ಭಾವಲೋಕವನ್ನು, ಅವರ ಮಾನಸವ್ಯಾಪರಗಳನ್ನು... ಅವರ ಸುಖಕಷ್ಟಗಳನ್ನು ತಮ್ಮ ಕೆಲವು ಕಥೆಗಳಲ್ಲಿ ಹೆಣ್ಣಿನ ಮೂಲಕವಾಗಿಯೂ ಮತ್ತು ಕೆಲವು ಕಥೆಗಳಲ್ಲಿ ಗಂಡಿನ ಮೂಲಕವಾಗಿಯೂ ವ್ಯಕ್ತಪಡಿಸಿರುವುದು ಕಥೆಗಾರ್ತಿಪುರುಷ 'ಸಂವೇದನೆ' ಯ ಬಗ್ಗೆ ಪೂರ್ವಾಗ್ರಹಪೀಡಿತರಾಗಿಲ್ಲ ಹಾಗೂ ಒಬ್ಬ ಬರಹಗಾರ್ತಿಗೆ ಇರಬೇಕಾದ ಸಮತಾಮನೋಭಾವ ಅವರೊಳಗಿದೆ ಎಂಬುದನ್ನು ಸ್ಪಷ್ಟಪಡಿಸುವಂತಿದೆ.

ಇವರ 'ವಾಣಿಯಸಮಸ್ಯೆ,' 'ಅವಳಭಾಗ್ಯ', 'ಕೌಸಲನಂದನ', 'ಸುಳ್ಳಿಸ್ವಪ್ನ', 'ಕೆಲವು ಕಾಗದಗಳು', 'ಮರದ ಬೊಂಬೆ', 'ಪಾಪನಮದುವೆ', 'ಒಂದು ಚಿತ್ರ' ಮುಂತಾದ ಕಥೆಗಳಲ್ಲಿ ಹೆಣ್ಣಿನ ಹೃದಯದ ಆವಿಷ್ಕಾರವನ್ನು ಹೆಣ್ಣು ಪಾತ್ರಗಳ ಮುಖೇನವಾಗಿಯೂ ಹಾಗೂ....`ಯಾರು? ', 'ನಾಲ್ಕು ಘಟನೆಗಳು', 'ಪ್ರಾಯಶ್ಚಿತ್ತ', 'ಒಂದುಪುಟ್ಟ ಚಿತ್ರ ', 'ಸನ್ಯಾಸಿ ರತ್ನ', 'ಹೋಗಿಯೇ ಬಿಟ್ಟಿದ್ದ', 'ಮನುವಿನ

ರಾಣಿ', 'ಪುನರ್ವಿವಾಹ', 'ಆಹುತಿ', 'ನನ್ನ ಮದುವೆ'... ಇತ್ಯಾದಿ ಕಥೆಗಳಲ್ಲಿ ಹೆಣ್ಣಿನ ಮಾನಸಲೋಕವನ್ನು ಗಂಡು ಪಾತ್ರಗಳ ಮೂಲಕವಾಗಿ ಬಿಚ್ಚಿಟ್ಟಿದ್ದಾರೆ.

೧೯೪೨ರಲ್ಲಿ ಹೊರಬಂದ ಗೌರಮ್ಮನವರ ಎರಡನೇ ಕಥಾಸಂಗ್ರಹ 'ಚಿಗುರು' ವಿಗೂ ಮುನ್ನುಡಿ ಬರೆದ ವರಕವಿ ಬೇಂದ್ರೆಯವರು ಅದರೊಳಗಿನ ಕಥೆಗಳ ಬಗ್ಗೆ ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ:

*'ಚಿಗುರು: ತಂಗಿ ಗೌರಮ್ಮನವರ ಎರಡನೆ ಕಥಾಸಂಗ್ರಹ. ಮೊದಲನೆಯದಾದ 'ಕಂಬನಿ'ಯಲ್ಲಿ ಹಣ್ಣು ಕಥೆಗಳಿದ್ದುವು. ಇಲ್ಲಿ ಚಿಗುರಿದೆ; ಮಿಡಿಯಿದೆ; ಪಾಡೂ ಇದೆ. ಈ ಸಂಗ್ರಹದಲ್ಲಿ ಅವರ ಮೊಟ್ಟಮೊದಲನೆಯ ಕತೆಯಿಂದ ಕಟ್ಟಕೊನೆಯ ಕಥಾಪಥವು ಕಂಗೊಳಿಸುವುದು 'ಕಾಯಿಯ ಗುಣವನ್ನು ಹೀಚಿನಲ್ಲಿ ನೋಡು' ಎಂದು ಹೇಳುತ್ತಾರೆ. ಆದರೆ ಒಮ್ಮೊಮ್ಮೆ ಅದು ಚಿಗುರಿನಲ್ಲಿಯೂ ಕಾಣುವುದೊ ಏನೋ? ಚಿಗುರು - ಈ ಹೆಸರು ತಂಗಿ ಗೌರಮ್ಮನವರು ತಮ್ಮ ಕಥಾಸಂಗ್ರಹಕ್ಕೆ ತಾವಿರುವಾಗಲೇ ಸೂಚಿಸಿದ ಹೆಸರು. ಈ ಹೆಸರಿನಿಂದ ಕತೆಗಾರ್ತಿಯ ಧೈರ್ಯ ಕಂಡುಬರುತ್ತದೆ. ಈ ಕತೆಗಳು ಚಿಗುರಾದರೆ ಅವರ ಹೃದಯದ ಹಣ್ಣುಗಳು ಎಂತಹವಾಗಿರುತ್ತಿದ್ದವು? ಚಿಗುರಿನೊಳಗಿನ ಎಲ್ಲ ಕತೆಯ ವಸ್ತು ಚಿರಂತನವಾದ ವಸ್ತು. ಅದು ಗಂಡು ಹೆಣ್ಣಿನೊಳಗಿನ ಪರಸ್ಪರ ಆಕರ್ಷಣ, ಒಲವು ದಾಂಪತ್ಯ ದುರಂತವೋ ಸುಖ ಮುಕ್ತಿಯೋ ದೇವರೇ ಬಲ್ಲ. ವಾಲ್ಮೀಕಿ ಮುನಿಯು ಕ್ರಂಚಮಿಥುನದಲ್ಲಿ ಕಂಡು ರಾಮಾಯಣದ ತುಂಬೆಲ್ಲ ಮಿಡುಕಿಬರೆದ ಮೂಲ ವಸ್ತುವೆಂದರೆ ಸುಖದಾಂಪತ್ಯ ದರ್ಶನ, ಆದರ ಆಗು - ಹೋಗು, ಅದರ ಸರಸ - ವಿರಸ, ಅದರ ವಿಧಿ ವಿಲಾಸ ದೈವ ದುರ್ವಿಪಾಕ. ತಂಗಿ ಗವರಮ್ಮನವರ ಹೆಣ್ಣು ಹೃದಯ ಈ ವಸ್ತುವನ್ನೇ ಮುಗ್ಧ ಅಪೇಕ್ಷೆಯಿಂದ, ಪ್ರೌಢ ವಿವೇಕದಿಂದ, ಸುಧಾರಕ ದೃಷ್ಟಿಯಿಂದ, ಪ್ರೌಢ ವಿವೇಕದಿಂದ, ಸುಧಾರಕ ದೃಷ್ಟಿಯಿಂದ, ಅವರಿಗೇ ಸಹಜವಾದ ಬೆಳೆಯಲಿರುವ ಸಮತೂಕದಿಂದ, ನೀತಿಯ ಗರ್ಭದಲ್ಲಿಯೂ ರಸಪಾಕಗೊಳಿಸುವ ಜಾಣ್ಮೆಯಿಂದ ಈ ವಿವಿಧ ಕತೆಗಳಲ್ಲಿ ವಿಸ್ತರಿಸಿದೆ. 'ಪಾಪನ ಮದುವೆ', 'ಮರದ ಬೊಂಬೆ', ಕೊನೆಯ - 'ಕಾಡನ ಕಥೆ' ಇವು ಮೂರೂ ಅವರ ಪರಿಪಕ್ವ ಪರಪಾಕೋನ್ಮುಖ ಸ್ವಾಭಾವಿಕ ಕಥಾ ಕೌಶಲ್ಯದ ಕುರುಹುಗಳಾಗಿ ಉಳಿಯ ಬಲ್ಲವು.*

ಗೌರಮ್ಮನವರ ಕಥೆಗಳಲ್ಲಿರುವ 'ಓದಿಸಿಕೊಂಡು ಹೋಗುವಂತಹ ಸರಳ ಭಾಷೆ' ಯೇ ಅವರ ಕಥೆಗಳ ಮತ್ತೊಂದು ವೈಶಿಷ್ಟ್ಯ. ಗೌರಮ್ಮನವರು ತಮ್ಮ ಮನೆ ಭಾಷೆ ಅಥವಾ ಆಡುಭಾಷೆ ಆಗಿರುವ ಹವ್ಯಕ ಕನ್ನಡವನ್ನು ಎಲ್ಲೂ ಬಳಸದೆ, ಎಲ್ಲರಿಗೂ ಅರ್ಥವಾಗುವ ಸರಳ - ಸಾಮಾನ್ಯ ಕನ್ನಡ ಭಾಷೆಯನ್ನೇ ಬಳಸಿರುವುದು ಅವರ ಭಾಷೆಯ ಒಂದು ವೈಶಿಷ್ಟ್ಯ. ನವೋದಯ ಸಾಹಿತ್ಯ ಸಂದರ್ಭದ ಇತರ ಬರಹಗಾರ್ತಿಯರ ಬರಹಗಳ ಭಾಷೆಗೆ ಹೋಲಿಸಿದ್ದಲ್ಲಿ, ಗೌರಮ್ಮನ ಸಾಹಿತ್ಯ ಭಾಷೆಯು ಅತೀ ಸ್ವಚ್ಚ, ಸರಳ, ಸಹಜ, ಗ್ರಂಥಸ್ಥ ಮತ್ತು ಸುಲಲಿತವಾದುದು.

ತಮ್ಮ ಕಥಾಹಂದರದೊಳಗೆ ತೆಳುವಾದ ಹಾಸ್ಯಪ್ರಜ್ಞೆಯ ಎಳೆಯನ್ನೆಳೆದುಕೊಂಡೇ ಬದುಕನ್ನು - ವ್ಯಕ್ತಿಗಳನ್ನು - ಸಮಸ್ಯೆಗಳನ್ನು ಕಾಣುವುದು ಗೌರಮ್ಮನವರ ಕಥನಗಾರಿಕೆಯೊಳಗಿನ ಕೌಶಲ್ಯದ ಪ್ರತೀಕ. ಇವರ 'ಪಾಪನ ಮದುವೆ', 'ಸನ್ಯಾಸಿ ರತ್ನ', 'ಅವಳ ಭಾಗ್ಯ' ಮುಂತಾದ ಕಥೆಗಳಲ್ಲಿ ಅವರ ಪರಿಹಾಸ್ಯ - ವಿಡಂಬನೆಯ ಪರಿಯನ್ನು ಕಾಣಬಹುದು.

ಇವರ ಬರವಣಿಗೆಯ ಶೈಲಿಯನ್ನು ಹಾಗೂ ವಸ್ತುವೈವಿಧ್ಯವಿರುವ ಅವರ ಕಥೆಗಳಲ್ಲಿರುವ 'ಓದಿಸಿಕೊಂಡು ಹೋಗುವ ಗುಣ'ವನ್ನು ಬಹಳವಾಗಿ ಮೆಚ್ಚಿಕೊಂಡಿದ್ದ ಕನ್ನಡದ ಮಹತ್ವದ ಕಾದಂಬರಿಗಾರ ದಿ. ಭಾರತೀಸುತ ಅವರು ಗೌರಮ್ಮನವರ ಸಾಹಿತ್ಯ ಮತ್ತು ಸಾಹಿತ್ಯ ವ್ಯಕ್ತಿತ್ವವನ್ನು ಹೀಗೆ ಗುರುತಿಸಿದ್ದಾರೆ: 'ಗೌರಮ್ಮನವರ ಸಾಹಿತ್ಯದ ಜೀವನ ಆರೆಂಟು ವರ್ಷಗಳ ಅವಧಿಯದು. ಈ ಅಲ್ಪಕಾಲದಲ್ಲಿ ಅವರು ತಮ್ಮ ಕಥಾಬರವಣಿಗೆಯ ಸಿದ್ಧಿ ಕಂಡುಕೊಂಡರು. ಗೌರಮ್ಮ ಹೊರಟುಹೋದರು. ಆದರೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರ ಹೆಸರು ಚಿರಕಾಲ ಉಳಿಯುವುದು. ಕನ್ನಡ ಕಥೆಗಾರ್ತಿಯರಲ್ಲಿ ಮೊದಲಿಗರೆಂಬ ಅಭಿಮಾನದ ಅಭಿದಾನ ಗೌರಮ್ಮನವರಿಗೇ ಮೀಸಲು' ಎಂದು.

ಗೌರಮ್ಮನವರ ಕಥೆಗಳಲ್ಲಿರುವ ಮತ್ತೊಂದು 'ಹೊಸತನ'ವನ್ನೂ ನಾವು ಗುರುತಿಸುವ ಅಗತ್ಯವಿದೆ. ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನವನ್ನು ಆತ್ಮಸ್ಥೈರ್ಯವನ್ನು ಅವರ ಮುಂಚಲನೆಯನ್ನು ಕುಂದಿಸಿದವರು... ಬರೀ ಪುರುಷರಷ್ಟೇ ಅಲ್ಲ... ಅದರಲ್ಲಿ

ಮಹಿಳೆಯರ ಪಾಲೂ ಸಾಕಷ್ಟಿದೆ ಎಂಬುದನ್ನು ಗೌರಮ್ಮನವರು ತಮ್ಮ ಕೆಲವು ಕಥೆಗಳಲ್ಲಿ ಪ್ರತಿಬಿಂಬಿಸಿರುವುದು ಅವರು ಆ ಕಾಲದ ಇತರ ಕಥನಗಾರ್ತಿಯರಿಗಿಂತ ಇವರು ವಿಭಿನ್ನ ಸಂವೇದನೆ ಉಳ್ಳವರಾಗಿದ್ದರು ಎನ್ನುವುದಕ್ಕೆ ಸಾಕ್ಷಿ.

ಸುಶಿಕ್ಷಿತ ಮೇಲ್ಜಾತಿಯ ಮಧ್ಯಮ ವರ್ಗದ ಕುಟುಂಬದಿಂದ ಬಂದಿರುವ ಗೌರಮ್ಮನವರು ತಾವು ಹುಟ್ಟಿ, ಆಡಿ ಬೆಳೆದ ಕೌಟುಂಬಿಕ ಸಾಂಸ್ಕೃತಿಕ ಪರಿಸರ, ಆ ಪರಿಸರದಲ್ಲಿನ ಉಸಿರುಗಟ್ಟಿಸುವ ಸಂಪ್ರದಾಯ, ಸಾಮಾಜಿಕ ಮೌಢ್ಯಗಳು, ಅಲ್ಲಿರುವ ಹೃದಯ ಶ್ರೀಮಂತಿಕೆ, ಮುಗ್ಧ ಮಾನವಿಕ ಪರಿಸರ ಇವೆಲ್ಲವೂ ತಮ್ಮ ಕಥೆಗಳಲ್ಲಿ ಸಮೃದ್ಧವಾಗಿ ಸಮತೋಲನದಿಂದ ತುಂಬಿ ತುಳುಕಾಡುತ್ತಿರುವಂತೆ ಎಚ್ಚರಿಕೆ ವಹಿಸಿರುವುದು ಅವರ ಕಥನಗಳ ವೈಶಿಷ್ಟ್ಯ.

ಅಂದಿನ ಸಮಾಜ ವ್ಯವಸ್ಥೆ, ಆ ಸಮಾಜದೊಳಗಿನ ಅನಿಷ್ಟಗಳ ಬಗ್ಗೆ ಗೌರಮ್ಮನವರಿರುವ ಅಸಹನೆ, ಸಾತ್ವಿಕ ಸಿಟ್ಟು ಹಾಗೂ ಅದೇ ವ್ಯವಸ್ಥೆಯೊಳಗೆ ನರಳುತ್ತಾ ಬಾಡುವ... ಅಭಾಗ್ಯರ ಬಗ್ಗೆ ಗೌರಮ್ಮನವರ ಕಾಳಜಿ ಇವೆಲ್ಲವೂ ಅವರ ಭಾವಕೋಶದೊಳಗೆ ಹೊರಳಿ ಅವರೊಳಗಿನ ಭಾವಪ್ರೌಢಿಮೆ ಹಾಗೂ ಭಾಷಾ ಪ್ರೌಢಿಮೆಯಿಂದಾಗಿ ಕಥಾರೂಪ ಪಡೆದು ಇಂದಿಗೂ... ಎಂದೆಂದಿಗೂ ಪ್ರಸ್ತುತವೆನಿಸುವ ಕಥೆಗಳಾಗಿ ಉಳಿದಿರುವುದು ಅವರಿಗೆ ಲಥನಕಟ್ಟುವ ಕೆಲೆಗಾರಿಕೆ ಚೆನ್ನಾಗಿ ಸಿದ್ಧಿಸಿತ್ತು ಎನ್ನುವುದಕ್ಕೆ ಅವರ 'ಮನುವಿನ ರಾಣಿ' ಕಥೆಯೇ ಅತ್ಯುತ್ತಮ ಸಾಕ್ಷಿ.

ಮಡಿ ಮೈಲಿಗೆಯುಳ್ಳ ಬ್ರಾಹ್ಮಣಿಕೆ ಪರಿಸರದಲ್ಲಿ ಹುಟ್ಟಿ ಬೆಳೆದ ಗೌರಮ್ಮನವರು ಸಂಪ್ರದಾಯ ಸಮಾಜಕ್ಕೆ ಎಂದೂ ಸಹನೀಯವಾಗದ 'ಅನೈತಿಕ ಜೀವಿಗಳು' ಎಂದು ತುಚ್ಛೀಕರಿಸಲ್ಪಟ್ಟ ವೇಶ್ಯೆ ಹಾಗೂ ವೇಶ್ಯಾಸಮಸ್ಯೆಯ ಬಗ್ಗೆ ಮಾನವೀಯವಾಗಿ ಬರೆದ 'ಮನುವಿನ ರಾಣಿ' ಎಂಬ ಕಥೆ ಇವರಿಗೆ ಶ್ರೇಷ್ಠ ಕಥೆಗಾರ್ತಿ ಎಂಬ ಪ್ರಸಿದ್ಧಿಯನ್ನು ತಂದು ಕೊಟ್ಟಿತು.

**ಉಪಸಂಹಾರ**

ನಮ್ಮ ಕನ್ನಡ ಮಹಿಳಾ ಸಾಹಿತ್ಯದಲ್ಲಿ ಹುರುಳಿಲ್ಲ - ಮಹಿಳೆಯರ ಸಾಹಿತ್ಯದಲ್ಲಿ ಅನುಭವದ ವೈವಿಧ್ಯತೆಯ ಕೊರತೆಯಿದೆ, ಅಧ್ಯಯನದ ಕೊರತೆಯೂ ಇದೆ, ಪರಂಪರೆಯಿಂದ ಹೆಣ್ಣು ಅನುಭವಿಸಿದ ಶೋಷಣೆ, ದೌರ್ಜನ್ಯ, ಅವಹೇಳನಗಳನ್ನು ಪ್ರತಿಬಿಂಬಿಸುವ ಬರಹಗಳು ತೀರಾ ಕಮ್ಮಿ ಎಂಬ ಆರೋಪವಿದೆ. ಹಾಗೆಯೇ ನಮ್ಮ ಬಹಳಷ್ಟು ಬರಹಗಾರ್ತಿಯರು ಪರಂಪರಾಪ್ರಿಯರು; ಪರಂಪರಾಗತವಾಗಿ ಹೆಣ್ಣು ಒಪ್ಪಿಕೊಂಡ ಮೌಲ್ಯಗಳಾದ ತ್ಯಾಗ, ನಿಷ್ಠೆ, ಸಹನೆ, ಪಾತಿವ್ರತ್ಯ ಇವುಗಳನ್ನು ವೈಭವೀಕರಿಸುವ ಕೃತಿಗಳನ್ನೇ ಇವರು ಇತ್ತೀಚಿನವರೆಗೆ ರಚಿಸಿದರು ಎಂಬ ಆರೋಪವೂ ಇದೆ. ಆದರೆ ಈ ಎಲ್ಲಾ ಆರೋಪಗಳನ್ನು ನಿರಾಕರಿಸುವಷ್ಟು ಮಟ್ಟಿನ ಪ್ರಗತಿಪರ ನಿಲುವಿನ ಕಥೆಗಳನ್ನು ಕೊಡಗಿನ ಗೌರಮ್ಮನವರು ನವೋದಯ ಸಾಹಿತ್ಯ ಕಾಲಘಟ್ಟದಲ್ಲೇ ಕನ್ನಡಿಗರಿಗೆ ನೀಡಿದ್ದರು ಎಂಬುದನ್ನು ನಾವು ಮರೆಯುವಂತಿಲ್ಲ.

## ರಾಗ ಸಂಗತ್ಯ

ಶ್ರೀ ಗುರುವಿಗೆ ನಾನು ಬಾಗಿ ಸಾಷ್ಟಾಂಗಾವ ಮಾ
ಡೀಗ ಲೊರೆವೆನೀ ಕೃತಿಯಾ
ಸಾಗೀಸಿಕೊಡು ನಿಮ್ಮ ಯೋಗಾದ ಬಲದಿಂದ
ಬ್ಯಾಗಾದಿ ಯೆನಗೆ ಸುಮತಿಯಾ ೧

ಶ್ರೀ ಗಣಾನಾಥನೇ ಆಗಮಾತೀತನೇ
ಯೋಗೀಗಳಿಂದ ವಂದಿಪನೇ

ಸಾಗಿಸಿಕೊಡು ನೀನು ಸಾಗೂವ ಚರಿತೆಯೆನೂ
ಬ್ಯಾಗಾನೆ ಮತಿಗೆ ಮಂಗಳವಾ ೨

ಶ್ರೀ ಶಾರದಾಂಬಳೇ ಶ್ರೀ ಸರಸ್ವತಿ ದೇವಿ
ವರ ಬ್ರಹ್ಮನ ರಾಣಿಯೆ ನೀನೂ
ಭರದಿಂದ ಕೃತಿಗಾಳನೊರೆವೇನು ನಾನೀಗ
ಸುರಿ ಎನ್ನ ಜಿಹ್ವೆಗ ಮೃತವನೂ ೩

ಇದು ಸತ್ಯ ಶರಣಾನ ಸದಮಾಲ ಚರಿತಾವು
ಹೃದಯೆ ಶುದ್ಧವ ಮಾಡಿ ಕೇಳಿ
ಇದು ಪರರುಪ ಕಾರಾರ್ಥಕಾಗಿ ಮಾಡೀದ
ಪದುಳಾದಿಂ ಕಥೆಯೇ ನೊರೆವೇನೂ ೪

ಇದರಲ್ಲಿ ದೋಷಾವು ಮುದದಿಂದಾ ತೋರಾಲು
ವದಗಿ ತಿದ್ದುವದು ಉತ್ತಮರೂ
ಛಂದಸ್ಸು ಅಕ್ಷಾಣಾ ಒಂದರಿಯೆದಾ ಕಂದಾ
ಯಂದು ನಿಮಗೆ ವಂದಿಸುವೆನೂ ೫

ಮಳೆ ಹೋಗಿ ಕೆರೆಯೊಣಗಿ ಬೆಳೆಯು ಇಲ್ಲದೆಯರಲೂ
ತಿಳಿದು ಯಚರಿತೆ ನೋದಿದರೇ
ಮಳೆಯಂದ ಕರೆತುಂಬಿ ಬೆಳೆಯಿಂದ ಒಲವಿಂದ
ನೆಳಲಾಗಿ ವೊಲ್ಯಾಡುವುರೂ ೬

ಇದರಲ್ಲೇನಿಹುದೆಂದು ಮದದಿಂದಾ ಜರಿದರಿಗೆ
ಒದಗುವದು ಪಾಪ ನಿಮಿಷದಲೀ
ಚತುರ ಚೇಷ್ಟೆಯೆ ಬಿಟ್ಟು ಯುದರಲ್ಲಿ ಮನಸಿಟ್ಟು

ಸದಯೇಕ ಚಿತ್ತದಲಿ ಕೇಳಿ ೭

## ಪದ

ಶ್ರೀ ಯಿನ್ನು ಮುದ್ದಂಣಾನು ತನ್ನ ಅರಮನೆಗಾಗಿ
ಪನ್ನಂಗ ಧರನೆ ಗತಿಯೆನುತಾ
ಯೆನ್ನಾನು ನೀನೀಗ ಮನ್ನಿಶಿತಾಯೆಂದು
ಭಿನ್ನೈಶಿ ಕುಳಿತಾನು ೧

ಯೇಳ್ನೂರು ವಡ್ಡ ಭರದಿಂದೆಲ್ಲರು ಬಂದೂ
ವರದು ಹೇಳ್ಳೈಯೆ ಕೆಲಸಗಳಾ

ಸರಸಾದಿ ಮಾಡುವೆವು ಯಿರದೇನ ತೋರೆಂದು
ಅರಸಾನ ಕೇಳೀದರಾಗಾ ೨

ಭಾಳ ಹಣವುಳುದಾವೆ ಯೋಳು ದಿಡುಗಗಳನ್ನು
ಮ್ಯಾಳೈಸಿ ಕಟ್ಟೇರಿಯೆಂದಾ
ಹೇಳಿದಾಕ್ಷಣದಲ್ಲಿ ಘೋಳೆಂದು ಸರ್ವಾರು
ಗೊಳ್ಳೆತಗದಂತೆ ಹೊರಟಾರು ೩

ಮನಿಗ್ಹೋಗಿ ತಾಯೇಗೆ ಅನುನಾಯೆದಿಂದಾಲೀ
ಕನಸಾಯ್ತು ಹೋಗೂವೆನೆಂದಾ
ವಿನಯೆ ಮಾರ್ಗದಿ ಕಂನ್ನೆಯೀರಮ್ಮನಲ್ಲಿಗೆ ಹೋಗಿ
ಕನಶೀನ ಪರಿಯೆಲ್ಲ ಪೇಳೆ ೪

ಅಣ್ಣಾ ನೀ ಹೋದಂಥ ವುನ್ನತಾ ಕೆಲ್ಸಗಳೂ
ಚನ್ನಾಗಿ ಆಗೂವದೆನಲೂ
ನಿನ್ನ ಕರುಣವುಯೆನಗೆ ಪೂರ್ಣಯಿರಬೇಕೆಂದು
ಭಿನ್ನೈಶಿ ಸಾಷ್ಟಾಂಗ ಮಾಡೀ ೫

ಯೆರಗಿದಂಣನ ಬಳಿಗೆ ಭರದಿಂದ ಬಂದಾಳು
ಕರುಣದಿಂದೆತ್ತಿ ಹರಶಿದಳೂ
ತಡಂವೇಕೆ - ನೀನೀಗ ಸ್ಥಿರವ ಮಾಡಿಸು ಯೆಂದೂ
ವರದೆಲ್ಲ ಹೇಳಿ ಕಳುಹಿದಳೂ ೬

ವರವನು ಪಡಕೊಂಡು ಯಿರದೆ ತಾ ಬಂದಾನು
ಅರಮನೆ ಬೀದಿಯೊಳಾಗಾ
ಪರಿಪರಿ ಜನರುಗಳಾ ಕರಶಿಕಂಡನು ರಾಜಾ
ವರತುರುಗವನೇರಿ ನಡದಾ ೭

ಯತ್ತಾಲಿ ಕನ್ನೇರ ನೆತ್ಯಾವ ನಡಸೂತ
ನಿತ್ಯ ಪಾವಾಡಗಳು ಮೆರಿಯೋ
ಸುತ್ತ ಗ್ರಾಮದ ಜನರೂ ವಿಸ್ತರಿಸಿ ಕೇಳಿದರೂ
ಅರ್ಥಿಯೆಲಿ ಕೊಡುತ ವರಗಳನೂ ೮

ಘನ ಶುಕ್ರವಾರದಿ ವಿನಯಾದಿ ನಾಂಟ್ಯವಾ
ಅನುವಾಗಿ ಆಡುತಲಿಹಳೂ
ಜನಬಂದು ನೋಡಾಲು ನಾನಾವಾದ್ಯದ ಶಬ್ದ
ಅನುವಾಗಿ ಕೇಳ್ಯೂಕೆ ಜನಬಂದು ನೋಡಾಲು
ನಾನಾವಾದ್ಯದ ಶಬ್ದ ಅನುವಾಗಿ ಕೇಳೂತಲಿಹವೂ ೯

ಗೌರೀಯೆ ಹುಡುಗರು ಕಡು - ಬಡವರು ಹೋಗಿ
ವರಕಂನೇರಂಮನೆಂದನಲೂ
ಕರದ ಧ್ವನಿಗಳ ಕೇಳಿ ಭರದಿಂದ ತಾಕೂಡಿ
ಕರದಳೂ ಕರಣ ವಾದ್ಯದಲೀ

ತಡವ್ಯಾಕೆ ಹೇಳಿರಿ ಧೃಡದಿಂದ ನೀವೆಲ್ಲ
ನುಡಿಯೆಲೆರಗಿದರು ಚರಣದಲೀ
ಕುಡು ಬಿಡದೆ ಗೌರಿಯೆನಾಡಿ
ಕುಡುವೇವು ಯೆಂದು ಕೇಳಿದರೂ ೧೧

ತಂದು ನಾ ಕೊಡುವೇನು ಮುಂದಕ್ಕೆ ಹೋಗಿರಿ
ತಂದಿಟ್ಟು ಕರೆವೆ ನಿಂಮಗಳಾ
ತಂದುಗುಂಪಿಯೆ ನಿಡಲೂ ಅಂದಾದಿ ಅವರವರ
ಚಂದಾದಿ ವಿವರೀಸಿ ತಾಯಿ ೧೨

ನಿಂದು ಕರೆಯೆಲು ಅವರು ಬಂದಾರು ಬೇಗನೆ
ಚಂದಾದಿ ಹರುಷದೊಳಾಗಾ
ಸಂದೋಹ ಗೂಡಿ ತಾ ತಂದು ಗೌರಿಯೆ ನಾಡಿ
ಮುಂದೆ ತಂದಿಟ್ಟರು ಯೆಲ್ಲಾ ೧೩

ಬಾರಮ್ಮಾ ಕಂನೇರಾ ವೂರೆಲ್ಲಾ ನೋಡಿದರೂ
ಸಾರಿಕೊಂಡಾಡಿ ಹೊಗಳಿದರೂ
ಸರ - ತದೊಳಗೇ ವುಡವೆ ವಸ್ತುಗಳೆಲ್ಲ
ಬೆರಗಾಗಿ ನೋಡಿದರಮ್ಮಾ ೧೪

ಮಕ್ಕಾಳೆ ಹೋಗೀರಿ ಚಿಕ್ಕಾವರೆಲ್ಲರೂ
ತ್ಯಕ್ಕೊಂಬುವೆನು ವೊಡವೆಗಳನೂ
ಫಕ್ಕಾನೆ ಫಲಹಾರ ಯಕ್ಕಿಯೆಲ್ಲರಿಗಾಗ
ಚಕ್ಕಂದದಿಂದ ಕಳೂಹುತಲೆ ೧೫

ಯಿಂತಿರುತಿರೆ ಬಹಳಾ ಹತ್ತೋತು ಮಳೆಗಾಲ
ವತ್ತರಿಸುತ ಬಂತುಸುರಿಯೆ
ಗೊತ್ತಿಲ್ಲದಳ್ಳಗಳೂ ವಿಸ್ತಾರಿಸುತಬಾರೆ
ಭರ್ತಿತುಂಬೀತು ಕೆರಿಯು ಬೇಗಾ ೧೬

ಬಂದು ಶ್ರೀ ಗಂಗೇಯು ನಿಂದು ನೋಡಿದಳಾಗ
ಬಂಧೂರದಿಂದಿರುವ ಕೆರೆಯ
ಯಿಂದಿರೇಶನು ಯಾದನೂ ಬಂಧಿಸಿದನಲ್ಲಾದೆ
ಅಂದಳಿನ್ಯರಿಂದಲರಿದೂ ೧೭

ಸಂದೇಹ ಗೊಳುತ್ತಾಲೆ ಸಂದೂಗಳ ಹುಡುಕೂಕ
ಬಂದಾಳ ತನ್ನೀರನೆಡಿಗೇ
ಯಿಂದು ಯೆನಗೆ ದಾರೀ ಬಂದು ತೋರಿಸುತಾಯಿ
ಯೆಂದು ಕೈಮುಗಿದು ಕೇಳಿದಳೂ ೧೮

ದಾರಿಯೆಲ್ಲಿ ಹುದಮ್ಮಾ ಮರಾರಿವೇಲೀ
ಪುರ ಮುದ್ದಂಣ ಕಟ್ಟಿಸಿದಾ
ಮಾರದ ಕೆರೆಯೆಂದು ಸಾರ ಗಂಗಾಂಬಿಕೆ
ಸಾರ ಸಾಷ್ಟಾಂಗ ಮಾಡಿದಳೂ ೧೯

## ಶ್ರೀ ಗಂಗಾ ದೇವಿಗೂ ಕಂನ್ನೇರಮ್ಮಗೂ ವಂದಿಪೇ

**(ಆನಂದ ಭೈರವಿ – ನೀನೆದಯಾಳೋ ಎಂಬಂತೆ – ಏಕತಾಳ)**

ದಾರಿಯೆನು ಕೇಳಬ್ಯಾಡೇ ಗಂಗಾ
ಊರು ಈ ಬಳಿಯೊಳಿರುವೆ ವಂಮ
ಮರಾರಿ ನಿನ್ನ ವಲ್ಲಭನು ಮುದ್ದಣ್ಣಗೇ
ತೋರಿ ವರವನು ಕೊಟ್ಟು ಕೆರೆಯೆ ಕಟ್ಟಿಸಿದಾ ೨೦

ಸರ್ವಕಾಲದೊಳು ಕನ್ನೆರಾ ಪೂರ್ವದಲಿ ಹೋಗುವಂತೆ
ದಾರಿಯೆನು ಬಿಡದಂತೆ ನಾರಿ ಹಳ್ಳದಿ ಬಂದೆ
ಮೀರಿನನಗಿನ್ನು ಗುರಿಯಾಗಿ ನಿಂತಿಹೆ ನೀನು
ದಾರಿಯೇನು ಕೊಡುತಂನರನೆ ನಾನು ಮೀರಿಬಂದಿಹೆನು ನೋಡೇ ೨೧

ಕೋಡೆರಡು ಮದಗವೇಳೂ ಗಂಗಾ ನೋಡಿ ಬಿಟ್ಟಹರೆ ತಾಯಿ
ವಡನೇ ನೀನಿದರಲ್ಲಿ ನಡಿಯೆಂದು ಕನ್ನೇರ
ನುಡಿದು ಗಂಗಾಂಬಿಗೆ ಕಡುದೈನ್ಯದಲ್ಲಿ ಹೇಳೆ ದಾರಿಯೆನು ಕೇಳ
ಬ್ಯಾಡೆ ಗಂಗಾ ಮಾರು ಹೇಳಿರುವೆವಮ್ಮ ೨೨

ಯಷ್ಟುಸ್ಥಳ ಕನ್ನೆರನೇ ಯೆನಗೇ ಬೆಟ್ಟು ಯಿಡಲಿಕ್ಕಾಗದೇ
ಬೆಟ್ಟದಂದದಿಯರುವೆ ಯಿಷ್ಟದಿಂದಲಿ ಕಂಡೂ
ಥಟ್ಟನೆ ಹೋಗುವೆನು ಘಟ್ಟಿಮನಸನೆ ಮಾಡಿ ದಾರಿಕೊಡು ಕನ್ನೆರಸಿ
ನಾನು ಮೀರಿ ಬಂದಿಹೆನು ನೋಡೇ ೨೩

ಕೊಡುಬೇಕು ಕೋಡಿಗಳೊಳು ಗಂಗಾ ಕೊಡುಬೇಕು ಮದಗಗಳೇಳಲಿ
ಕಡಿಮೀಯೆ ಸ್ಥಳದಲ್ಲಿ ವಡನೆದಾರಿಯೆಕಂಡಲೂ
ಕೆಡಗಾಗುವದು ನಾನು ನೋಡಲಾರೆನೇ ತಾಯೀ
ದಾರಿಯೆನು ಕೇಳ ಬ್ಯಾಡೆ ತಾಯಿವೂರು ಯೋಳಿರುವೆವಂಮ್ಮ ೨೪

ಕೇಡು ಮಾಡುವದಿಲ್ಲ ವೇ ಕನ್ನೆರಾ ನೋಡು ನೀನಂತು ಯೀಗಾ
ಬೇಡಿಕೊಂಬುವೆ ತಾಯೀ ತಡಮಾಡ ಬ್ಯಾಡಮ್ಮ
ರೂಢಿ ಜನರಿಗೆ ನಾನು ಕೇಡುಮಾಡುವದಿಲ್ಲಾ
ದಾರಿತೋರು ಕನ್ನರಸೇ ನಾನು ಮೀರಿ ಬಂದಿಹೆನು ನೋಡೇ ೧೫

ತಿರಿಗಿ ಹೋಗಮ್ಮಾ ಗಂಗಾ ಯೆನಗೆ ಗುರುವಿನಪ್ಪಣೆಯಿಲ್ಲ ವೂ
ಕೆರೆಯೆನೊಪ್ಪಿಳಿಯೆನಗೆ ಹರಸು ವರಗಳು ಕೊಟ್ಟು
ಸ್ಥಿರವಾಗಿಯರುಯೆಂದು ಶರಣು ನೇಮಿಸಿದನೂ
ದಾರಿಯೆನು ಕೇಳ ಬ್ಯಡೆ ಗಂಗಾ ವೂರುಯೋಳಿರುವೆವಮ್ಮಾ ೧೬

ಬರುವುದೊಂದೇ ಬಲ್ಲೇನೇ ಕನ್ನೇರ ತಿರಗಿ ಹೋಗುವದರಿಯೆನೇ
ಅರಿಯೆದಲೆ ನಾ ಬಂದ ದಾರಿಯೆನು ಕೊಡುಯೀಗ
ಬರುವದಿಲ್ಲವು ಮೀರಿ ಸರಿದು ಹೋಗುವೆ ತಾಯೀ
ದಾರಿಬಿಡು ಕನ್ನರಸೆ ನಾನು ಮೀರಿ ಬಂದಿಹೆನು - ಕೇ ೧೭

ಸುಲಭವಲ್ಲವು ಗಂಗನೆ ನೀನು ಮಲತುನಿಂತಿರುವೆ ಯೀಗಾ
ಹುಲಿ ಹಶಿದು ಮಂತ ಕುರಿಹಿಂಡು ತಲಕುವತ್ಯರದಿ
ಸಾಲೇಳು ಗ್ರಾಮಗಳು ತೇಲಿ ಕಲಕುವ ವಮ್ಮದಾರಿಯೆನು
ಕೇಳಬ್ಯಾಡೆ ಗಂಗಾ ವೂರುಯೊಳಿರುವೆವಂದು ೧೮

ಅರಿಯೆದಲೆ ಬಂದೆ ನಂಮ ಕಂನೇರ ದಾರಿಯೆನು ಬಿಡದಿದ್ದರೇ
ಮೀರಿ ಹೋಗುವೆ ನೋಡು ನರಿ ಸೈರಿಸಲಾರಿ
ಸಾರಿ ಹೇಳುವೆ ಕೇಳು ತೂರಿವೆನು ಖಂಡಿತವು
ದಾರಿ ಬಿಡುಕಂನರನೆ ನಾನು ಮೀರಿ ಬಂದಿಹೆನು ನೋಡೇ ೧೯

ಹೇಳಿ ಕಲುಹುವು ಗ್ರಾಮಕೆ ಗಂಗಾ ತಳಿ ಸೈರಿಸೆಂಝೂವದಿ
ಯೋಳು ಗ್ರಾಮಗಳಿಂನು ಹಾಳಾಗುವುವು ಯೀಗ
ಹೇಳಲಿನ್ನೇನೆಂದು ಫಳಿಲನೇ ತುಗಿದಳು ದಾರಿಯೇನು
ಕೇಳಬ್ಯಾಡ ಗಂಗಾವೂರು ಯೋಳಿರುವೆವಂಮ ೨೦

ಬಾರಲೇ ವಾಲ್ಮೀಕ ಶೇರಿರುವೆರ್ಯರೆಂದು
ಕರದಾಳು ಮೂರು ಧ್ವನಿಯಂದಾ
ಕರದ ತಕ್ಷಣದಲ್ಲಿ ಭರದಿಂದ ಬಂದಾನು
ಯೆರಗಿ ಸಾಷ್ಟಾಂಗ ಮಾಡಿದನೂ ೨೧

ಕರಗಾಳ ಜೋಡೀಸಿ ಬೆರಗಾಗಿ ತಾನಾಗ
ಥರಥರ ನಡುಗೂತ ನಿಂದೂ
ಶರಣೆಂದು ಕೇಳಾಲು ಸಾರಿ ಹೇಳಿದಾಳಾಗಾ
ನೀರೆ ನಾಯರುವುದಿಲ್ಲೆಂದೂ ೨೨

ಊರೀಗೆ ಹೋಗೆಲೂ ಸೈರಿಸಲಾರೆನೂ
ಕರದು ಬಾರಲು ಗ್ರಾಮದವರಾ
ಮೀರಿ ಬಂದಳು ಗಂಗಾ ತೋರೆನೇ
ಹೋಗೆಂದು ಸಾರಿ ಹೇಳಿದಳು ಕನ್ನೇರಾ ೩೩

ಅಮ್ಮನೇ ನೀವೀಗಾ ಘಮ್ಮನೇ ಕಳಿಹೀಸಿ
ಮರ್ಮ್ಮಾವಾ ಮಾಡುವಿರಿ ಹ್ಯಾಗೂ
ಸಮ್ಮತವಿಲ್ಲಮ್ಮ ನಿಮ್ಮ ಮಾತಿನ ಮ್ಯಾಲೆ
ಸುಮ್ಮನೇ ಓಗೋದಿಲ್ಲೆನಲೂ ೩೪

ಬಾರಯ್ಯೆ ವಾಲ್ಮೀಕ ಯೇರೂಪು ನಿಜರೂಪೆ
ಸರಸಾದಿ ಕೊಡುವೆ ಭಾಷೆಗಳಾ
ಹರಷಾದಿ ವಾಲ್ಮೀಕ ಶರಗೊಡ್ಡಿ ರೆಂದಾಗ
ಸ್ಥಿರವಾಗಿ ಕೊಡು ತಾಯಿ ಯೆನಲೂ ೩೫

ಬರುವ ಪರಿಯೆಂತರವೂ ಸ್ಥಿರವಾಗಿ ಯಿರುವೇನು
ಕರದು ಶರಗೊಡ್ಡು ಯೆಂದಾಗ
ತರುಣಿ ಭಂಗರದ ತೆರವೆತ್ತಿ ನೀರಾನು
ಯೆರದಾಳು ಮೂರು ಬೊಗುಶಿಯೆನೂ ೩೬

ನಿನ್ನ ಕಾಣದೆ ನಾನು ಯಿನ್ನು ಕಡಿಯುವದಿಲ್ಲಾ
ಪನ್ನಂಗಧರನಾಣೆ ಹೋಗೂ
ಸನ್ನೂತದಿಂದಾಲಿ ಯೆನಗೆ ಭಾಷೆಯು ಯೇಗ
ದೊರಕೀತು ಯೆನುತಾಲಿ ಹೊರಟಾ ೩೭

ವೂರೀಗೆ ತಾ ಬಂದು ಭರದಿಂದ ಯೆಲ್ಲಾರ
ಸಾರಿ ಭೋರೆಂದು ತೂಗಿದನೂ
ಈ ರಾತ್ರಿಯೊಳಗಿನ್ನು ಸಾರೂದೇನೆಂದು
ಭೋರಾನೆ ಬಂದಾರು ಜನರೂ ೩೮

ಯಿನ್ನು ಯಿದು ಯೇನೆಂದು
ಮನ್ನೀಶಿ ಸರ್ವಾರು
ಚೆನ್ನಾಗಿ ಕೇಳಿದರಾಗಾ ಯಿನ್ನು ನೀವೆಲ್ಲಾರು
ಮುನ್ನಾಲಿ ಗುಳೇವು ಚನ್ನಾಗಿ ಜಾಗ್ರತೆ ಯದರೆಂದಾ ೩೯

ಕೇರಿಯೆ ತುಂಬಿತು ಕೇಳಿ ಪರಿಪೂರ್ಣ
ತೆರೆಗಾಳು ಯೇರೀಯೆ ಮ್ಯಾಲೆ
ಹೊರಳುವವೂ ಊರಿಗೆ ಹೋಗಿನೀ
ಭೋರಾನೆ ಹೇಳೆಂದು ಸಾರಿ ಹೇಳಿದಳು ಕಂನೇರಾ ೪೦

ಅಂದ ಮಾತಿಗೆ ಆಗ ಬಂದ ಜನರುಗಳೆಲ್ಲಾ
ಸಂದೇಹಗೊಂಡು ಕಳುವಳಿಸೇ
ಅದರಲ್ಲಿ ವಬ್ಬಾತ ಚದುರ ಬುದ್ಧಿಯೆಲೆಂದು
ಯಿದು ಯೇನು ವಿವರ ಹೇಳೆನಲೂ ೪೧

ವಿವರೀಸಿ ಹೇಳಿದನೂ ತವಕದಿಂ ವಾಲ್ಮೀಕಾ
ಕವಲಿಲ್ಲದಂತೆ ಯೆಲ್ಲವನೂ
ನೀವು ಸರ್ವರು ಕೂಡಿ ದೇವಿಗ್ಹೇಳುವ ಮಾತು
ಯಾವದು ಹೇಳೆಂದನಾಗಾ ೪೨

ಕೇಳಯ್ಯೆ ವಾಲ್ಮೀಕಿ ಹೇಳುವೆವು ನಿನಗೊಂದು
ಭಾಳಾದಿನವು ಯರುವವೂತಾ
ಜಾಳನೆ ಬ್ಯಾಡಯ್ಯಾ ಹೇಳಿದೀ ಮಾತನೂ
ತಿಳಿದು ನೋಡೆನಲೂ ಮನದೊಳಗೇ ೪೩

ಯೇನು ಹೇಳಲಿ ನೀವು ನಾನೀಗ ಕೇಳುವೆನು
ಘನ ದೈವ ಯೆನಗೆ ದೇವತವೂ
ಯೆನಲಗ ಹೇಳಿದರೂ ನಿನ್ನಾನು ಹತಮಾಡಿ
ಚಿನುಮಯಾ ಶಿವನಾ ಸ್ತುತಿಸುವೆವೂ ೪೪

ಹೇಳತ ಮಾತುಗಳಾ ಕೇಳಿ ಹರುಷಿತನಾಗಿ
ತಾಳಾದೆಲ್ಲಿ - ರೆಂದೆನಲೂ
ಯೇಳೂರು ಬದುಕುವವೂ ಮೂಳ ಜೀವನವಂದೂ
ಬಾಳೀ ನಾನಿದ್ದೇನು ಫಲವೂ ೪೫

ಯೆಂದು ಹೇಳಲು ಆಗಾ ತಂದ ಖಡ್ಗಗಳಿಂದಾ
ಕೊಂದುಹೂಳಿದರು ಅಗಸಿಯೆಲೀ
ಚಂದಾನ ಯಿದು ನಿಮಗೇ ಕಂದಾನ ಕೊಲ್ಲುವದು
ಯೆಂದು ಬಂದರು ತಂದೆ ತಾಯೀ ೪೬

ನೀವು ಕೋಪಿಸಬ್ಯಾಡ ಯಾವತ್ತಿ ಬಂಧುವಿಗೆ
ಯಿವೇವು ಅರಿಯೆದ ಬೇಡವಾ
ನಾವೀಗ ಹೇಳುವೆವು ಭಾವಾದಿ ಕೇಳಿರಿ
ಭುವನಕ್ಕೆ ಪ್ರಖ್ಯಾತನಾದಾ ೪೭

ಪರವುಪಕಾರಕ್ಕೆ ಯಿರದೆ ಶೇರಿರೆವ
ಕೊಟ್ಟು ಸತ್ಯಲೋಕದಲೀ
ಪರಿಪರಿ ವುಡುಗರೆ ಯರಿಸಿ ಕೊಟ್ಟರು
ಸರಸಾದಿ ಸಂತೈಸಿ ಕಳಿಹಿ ೪೮

ಲೆಕ್ಕವಿಲ್ಲದೆ ಕೋಣಾ ಯಿಕ್ಕಿದರು ಕುರಿಗಳಾ
ಫಕ್ಕಾನೈಕೊಂಡು ಕೆರೆಗ್ಹೋಗಿ
ಚಕ್ಕಚಕ್ಕನೆ ಕಡಿದು ದಿಕ್ಕೂದಿಕ್ಕಿನೊಳೆಲ್ಲಾ
ವಕ್ಕಲಿಕ್ಕಿದರು ಆಹುತಿಯಾ ೪೯

ಊರು ಜನರೆಲ್ಲಾರು ಭೋರಾನೆ ಬಂದಾಗ
ಮೀರಿದಾ ಹುತಿಗಾಳ ಕೊಟ್ಟೂ
ವೀರ ಕನ್ನೀರಾಗೆ ನರೆಹಂಣು ಕಾಯ್ಗಳಾ
ವೂರೆಲ್ಲ ಕೊಡಿಸೀದರಾಗಾ ೫೦

ತಾಯ ಕನ್ನೀರಾಂಬ ಮಾಯಾದಿ ಹೊರಹೊಂಟು
ಆಯಾತವಾಗಿ ನೋಡಿದಳೂ
ಕಾಣಾದೆ ವಾಲ್ಮೀಕಿ - ಮಾಯೆ ಮಾಡಿದರೆಂದು
ತಾಯ ಗಂಗಾಂಬೆಗೇ ಹೇಳಿದಳೂ ೫೧

ಅಂದು ವಾಲ್ಮೀಕಾಗೆ ಚಂದಾದ ಭಾಷೇಯ
ಬಂಧೀಸಿ ಕೊಟ್ಟಹೇ ನಿಂದು
ಯಂದೀಗ ದಾರೀಯೆ ಯೆಂದೀಗು ಕೊಡಲಾರೇ
ಹಿಂದಕ್ಕೆ ಹೋಗು ಗಂಗಾಂಬೇ ೫೨

ಹೇಳಿದ ಮಾತನೂ ಕೇಳೀ ಗಂಗಾಂಬೆಯೂ
ತಾಳಿಹರು ಹದಿಬ್ಯಾಗ ಸರಿಯೇ
ಯೋಳೂರು ದೈವವೂ ಬಾಳೀರಿ ಭಯೆವಿಲ್ಲೆಂದು
ಹೇಳೆ ಕನ್ನೀರಾಂಬೆ ಮಯೆದಲೀ ೫೩

ವರದು ಹೇಳಿದ ವಚನ ಬೆರಗಾಗಿ ಕೇಳುತ
ಪರಿಪರಿಯಂದ ಕೊಂಡಾಡಿ
ಸರಸಾದಿ ನಾನಾ ವಾದ್ಯಗಳೆಲ್ಲ ಬಾರಿಸುತ
ಯಿರದೆ ಮಾಡಿದರೂ ಆರುತಿಯಾ ೫೪

## ಶ್ರೀ ಗ್ರಾಮದವರು ದೈವದರು ಮಂಗಳಾರತಿ

ಜಯೆ ಮಂಗಳಂ ಮಹಾ ಶುಭಮಂಗಳಂ ಜಯೆ ಜಗನ್ಮಾಯೆಳಿಗೆ
ಜಯೆ ಜಗನ್ಮಾತೆಗೆ ಜಯೆ ಜಯೆತು ಕನ್ನೆ ಕಾವೇರಾಂಬಗೇ ಜಯೆ ಮಂಗಳಂ

ಭೂಮಿಯೊಳು ಭೂಸುರರ ಗರ್ಭದಿಂ ಜೆನಿಸುತ್ತ
ಕಾಮಿತಾರ್ಥವ ಪಡೆದ ಕನ್ನೇರಿಗೇ

ಪ್ರೇಮದಂತೆಂಬುವಾ ಸುಗಣಾತ್ಯವನು ಯಿತ್ತು
ಕಾಮಿನೀ ರಕ್ಷಿಸೇ ನಿಜ ಭಕ್ತರಾ ೫೫

ಜಕ್ಕಚಟುಲತೆ ಕೂಡಿ ಅಕ್ಕಾರದಿಂ ನೋಡಿ
ಘಕ್ಕಾನೆ ವೀರಮ್ಮ ಬಾಕಿ ಯೆಂದೂ
ಕ್ರಮದಿಂದ ಕರಿಯೆಲೂ ಕಾಂತೆ ಕನ್ನಿಕೆ ಮಣಿಯು
ಅಕ್ಕಯ್ಯ ಬಂದುತಾ ನಿಂತಳಾಗಾ ಜಯ ೫೬

ಚನ್ನಾರ ಚಲುವ ಕೇಳಂಣ ಮುದ್ದನು ಬ್ಯಾಗು
ಯನ್ನು ತಾಟೀತ ನಿಮ್ಮಿತವೆವಗೆಲಿದು
ಉನ್ನಾತದಿಂದಿರಲೂ ನಿನ್ನ ನರಬಲಿಯೆನ್ನ
ಕನ್ನೆ ಕೇಳುವ ಕಾಮೀನಿಗೆ ಜಯೆ ೫೭

ಯೋಳು ವರಷದಿ ಕೇಳಿ ಆ ವಚನಗಳಾ
ಆಲೋಚನೆಯೆ ಮಾಡದಂಥ ತಾಯೇ
ಮೇಲಾದ ಕಾರ್ಯಕ್ಕೆ ಮಿಕ್ಕ ಮಾತ್ಯೇಕೆಂದು
ಲೋಲಾಕ್ಷಿ ವೀರಮ್ಮ ವಪ್ಪಿದಳೂ ಜಯ ೫೮

ವಪ್ಪೀದ ಕೂಸಿನ್ನೂ ವರಸಂಭ್ರಮದಿಂದಾ
ತಪರೇ ಧರಣೀಯೆ ಜನರು ನೋಡೀ
ಕಪ್ಪುಗೊರಳನಕಾಂತೆ ಕನ್ನಿಕಾ ಮಣಿಯೆಂದು
ವಪ್ಪಿಯಟ್ಟರು ವೀರ ತಪತದ ಗ್ರಹದಲೀ ೫೯

ಯಿಷ್ಟ ಮ್ಯಾಲೇ ಬ್ಯಾಗ ಅಷ್ಟಗುಣಗಳು ಮೆಟ್ಟಿ
ಸೃಷ್ಟಿಯೊಳಧಿಕವೆಂದೆನುತಾಲೀ
ಕೊಟ್ಟ ಸರವುಗಳೆಲ್ಲ ತ್ರಿಂಹತೆಯಾಗದೆಯೇಗ
ಘಟ್ಯಾಗಿ ನಡಿಸೂವು ವೀರಾಂಬಗೇ ೬೦

ಕಾಣರೇ ವಾಲ್ಮೀಕ ಕೆರೆಯೆ ಮ್ಯಾಲಿರುತಿರಲು
ವೇಣಾಕ್ಷಿ ಶ್ರೀ ಗಂಗೆ ಪ್ರಾಣದಿಂದಾ
ಜಾಣೆ ತುಂಬಿರಲೂ ಸ್ಯೆರಿಸಲಾರೆ ನಿಂತೆದು
ನೀನುಜಲವನು ಯಿತ್ತೆ ನಿಜವಂತಿಯೋ ೬೧

ಬರುವ ಪರಿಯೆಂಕರಾ ಸ್ಥಿರವಾಗಿ ಯಿಲ್ಲಿರುವೆ
ಕರದು ಬಾರಲು ಮತ್ತೆ ಗ್ರಾಮದವರಾ
ಪರಿಪರಿಯೆ ವಚನಗಳಾ ವದು ಹೇಳ ಬ್ಯಾಗಾ
ಸರಸನಿಂತಿಹ ಸರೋಜಾಕ್ಷಿಗೇ ೬೨

ಧಣಾಯ್ಕನ ಕೆರೆಯೊಳಗೆ ಧಂಢಣಿಶಿ ಭೇರಿಯೆನೂ
ತಾಸು ಹೊಡೆಸುತ ಬೇಗ ವಾಸಗೈದು
ಜಾಣೆ ಬಗೆಳಾಂಬಿನಾ ಚಂದದಿಂದ ಸ್ಮರಿಸುತ್ತ
ನೀನು ಪೂಜೆಗೊಂಬ ನಿಜವಂತಿಯೋ ಜಯಮಂಗಳ ಮಹಶುಭಮಂಗಳಂ ೬೩

## ಶ್ರೀ ಅಚ್ಚುತ ಕ್ರಿಷ್ಟರಾಯೆರ ಪದ

**(ಫಾಲಸಯೆನ ಗೌರೀಲೋಲ ಪಾಲಿಸೊಯೆನ್ನ)**

ಹೇ ರಾಜಾ ಹೋಗಿ ಬರುವೆ ವೀಗಾ ನಂಟಾರವ ಸಾಗಿ ಹೋಗಿವೆ ಬ್ಯಾಗಾ
ಶೀಮೆ ಭೂಮಿಯು ನಂದು ಗ್ರಾಮದಿ ಸ್ವಾಮಿ ಮುದ್ದನೇ ಅಂದೂ
ಪ್ರೇಮದಿ ನೇಮದ ಶರಣೆಂದು ೬೪

ಹನ್ನೆರಡುವರ್ಷ ನಾವೀಗ ಮುನ್ನಸಂಚರಿಸುವೆವು
ನಿನ್ನದಯೆದಿ ಚೆನ್ನಾಗಿ ಬರುತಿಹೆವು ೬೫

ನಾವು ಬರುವ ವರಿಗು ನೀವಿದನು ಭಾವಾದಿ ಸಲಹಬೇಕು
ದೇವನಂದದಿಯಾವೊತ್ತು ನಿಮ್ಮದಯ್ಯಾ ೬೬

ಯೆಲ್ಲಾವನೊಪ್ಪೀಸಿ ಬಲ್ಲೀದ ರಾಜಾರು
ನಿಲ್ಲಾದೆ ಹೇಳಿ ಹೊರಟಾರು
ಸೊಲ್ಲು ಸೊಲ್ಲಿಗೆ ಸ್ವಾಮಿ ಪಲ್ಲವನ ಮಾಡುತ್ತ
ಮೆಲ್ಲಾನೆ ಹೊರಟೋದ ರಾಗಾ ೬೮

ಅವರತ್ತ ಹೋಗಾಲು ಯವರಿತ್ತಲಿರುತಿರೇ
ಸುವಿಲಾಸದಿಂದ ಪಾಲಿಸುತಾ
ತವೆಸುಗ್ನಾನದಿ ತಿಳಿದು ಭುವನಾವ ನೋಡೂಕ
ಭವನಾದಿ ಯೋಚೀಸಿ ಮುದ್ದಾ ೬೯

ವರ ತುರುಗವನೇರಿ ಪರಿಪರಿರಾಜ್ಯಾವ
ಯಿರದೆ ಕೇಳದರಿಲ್ಲಾ ನೀರು ಮೊದಲಿಲ್ಲಾವು
ಉರಿಬಿಸಿಲು ಘನವಾಗಿ ಯಿರಲೂ ೭೦

ಯಾವ ಗ್ರಾಮವು ಹೋಗಲೂ ಯಾವ ಹೊತ್ತು ಜನ ಬಂದೂ
ಭಾಮಿಲ್ಲಾ ನೀರಿಲ್ಲಾವೆನಲೂ
ಭಾವಾದಿ ಹೇಳೀದ ಯೀವೇನು ಭುವನಾವು
ಕಾಲುಹನ್ನೆರಡೊರಷ ಕೊಡುವೇ ೭೧

ಹಲಸು ನಿಂಬಿಯು ಕಂಚಿ ಚೆಲುವುಳ್ಳ ತೆಂಗುಗಳೂ
ಫಲವಾಗುವ ಮಾವಿನ ಮರಗಳೂ
ವಲಬುದ್ದಪ್ಪಿಯೆ ನೀವು ಫಲವಾಳ ಮಾಡೆಂದು
ಸುಲಭಾದಿ ಸರ್ವರಿಗೆ ತಿಳಿಸೇ ೭೧

ಯೆಲ್ಲಾ ಗ್ರಾಮದ ಜನರೂ ಸೊಲ್ಲುಗಳಾ ಕೇಳಿದರೂ
ಉಲ್ಲಾಸದಿಂದೂ ಕೊಂಡಾಡೆ
ಬಲ್ಲೀದ ರಾಜರಿಗೆ ಬಲ್ಲಾ ಧೊರೆಗಳು ನೀವು
ಸಲ್ಲುವದು ನಿಮಗೆ ಧಣಿತನವೂ ೭೨

ನಿಮಗೆ ಬೇಕಾದಷ್ಟು ಭೂಮಿಗಳ ಬರಕಂಡು
ಸಮತಾದಿ ಬಾರೆಂದು ಹೋದಾ
ತಮತಮಗೆ ಬೇಕಾದ ಭೂಮಿಗಳ ಬರಕೊಂಡು
ಜಮೆಯಾಗಿ ವೈದು ಮುಂದಿಡಲೂ ೭೪

ಕ್ರಮವಾಗಿ ಮೊಹರು ಸಮವಾಗಿ ದಕ್ಕಿತ್ತು
ಮಮತಾದಿ ಮಾಡೀಸಿ ಕಳುಹೇ
ಕಮತಮಗನು ಕೂಲದಿ ಶ್ರಮೆಯಲ್ಲದೆ ದೊರಕಿದವು
ಮನಗೆ ಭಯೆವಿಲ್ಲೆಂದೊಗಳಿದರೂ ೭೫

ಧೊರೆ ಮುದ್ದ ರಾಜಾರು ವರದ ವಚನಗಳಂತೆ
ಯಿರದೆಲ್ಲಾ ಭಾವಿಗಳ ತೋಡೀ
ನೆರವಿದರು ತೋಪು ಜಝ್ಝುರಿತವಾಗಿರುವಂತೆ
ಸರಸಾದಿ ನಾನಾ ದಿನಸುಗಳನೂ ೭೬

ಯಾವ ಗ್ರಾಮವು ನೋಡೇ ಭಾವಿಗಳು ಮಯೆವಾಗೀ
ಯಾವ ಗ್ರಾಮದಿ ಫಲವೃಕ್ಷಾ
ಯಾವತ್ತು ರಾಜ್ಯಾವು ಅವರ ಗ್ರಾಮಗಳೆಲ್ಲಾ
ತವೆ ಮರೆದವು ನಾನಾ ಫಲವೂ ೭೭

ಗಡಿಯಾ ಮ್ಯಾಲಿನ ನೀರು ಹಿಡಿಯೆಲಾರೆವು ಯೆಂದೂ
ಗಡ ಬಡಿಸಿದರು ಜನರೆಲ್ಲಾ
ಮಿಡಿತಾಲಿ ಬ್ಯಾಡೀರಿ ದಿಡಿಗಿ ನಿಂದಲಿ ನೀರು
ತಡಿಯಾದೆ ತರುವೆ ನೆಂಬುವನೂ ೨೮

ಅರ್ಧಭೂಮಿಯು ಕಾಲು ಅರ್ಧಭೂಮಿಯು ಶುಬ್ಬಾ
ಬಿದ್ದಂತೆ ತಂದು ಕೊಡುವಾರು
ಯಿದ್ದು ವಾತಿಕರು ವೃದ್ಧ ಬಾಲರನೆಲ್ಲಾ
ಉದ್ಧಾರಮಾಡಿ ಸಲುಹುವವನೂ ೭೯

ಬಂದ ದುಃಖವನೆಲ್ಲಾ ಕಂಡುವರ ನೆರಕರೆಸಿ
ಚಂದದಿ ಸಂಬಳವ ಕೊಡುವಾನು
ಹೊಂದದ ಬೊಕ್ಕಸದ ವಂದು ಹಣಮುಟ್ಟಾದೇ
ಕುಂದಾದೆ ಯಿರುವಾನು ರಾಜಾ ೮೦

ತಾನು ಹೀಗಿರಲಾಗಿ ಹೀನ ಮಾನವರೆಲ್ಲಾ
ಯೇನು ಕೆಡಿಸುವನು ಯೆಂಬುತಲೇ
ಹಾನಿಮಾತುಗಳಿಂದ ಘನವಾಗಿ ನಿಂದ್ಯಗಳ
ಮನಕೆ ಬಂದಂತೆ ಆಡುವರೂ ೮೧

ಯೆಲ್ಲಾರು ವಂದಾಗಿ ಬಲ್ಲೀದ ಮುದ್ದಾನ
ಶೊಲ್ಲೀಗೆ ಶೇರದಿರುವಾರು
ಮೆಲ್ಲಾನೆ ಮುದ್ದಾನು ಯೆಲ್ಲಭಾವಗಳಂನು
ಸೊಲ್ಲ ಕೇಳ್ತಿಳಿವುತ್ತಲಿಹನೂ ೮೨

ನರಮಾನವರುಯಿವರು ಪರಮಪಾಪಿಷ್ಟರೂ
ನರಿನಾಯಗಳೆಂದು ಕೊಂಬಂವರೂ
ವರಧರ್ಮಬಿಡದಂತೆ ಸರತೀ ಮಾತೇನೆಂದು
ಸರಿಯಾಗಿ ಆಳುವನು ಮುದ್ದಾ ೮೩

ಘನತರದಿ ರಾಜನೂ ವಿನಯಾದಿ ಯಿರುತಾಲಿ
ನೆನದು ಮತ್ತೊಂದು ಕಾರ್ಯವನೂ
ವನಗಳಾದವುಯಿನ್ನು ಜನವುಪಕಾರಕ್ಕೆ
ಜನ ವೆಲ್ತೆ ಕಟ್ಟಿಸಿದಾ ಕೆರೆಯೂ ೮೪

ನೀರುಗಳಿಲ್ಲಾದೆ ಬಂದಾಗಿ ಯಿರುತಿಹುದು
ನೀರು ಬರುವಾ ತೆರನ ನೆನದೂ
ಭೋರಾನೆ ಹೊರಟಾಗ ಸಾರಿ ಬಂದನು ಮುದ್ದಾ
ಧೊರೆಗಾಳು ಕಟ್ಟಿಸಿದ ಕೆರೆಗಾಗಿ ೮೫

ನಿಂತು ನೋಡದೆ ಮುದ್ದ ಕುಂತು ನೋಡಿದನಾಗ
ಯೆಂತು ಯೋಚನೆ ಮಾಡಲೆಂದಾ
ಕಂತುಹರನೆ ಯದಕ್ಕೇನು ಮಾಡಲಿಯೆಂದೂ
ಮುಂಕಾಗಿ ಸುತ್ತಿಟ್ಟು ನೋಡೀ ೮೬

ಗರಗರಾ ತಿರುಗೀದ ಪರಿಪರಿಯಂದಾಲಿ
ಕೆರೆಯೆ ಮುಂದಿರುವ ಗುಡ್ಡಗಳಾ
ಗಿರಿಗುಡ್ಡ ವೊಡ್ಡಲೊಳು ವರದೊರದು ನೋಡೂತ
ಸರಸಾದಿ ತನ್ನ ಕೆರೆಗಾಗಿ ೮೭

ಯೆನ್ನ ಕೆರೆಯಾ ನೀರು ಯನ್ನುರಾಯೆರ ಕೆರೆಗೆ
ಯಿನ್ನು ಕೆಡವು ಬೇಕೆಂದಾ
ಮುನ್ನಾಲಿಯೋಳು ಘನದಿಡುಗಳು ಕಟ್ಟುವನ್ತೆಲಕ
ಸನ್ನುತದಿ ಹೋಗೆ ತಾನಾಗಿ ೮೮

ಸಡಗಾರದಿಂದಾಲಿ ದಿಡುಗುಗಳ ನೋಡುತಾ
ವಡನೆ ಸಂಬಳವತಾ ಕೊಡುತಾ
ಬಿಡದೆಯೆಲ್ಲರ ಕೂಡಿ ಕಡುಹರುಷದಿ ರಾಜಾ
ನುಡಿದಾನು ವಡ್ಡಾರುಗಳಿಗೇ ೮೯

ಭಲೆ ಭಲೆ ವಡ್ಡಾರ ಬಲಿಯಾಗಿ ಕಟ್ಟಿದಿರಿ
ನೆಲದಲ್ಲಿ ನಿಮಗೆ ಸರಿಯಲ್ಲಾ
ನೆಲೆಯಲ್ಲದ ಕಟ್ಟುಗಳ ನಲುವಿಂದ ಕಟ್ಟಿದಿರಿ
ಸಲೆ ಜನರಿಗುಪಕರಾಗಿರಲೀ ೯೦

ಯಿಂತು ವಡ್ಡರ ಹರಶಿ ಸಂತೋಷದಲಿ ರಾಜಾ
ಶಾಂತಿಯಂದುಡು ಗೊರೆಯೆ ಕೊಟ್ಟು
ಯೆಂತು ಹೇಳಲಿ ನಾನು ಕಂತುಹರ ತಾ ಬಲ್ಲಾ
ಮುಂಚೆ ಬಡತನ ಹೋಗುವಂತೆ ೯೧

ಅರಶಿವಡ್ಡರು ಯೆಲ್ಲಾ ಸ್ಮರಿಸಿ ಕೊಂಡಾಡಿದರೂ
ಪರಿಪರಿ ನಾನ ವಿಧವಾಗಿ
ವರಚಂದ್ರ ಸೂರ್ಯರು ಯಿರುವನಕ ದಿಡುಗುಗಳೂ
ಸ್ಥಿರವಾಗಿರಲೆಂದು ಹರಶಿದರೂ ೯೨

ಅನ್ನ ಶಾಂತಿಗಳಿಂದ ಹೊನ್ನು ಶಾಂತಿಗಳಿಂದ
ಯಿನ್ನುಳಿದಾ ಆಹುತಿಯಾ ಶಾಂತಿಯೆಲೀ
ಚನ್ನಾಗಿ ರಾಜಾರು ವುನ್ನತದಿ ಮಾಡಿಸಿದ
ಯಿನ್ನು ನಾ ಕಾಣೆವೆಂಬಂತೆ ೯೩

## ವಡ್ಡರ ಪದ

ಕೊಡು ಕೊಡು ಬ್ಯಾಗಾ ಅಪ್ಪಣೆ ಯೀಗ
ಕುಡು ಕುಡು ಬ್ಯಾಗಾನೇ ಥಡವ್ಯಾಕೆ ನಮುಗಿನ್ನು
ದಿಡಿಗೇಳು ಮುಗಿದವು ವಡಿಯೆರೆ ನೀವೀಗಾ ೯೪

ಯೆರಡೇಳು ವರುಷ ಸರ್ವರು ಬಂದು
ಪರಿಪೂರ್ಣವಾಯ್ತು ಮರತೆವು ನಾವು
ಧೊರೆ ನಾಮದಯೆದೀ

ವರಗೃಹ ಶೀಮೆ ಭೂಮಿಯೆ ಬಿಟ್ಟು ಯಿರುವೇವು
ಜರಿಯೆದೆ ಭರದಿಂದ ಯಿರದ ಮಾಡಿದೆ ವೀಗಾ ೯೫

ಮುಂದೆಲ್ಲಾ ಕೆಲ್ಸಾ ಯಿಂದಿಗೆ ನಾವು
ಚಂದಾದಿ ನಾವು ಮುಗಿಸಿ
ಬಂಧಸೀ ಕಟ್ಟಿ ವಂದಿಸೀ ನಮಿಸೀ
ಬಂದೀಹೆವೆಲ್ಲಾರು ತಂದೆ ಮುದ್ದೈರಾಜಾ
ಕುಂದದೆಲ್ಲರಿಗಿಂನು ಸುಂದರ ವಚನಾ ೯೬

ವಸುಧೆಯೊಳೆಲ್ಲಾ ನಿಮ್ಮಯೆ ಕೀರ್ತಿ
ಪೆಸರಾಯ್ತು ಬಲ್ಲಾ ಭೂಸುರರಿಗೇ
ಆಸೆನಂದಿತೆಲ್ಲಾ ಹಸನಾಗಿ ನಿಮ್ಮಯೆ
ಶಿಶುವಾಗಿ ನಾವಿದ್ದು ನೆಡಾಣಾಯ್ಯೆನ

## ಶ್ರೀ ಮುದ್ದ ರಾಜನ ಪದ

ಹೋಗಬ್ಯಾಡಿರೀ ನೀವು ಹೋಗಬ್ಯಾಡಿರೀ
ಹೋಗ ಬ್ಯಾಡಿರಯ್ಯಾ ನಿಮಗೆ
ಸಾಗಿಸುವೆನು ತೆಲ್ಲವನ್ನು ಸಾಗಿರೆಲ್ಲಾ ಬ್ಯಾಗದಿಂದ
ನೀಗಿ ವ್ಯಸನವಾ ೯೮

ಯೆರಡು ಯೋಳು ವರುಷದಿಂದ
ವರದು ಕೆಲ್ಸವೆಲ್ಲಾ ಮಾಡಿ
ವರುಷವಂದು ಕಳೆದು ನೀವು
ಉರಿಗೆ ಹೋಗಿರಿ ೯೯

ದೊಡ್ಡನ್ಯೆಂತ ಕೆರಿಗೆ ಯೇಗ
ವಡ್ಡರೆಲ್ಲ ಬ್ಯಾಗಹೋಗಿ
ಗುಡ್ಡಬುಡದ ವಡ್ಡರೊಳಗೆ ರೂಡಿತಾಲಿಯಾ ೧೦೦

ಅಚ್ಚುತ ಕ್ರಿಷ್ಣರಾಯೆರ ಕೆರಿಗೆ
……..ದಿಂದ ನೀರು ತಿರಿವಿದೇ
…..ಬಂದ ನೀರುಗಳೆಲ್ಲಾ -ಚಿ ಹೋಗಲೀ ೧೦೧

ನೀರು ಹೋಗಿ ಕೆರಿಯೆ ತೂಬು
ಪೂರ ಭರ್ತಿಮಾಡಬೇಕು
ತೋರಿಸುವೆನು ಕೆಲಸವಿಲ್ಲಾ ಭೋರಾನೆ ಹೊರಡೆಂದಾ ೧೦೨

*ಶ್ರೀ ಮಂಗಳಂ ಶುಭಮಸ್ತು ಶ್ರೀ ಶ್ರೀ ಶ್ರೀ ಶ್ರೀ ಶ್ರೀ*

# ಅಂತು ಸಂಧಿ ೩ಕ್ಕಂ ಪದನು ೩೧ಕ್ಕಂ ಮಂಗಳ ಮಹಾ ಶ್ರೀ

ಪದನೂ ಚನ್ನ ಕನ್ನೇರಾಶವುನ್ನಾತಪಾವಾದ
ಯಿನ್ನು ಏಳುವದು ಅಸಾಧ್ಯ
ಯಿನ್ನದವುರವೇನು ಆನಿಗೊಂದಿಗೆ ಮುದ್ದಾ
ಮುನ್ನಾಲಿಪುದಂಥ ಕಥೆಯಾ ೧

ಶೀಯೆ ಆನೆಗೊಂದಿ ಕ್ಷೇಮದಲ್ಲಿರುವೋದು
ಭೂಮಿಯೊಳದಿಕವಾಹದೂ
ಆ ಮಹಾರಾಜ್ಯದ ಪ್ರೇಮದಲಿ ಆಳುವ
ಸ್ವಾಮಿ ಆಚುಕ ತಕ್ರುಷ್ಟರಾಯಾ ೨

ಯಿರುಕಾಲಿ ರಾಯರೂ ಕೆರೆಯಾನು ಕಟ್ಟಿಸಲೂ
ವರದು ವಡ್ಡರು ಶಾಪ ಕೊಡಲೂ
ಸರಸದಿ ವಡ್ಡರಿಗೆ ನೆರೆ ಕೊಳಗದಿ ಹೊನ್ನು
ಸರಿಯಾಗಿ ಕೊಡುವೆ ನೆಂದಾ ೩

ಭರವಾಸೆವನು ಮಾಡಿ ಯಿರದೆ ಯೆಲ್ಲವ ಹೇಳಿ
ಸರಸಾದಿ ಕಟ್ಟಿಯೆನಲೂ
ಭರದಿಂದ ವಡ್ಡಾರು ಪರಿಪರಿ ಕಷ್ಟಾದಿ
ಧರಿಗೆ ಗುರುತಾಗಿ ಕಟ್ಟಿದರೂ ೪

ಕಟ್ಟಿ ಕೆರೆಯೆನು ಮುಗಿಸಿ ನೆಟ್ಟ ನೊಡ್ಡರು ಹೋಗಿ
ಧಟ್ಟಾನೆ ವಾಜರಿಗೆ ಹೇಳೇ
ಘಟ್ಯಾಗಿ ಕಟ್ಟಿಹೆವು ಯೆಷ್ಟೆಂದು ಹೇಳಾಲಿ
ಶ್ರೀಷ್ಟಿಗಳ ಶೀನೀ ನೋಡು ಕೆರೆಯಾ ೫

ನೋಡೆನಲಾಕ್ಷಣ ಕೂಡಿವಡ್ಡರು ಬಂದೂ
ನೋಡಿದರೆಲ್ಲಾ ಪ್ರಜೆಗಳೂ
ಕೂಡೀದ ವಡ್ಡರಿಗೆ ಯೀಡಿಲ್ಲಾ ವೆನುತಾಲಿ
ಹಾಡಿ ಹರಸಿ ಹೊಗಳಿದರೂ ೬

ಚಂದದಿ ಕಟ್ಟಿದಿವಿ ಅಂದು ಹೊಗಳಿತ ತಾಯೆನ್ನು
ಕುಂದಾದ ಇಡುರಾಜನೆನಲು
ಅಂದಾದಿ ನೇದ್ವಾರು ಯಿಂದು ನೀವು ಬಾಯೆಂದು
ಚಂದಾದಿ ಹೇಳಿದನು ರಾಜ ೭

ಹೇಳಿದಾಕ್ಷಣಯೆಲ್ಲ ಮ್ಯಾಳಾದಿ ವಡ್ಡಾರು
ಸೂಳ್ಳೈಸಿ ರಾಜನಿಂದೋಗಿ

ತಾಳಿದನ್ನಾನು ತಾಳಾದೆ ಕುಡು ನೀನು
ಬಾಳುವಿಗೆ ನಮಗಿಲ್ಲವೆನಲು ೮

ಯೆನಲಾಗ ರಾಜಾರು ಧನದ ಕುಳಗವು ತರಿಸಿ
ವಿನಯಾದಿ ಕೊಳ್ಳೀರಿ ಯೆನಲು
ಯೇನಯ್ಯ ರಾಜಾನೆ ನೀನು ಹೇಳದವನನ್ನು
ಮೌನವಿಲ್ಲದೆ ಬ್ಯಾಗ ಕೊಡಿಸು ೯

ಯಿಷ್ಟು ಹೊನ್ನುಗಳನ್ನು ಸಿಟ್ಟಿನಿಂದಲಿ ರಾಜ
ಯಿಷ್ಟೆ ನಾ ವಚನಗಳು
ಕೊಟ್ಟವಚನಗಳಂತೆ ನೆಟ್ಟಾನೆ ಕೊಡುಯೆಂದು
ಘಟ್ಯಾಗಿ ವಡ್ಡರು ಕೇಳಿದರು ೧೦

ಆಡಿದು ವಚನಗಳಂತೆ ಕೂಡಿನಾ ಕೊಟ್ಟೆನು
ರೂಢಿಯೊಳ್ ತಪ್ಪದಿಲ್ಲೆಂದ
ನೋಡಿಯೇ ಕೊಳಗೆಂದು ನೋಡಿಕೊಂಡಿಗಿದೆವು
ಕೇಡು ಮಾಡಿದೆ ನಮ್ಮಿಗೆಲ್ಲಾ ೧೧

ಭತ್ಯಾಗಳಿಲ್ಲದೆ ಮತ್ತೆ ಕೊಳಗದಿ ಮೇಲು
ನಿತ್ಯಾದಿ ಕುಡುತೇನೆಂದೇಳಿ
ವಿಸ್ತೆರಿಸಿ ನಮಗೆಲ್ಲ ಗೊತ್ತು ಮಾಡಿದೆ ನೀನು
ಸತ್ಯವೆಲ್ಲೋಯ್ತು ರಾಜಾ ೧೨

ಹೇಳಿ ದೊಚನಗಳಂತೆ ಅಳದು ಹೊನ್ನನು ಕೊಡಲು
ತಳದು ಮಾತುಗಳ ನುಡಿವಾರು
ಶಳದು ಯೆಲ್ಲರಯೀಗ ಕೇಳಿ ಆದಿರಿಯೆಂದು
ಘಳಿಲಾನೆ ಘರ್ಜಿಸೆ ರಾಜಾ ೧೩

## ವಡ್ಡರ ಪದ

**(ಕಂಗಳಿದ್ಯಾತಕೋ ಕಾವೇರಿ ರಂಗನ)**

ಯೇನೆ ಮಾಡಿದ್ಯಾ ರಾಜಾ ಯೇನೆ ಮಾಡಿದ್ಯಾ
ಘಾಶೀ ಮಾಡಿ ಯೆಲ್ಲಾ ಜನರ
ಮೋಸದಿಂದ ಕಟ್ಟಸೀದ ಯೀಶ ನೋಡಿ ಕೊಳ್ಳಾಲೆಂದು
ರೋಷದಿಂದ ನುಡಿದಾರೆಲ್ಲ ಮೂನೆ ಮಾಡಿದ್ಯಾ ೧೪

ಬಡವರನ್ನಾವ ನೀನು ನುಡಿದು ಕೆಡಿಸಿದ್ಯಾ
ವಡಿಯೆರೆಂದು ನಂಬೀ ನಾವು

ತಡೆಯೆದೆಲ್ಲಾ ಜನರೂ ಕೂಡಿ ಬಿಡದೆ ಕಟ್ಟಿದಂತಾ ಕೆರೆಯೂ
ಒಡೆದು ಹೋಗಲಯ್ಯಾ ಯೀಗ ೧೫

ಕೆರೆಯು ತುಂಬಾಲಿ ಮೂರುದಿನಕೆ ಹೋಗಾಲಿ
ನೀರು ನಿಲ್ಲಾ ಬ್ಯಾಡಾವೆಂದು
ಸಾರಿ ಸಾರಿ ಶಾಪ ಕೊಟ್ಟು ಸೂರೆಯಾಗಾಲಿವನ ದ್ರವ್ಯ
ಭೋರನೇ ಹಾಳಾಗಲಯ್ಯೆ ೧೬

ಕೆರಿಗೆ ಬಿತ್ತಾಯ ಫಲವು ಭರದಿ ಬೆಳಿಯಾಲು
ಕೇರಿ ಕೇರಿಯೆಲೀ ರಾಜ್ಯದಲ್ಲಿ
ಬರವು ತಪ್ಪಾ ಬ್ಯಾಡವೆಂದು ವಿರಸದಿಂದಾ ಮಣ್ಣು ತೂರಿ
ಕರದ ಬೆರಳಾ ಚಟಕಾ ತಾ ಮುರಿದು ೧೭
ಘನದೀ ತುಂಬಾಲಿ ಮನಕೇ ಹರುಷವಾಗಾಲೀ
ವಿನಯೆದಿಂದಾ ರಾಜಾ ನೋಡಿ
ಕನಸಿನಂತೇ ಬರಿದು ಯಿರಲಿ
ಜನರು ದೋಷಾದಲ್ಲೀ ಹೊರಳೆ ನಿನಗೆ ಬಹಳ ಪಾಪಾ ಬರಲಿ ೧೮

ಯಿಂತು ಶಾಪೀಸಿ ವಡ್ಡರು ಚಿಂತೆಯಿಂದಾಲಿ
ಭ್ರಾಂತು ಗೊಂಡು ಮೂರ್ಖರಂತೇ
ಕಂತುಹರನಾ ಧ್ಯಾನದಲ್ಲಿ ಮಾತೆ ಮಾರ್ಗಹಿಡಿದು ರಾಜನೆ
ಸಂತುನೆ ಪಂತೋಗಾಲಯ್ಯೆ ೧೯

ವಡನೆ ವಡ್ಡಾರು ಸೇರ್ಯಾರು, ಬಿಡದೆ ಶಾಪೀಸಿ
ಘುಡು ಘಡಿಸಿ ನಿನ್ನಾಯೆವೆದಲಿ
ಸುಡು ಸುಡೆಂಬೂತಾಲಿಯೆಲ್ಲ ಬಡಿದು ಮಾರ್ಗಾ
ಹಿಡಿದುಕೊಂಡು ನಡದರಾಗಾ ತಮ್ಮಾ ಪುರಿಗೇ ೨೦

ಅವರತ್ತಾಲೆ ಬಾಗಾಲು ಭುವನಾದಿ ಮಳೆ ಸುರಿದು
ತವಕಾದಿ ತುಂಬಲಾ ಕೆರಿಯು
ಭುವನ ಕಧಿರೆ ಅಚ್ಯುತಾ ಕ್ರಿಷ್ಣಾರಾಯಾರು
ತವಕೆರಿಯಾ ನೋಡಿ ಹಿಗ್ಗಿದರೂ ೨೧

ಮೂರು ದಿನಕೆ ಕೆರಿಯು ಬರಿದಾಗಿ ಹೋಗಲು
ಅರಸುಗಳೂ ವ್ಯಸನಾದೊಳಾಗಾ
ನಾರಿ ಶ್ರಾಪವ ಕೊಟ್ಟವರ ವಡ್ಡರ ಪಾಪಾವು
ಭೋರಾನೆ ಬಂದೀತು ಯೆಂದೂ ೨೨

ಯಿಷ್ಟು ರಾಜ್ಯಗಳನ್ನು ಶ್ರೇಷ್ಠದಿಂದಾಳೆದೆವೂ
ಯೆಷ್ಟಿದ್ದರೇನು ಚೆಲವದೂ

ಥಟ್ಟನೆ ದೋಷಾವ ದೃಷ್ಟಿ ಪಾಪಗಳಂನ್ನು
ನೆಟ್ಟನೆ ಕಳತುಂಬುವವೇರಿ ಮ್ಯಾಗೆ ೧೩

ವಂದು ದಿನ ರಾಜಾರು ಸೆಂದೂ ವಾದೊಳಗಾಗ
ವಂದೀ ವ್ಯಾರೆಂಡೀ ಕರುಗಳಾ
ಯಿಂದು ಯೇನಾದಾರು ಕೊಂದಿ ಪಾಪವು ಬರಲೂ
ಮುಂದೆ ತಳ ತುಂಬವವೇರಿ ಹ್ಯಾಗೆ ೧೪

ಕೇಳಿದಾ ರಾಜರಿಗೇ ಹೇಳಿದರು ಪಂಡಿತರು
ಯೀಳೆ ಹಂನ್ನೆರಡೊರುಷ ಸೆಂಚರಿಸೇ
ತಳದು ಹೋಹೂದು ಪಾದೆ ಘಳಿಲಾನೆ ವಿವರೀಶೀ
ತಿಳಿದು ಹೇಳಿದರು ಪಂಡಿತರೂ ೧೫

ಯಿನ್ನು ರಾಜ್ಯವು ಸುಡಲಿ ಮುನ್ನ ಭೂಮಿಯು ಸುಡಲಿ
ಯೆನ್ನ ಬಾಳುವಿಗೇತಿ ಬಿಡಲಿ
ಯಿನ್ನು ನಾ ಹೋಗುವವು ಮುನ್ನಯೇ ರಾಜ್ಯಾವ
ಚನ್ನಾಗಿ ಪಾಲೀಸುವಯಾ೯ರು ೧೬

ಆದ ಯೇನು ಪೇಳಲಿ ಬೇಕುರಾಜಾ ನಮಗೆಲಾನ
ವದಗೀತು ಸೂರ್ಯೆತೇಜಾ
ಮೌನದಿಂದಲಿ ನಾವು ಶೀಮೆ ಭೂಮಿಯೆ ಬಿಟ್ಟು
ಶೀಮೆ ಭೂಮಿಯೆ ಬಿಟ್ಟು ವರುತೆಯೆರ ಮನೆಯೆನ್ನು ಘನದ್ರವ್ಯಗಳನೀಗಿ ೧೭

ಯದೆನೆಲ್ಲವೆನುಗೇ ಸ್ವಾದೀನವನು ಮಡಿ
ಸದನವನು ಬಿಟ್ಟು ಮುದದಿಂದ
ಹೋಗಲಿಬೇಕು ೧೮

ದೋಷಗಳು ಬರುತವೆಂಬುವದು ನಾವು ತಿಳಿಯೆದಲೆ
ಭಾಷೆಯೆನು ಕೊಟ್ಟು ತಪ್ಪಿದುದರಿಂದಾಲೀ ೧೯

## ಪದ

ಹನ್ನೆರಡು ವರುಷಾವು ಯೀನ್ನುಯೇರಾಜ್ಯಾವ
ಚನ್ನಾಗಿ ಪಾಲಿಸುವ ಧೊರೆಯಾ
ಮುನ್ನಾವ ಕೋಳೀರಿಯನ್ನು ನೆತ್ಯದುಳಗ
ವುನ್ನತದಿ ಆಳುವ ಧೋರೆಯರು ೨೦

ಪರರ ದ್ರವ್ಯಕೆ ಆಶೆಯಿರದರಾಗಲಿಬೇಕು
ಪರಸ್ತ್ರೀಯೆರಿಗೆ ಮನಸಿಡದೆ

ವೆರಶತ್ತವೆಲ್ಲಾಕೆ ವಿರಲಾತರಾಗಿರಬೇಕು
ವರನೆತ್ಯಾದಿಂದಾಳ ಬೇಕು     ೩೧

ಯೀರೀತಿ ಯಿಂದಾಲಿ ದೊರಿಗಾಲು ಯೋಚಿಸೆ
ಯಿರದ ವೋಳಿದನುಜ್ಞ ಬಾಮ್ಮಾ
ವರಮುದ್ದು ರಾಜಾನು ಯಿರುವಾನು ನೆತ್ಯಾದೆ
ಪರಶಿವನಾವರದಿಂದಾಲಿ ಹ್ಯಾನ     ೩೨

ಮೂರು ಗುಣಗಳು ಮೀರಿ ಆರುವರ್ಗವ ತರಿದು
ಶೇರಿಯೆನು ಶರಣಾನೆಂತಲಿ ಯೀ
ವರಧಣಾಯ್ಕನ ತೆರೆಮರದಲ್ಲಿ ಯಿರುವಾನು
ಸರಸದಿಂ ಧರ್ಮಿಷ್ಟನೆನಿಸೀ  ೩೩

ಕರೆದರೆ ಬರುವಾನು ತೀರಗರ್ವಿಯೆಲ್ಲವೂ
ಬರಿಶೀರಿ ವಾಲೇಗಳೆಂದೂ
ಬರದಾರೆ ಬರುವಾನು ವರನೆತ್ಯವಂತಾನು
ಭರದಿಂದ ನಾವು ಹೋಗುವೆವೂ     ೩೪

ಪಟ್ಟದಾ ಆನೇಯಾ ನೆಟ್ಟನೇ ಸಿಂಗರಿಸೀ
ಥಟ್ಟಾನೆ ಮರ್ಬಾಲದಿಂದಾ
ಧಿಟ್ಟ ಅಚ್ಚುತ ಕ್ರಿಷ್ಣರಾಯೆರುಗಳೆಲ್ಲಾರು
ಬಿಟ್ಟೇಯೆ ಹಿಡಿದು ದಳ ಸಹಿತಾ     ೩೫

ಬಂದಾರು ಮುದ್ದಂಣ ನಂದಾದ ಕೆರೆಗಾಗಿ
ಚಂದ ಚಂದದಲೀ ನೋಡಿದರೂ
ಯಿಂದು ಯೀತಗೆ ಸೇರಿಯೆಂಈ ಗುಣವಲ್ಲಾ
ವಂದಿಪೆವು ಯಿಂದು ಪದಗಳಿಗೇ     ೩೬

ವರಸತ್ಯದ ಮುದ್ದಂಣ ನರಮನೆಗೆ ಬ್ಯಾಗದೀ
ಸರಸಾದಿ ಮಾರ್ಬಲಾ ಸಹಿತಾ
ಭರದಿಂದ ಬರಲಾಗ ಬೆರಗಾಗಿ ಮುದ್ದಂಣ
ಪರಮೇಶನಿರದೆ ಸ್ತುತಿಸಿದನೂ     ೩೭

ಬಂದ ರಾಜರ ನೋಡಿ ಸಂದೇಹಗೊಳುತಲೀ
ಬಂದು ಪಾದಕೆ ವಂದಿಸಿದನೂ
ಚಂದ ಚಂದದಿ ಮಾನ ಬಂದವರಿಗೇ ಕೊಟ್ಟು
ನಿಂದುಪಚರಿಶಿದನಾಗಾ     ೩೮

ಬಂದ ಕಾರ್ಯೆಗಳನ್ನು ಅಂದಾದಿ ನೀವೀಗ
ಚಂದಾದಿ ಹೇಳಬೇಕೆಂದೂ
ವಂದೀಸಿ ತಾನಾಗ ನಿಂದು ಕರಗಳ ಮುಗಿಯೆ
ಮುಂದಾಣ ಕಾರ್ಯೆಹೇಳುವೆವೂ ೩೯

ಇನ್ನು ಯೀ ರಾಜ್ಯಕ್ಕೆ ವುನ್ನಾತ ದೊರಿಗಾಳು
ಆನೆಗೊಂದಿಯು ನಮ್ಮ ಸ್ತಲವೂ
ಮುನ್ನ ಅಚ್ಚುನ ಕೃಷ್ಣ ರಾಯೆರೆಂದೆಂಬುವರೂ
ನಿನ್ನ ಕರೆಯೆಲು ಬಂದೆವೈಯ್ಯಾ ೪೦

ಕೆರೆಯೆ ಕಟ್ಟಿಶಿದೇವು ಪರಿಪೂರ್ಣ ತುಂಬುವದೂ
ನೀರು ನಿಂದ್ರದೆ ಹೋಗುತಿಹುದೂ
ಪರಿಯದು ಅಲ್ಲಾದೆ ವರರಾಜ್ಯ ನೋಡುವದೂ
ಪೂರೈಶಿರುವದು ಮನಸಿನಲ್ಲೀ ೪೧

ನಾವು ಹನ್ನೆರಡೊರುಷ ಭಾವಾದಿ ಹೋಗುವೆವೂ
ಈವೇವು ನಿಮಗೆ ಧೊರೆತನವಾ
ನಾವು ಬರುವರೆಗಿಂನು ಯಾವತ್ತು ರಾಜ್ಯಾವ
ಭಾವಾದಿ ಸಲಹಬೇಕಯ್ಯೆ ೪೨

ಯೆಲ್ಲಾ ಹೇಳಲು ಮುದ್ದಾ ತಲ್ಲಾಣಿ ಗೊಳುತಾಲೀ
ಸೊಲ್ಲು ಸೊಲ್ಲಿಗೆ ಶಿವಾಯೆನುತಾ
ಬಲ್ಲೀದ ರಾಜಾರೆ ಸಲ್ಲಾದು ರಾಜ್ಯಾವು
ವಲ್ಲೆ ವಲ್ಲೆಂದು ನುಡಿದಾನು ೪೩

ನಾನು ಮೂಢನು ರಾಜಾ ನಾನು ಮೂರ್ಖನು ತೇಜಾ
ನನಗ್ಯಾಕೆ ರಾಜ್ಯಭಾರಗಳೂ
ನನಗೀರಾಜ್ಯವನಾಳೊ ಯೋಚನೆಯು ತಿಳಿಯೆದೂ
ನನಗ್ಯಾಕೆ ಬಡವಗೆಂದೆನಲೂ ೪೪

ಯೆನಲೂ ರಾಜರು ಕೇಳಿ ವಿನಯಾದಿ ಸಂತೈಸಿ
ಘನಮಾಡಿ ಕೊಂಡಾಡಿದರೂ
ನೀನು ಮಾನ್ಯವನಲ್ಲಾ ಮಾನಾವಧೀಶನೂ
ಘನಸತ್ಯವಂತಾನು ಯೆಂದೂ ೪೫

ಬಗೆ ಬಗೆಯಂದಾಲಿ ಮಿಗಿಲಾದ ನೀತಗಳಾ
ತಗದು ಹೇಳಿದರೆಲ್ಲಾ ವರದೂ
ಸೊಗಸಾಗಿ ನೀವಿದಕೆ ಮಿಗೆ ಪವಲು ಬೇಕೆಂದು
ತ್ಯಗದು ಕೈ ಹೆಗಲ ಮೇಲಿಡಲೂ ೪೬

## ಮುದ್ದಂಣನ ಪದ

**(ಹೇಳಲಾರೆನೋ ಹೇಳದುಳಿಯೆಲರೆನೋ ಎಂಬಂತೆ)**

ವಪ್ಪಲಾರೆನೂ ರಾಜಾ ವಪ್ಪಲಾರೆನೂ ಭೋಜಾ
ವಪ್ಪಲಾರೆ ಕಪ್ಪು ಗೊರಳಾ ತಪ್ಪೆದೆಂಬೆನೂ ೪೭

ವಪ್ಪಲಾರೆ ನೇರ್ಪಧರನೂ ವಪ್ಪಿದಂಥ ಕೆಲ್ಸವಂನು
ತಪ್ಪು ಬಾರದೆಂದು ಮುದ್ದಾವಪ್ಪಿ ಹೇಳಿದಾ ೪೮

ನರರ.... ತಾದೊಳಗೆ ನೆರ್ಪಾಸ್ತಿರವು ಮಾಡೂಯೆಂದು ಹೇಳಿ
ಭರವಸೆಯೊಳು ನೇಪ್ ಹೇಳೇವುರಿಗೆ ಗೈದನೂ ೪೯

ಪರರ ಶೇವೆ ಕಷ್ಟವಯ್ಯೆ ನರರುಗಳು ವಪ್ಪುವದಿಲ್ಲಾ
ವರದು ನಿಂದ್ಯ ಮಾಡೋರಯ್ಯೆ ಜರಿದು ನುಡಿವರೂ ೫೦

## ಅಚ್ಯುತಕ್ರಿಷ್ಣರಾಯೆರ ಪದ

**(ಸತಿಗೆ ಸ್ವಾತಂತ್ರವ ಕೊಡದಿರೋ)**

ಬರುಬೇಕೋ ರಾಜಾ
ಬರಬೇಕು ಪರವುಪಕಾರಕ್ಕೆ
ಸ್ತಿರವಾಗಿ ಹುಟ್ಟೇದನರನಲ್ಲಾ ನೀನೀಗಾ ೫೧

ಅರಮಾನೆ ನಿನ್ನಾದು ವರದ್ರುವ್ಯ ನಿನ್ನಾದು
ಪೆರರಿವರಲ್ಲೆಂದು ಜರಿಯಾದೆ ನೀ ಮುನ್ನಾ
ಬರುಬೇಕು ರಾಜಾ ಬ್ಯಾಗಾ ನೀ ಯೀಗಾ ೫೨

ಹುಟ್ಟರೂದ್ಯಾತಕ್ಕೆ ಶ್ರಿಷ್ಟಿಯೊಳಗೇ ನಾನು
ಶ್ರೇಷ್ಠ ರಾಜಾರು ಬಂದಿಹಿರಿ
ಯಿಷ್ಟದಿಂದಲಿ ನೀವು ಥಟ್ಟನೆ ಬಂದಾರಿಗೆ
ಸುಟ್ಟ ಮಾತುಗಳಾಡಲ್ಯಾಕೆ ೫೪

ಯಿಂದು ನಾ ಬರುವೇನು ಸಂದೇಹ ಬ್ಯಾಡಿರಿ
ತಂದೆ ತಾಯ ಮನೆಯೆಂದು ನಂಬಿ
ಚಂದಾದಿ ಬರುವೇನು ಮುಂದೆಯೇನಾದರ
ಬಂದದ್ದು ಬರಲೆಂದು ಮುದ್ದಾ ೫೫

ಸ್ವಾಮಿ ಧ್ಯಾನವ ಮಾಡಿ ಪ್ರೇಮಾದಿ ಹೊರಟಾನು
ಆಮಹಾರಾಜ ಹಿಂದೇ ಗ್ರಾಮಗಳನು ಬಿಟ್ಟು
ಶೀಮೆಗಳನು ಬಿಟ್ಟು ಸಮತಾದಿ ಹೊರಟಾನು ಮುದ್ದಾ ೫೬

ಬೇಗಸಾಗಿ ಮುದ್ದಣ್ಣ ನಗೆಯಂದ ಹೊರಡಾಲು
ಮಿಗೆ ಹೆಚ್ಚಿ ಕೊಂಡಾಡಿ ರಾಜಾ
ತೆಗೆದು ಅಪ್ಪಿದರು ಅಚ್ಚುತ ಕ್ರುಷ್ಣರಾಯರು
ಬಗೆಬಗೆಯಂದ ಮುದ್ದಾಡೀ ೫೭

ಸಡಗರದಿಂದಾಲಿ ವಡನೆ ಮಾರ್ಬಲವಾನು
ತಡಮಾಡ ಬ್ಯಾಡ ಹೊರಡೆಂದ
ನುಡಿದಾನು ತಾನಾಗ ಮೃಡನೆ ನೀಗತಿಯೆಂದು
ನಡದಾರು ಸರ್ವಾರು ಬ್ಯಾಗ ೫೮

ಮುದ್ದಾನ ಕರಕೊಂಡು ಯೆದ್ದಾರು ರಾಜಾರು
ಬದ್ದಾದಿ ಕಟ್ಟಿಸಿದ ಕೆರೆಯಾ
ಯೆದ್ದು ನೀ ನೋಡೆಂದು ಮುದ್ದಾಗೆ ತೋರಿದರು
ಸುದ್ದಾದಿ ಕೆರೆಯಾ ನಿರ್ಮಿತವಾ ೫೯

ಕೆರೆಯೆ ಯೆಲ್ಲವ ತೋರಿ ಭರದಿಂದ ಹೊರಟಾರು
ಮರಿ ಆನಿಗೊಂದೀಗೆ ಬ್ಯಾಗಾ
ಪರಿಪರಿ ಜನರೀಗೆ ದೊರೆಬಂದನೆಂದ್ಹೇಳಿ
ಕರದೊಯ್ದು ಸಿಂಹಾಸನವೇರಿ ೬೦

ಯೇರೀಸಿ ಸಿಂಹಾಸನವಾ ಸರ್ವರೆಲ್ಲರು ನೋಡಿ
ನಾರಿಯೆರು ಆರತಿಯೆ ಬೇಳಗೇ
ಪರ್ವಕಾಲವು ಯಿಂದು ಧೊರೆಯರುವರೆಂದೇಳಿ
ಸರ್ವರಿಗೆ ತಿಳಿಯಾ ಹೇಳಿದನೂ ೬೧

ತಿಳಿಯೆ ಹೇಳಿದರಾಗ ಘಳಿಲಾನೆಯೆಲ್ಲರಿಗೆ
ಯಿಳೆಯೆನಾಳುವರೆಂದು ಹೊಗಳೇ
ವುಳಿದರೆಲ್ಲವ ತೋರಿ ಬಳದರಮನಿಯಾನು
ಯಿಳೆಯೆನಾಳುವ ಮುದ್ದಕೂಡೇ ೬೨

ಯಿದು ದೊಡ್ಡ ಅರಮನೆಯದು ಸಂಣ ಅರಮನೆ
ಯಿದು ಭೋಜನಸಾಲೆ ನೋಡೆಂದ
ಯಿದು ಬೊಕ್ಕಸದರಮನೆಯದೆ ಘನ ದ್ರವ್ಯವು
ಯಿದೆ ಸಕಲ ಸಾಮ್ರಾಜ್ಯವೆಂದಾ ೬೩

ಒರದು ಯೆಲ್ಲವ ತೋರಿ ಪರಿ ಪರಿಕೀಲಿಗಳಾ
ಸರಗಳ ವಶವ ಮಾಡಿದರೂ

ನೆರೆಶಿ ಬಾದುಂಗರಾ ಕರದು ಬೆರಳಿಗೆ ಯಟ್ಟು
ಸರಸಾದಿ ಹೊರಟಾರು ಆಗ ೭೪

## ಕಾಂಬೋಧಿ

ಭೂಮೀಯೆ ಮಧ್ಯದಲ್ಲಿರುವೋದು ಬಿದರಳ್ಳಿ
ಗ್ರಾಮಾದಿ ಬ್ರಾಹ್ಮಣಾರಿಹರೂ
ಬ್ರಾಹ್ಮಣಾ ಜಕ್ಕಾಚಾರ್ಯಾರು ತಾವು ಯಿರಲಾಗಿ
ಪ್ರೇಮಾದ ಸತಿಯೂ ಜಯೆಲಕ್ಷ್ಮಿ ೮

ಅರಸಿ ಜಯೆಲಕ್ಷ್ಮೀಗೆ ಪುರುಷಾನು ಜಕ್ಕಪ್ಪ
ಹರುಷದಿ ವಬ್ಬಮಗಳಾಗೀ
ಪರ ಉಪಕಾರಿಯಾಗಿರುವಾಳು ಭುವನಾದಿ
ಸರಸಾದಿ ಶಿವನಾ ವರದಿಂದಾಲೀ ೯

ಭರದಿಂದ ಜನಿಸಿಹಳು ವರಪುತ್ರಿಯಾಗಿ ಹಳೂ
ವರದೊರದೂ ಕರುಣಾ ತೋರುವಳೂ
ಯಿರುತೀರೆ ಸರ್ವಾರು ವರಸಂತೋಷದೋಳಾಗ
ನೊರೆವೇನು ಮುಂದಾಣ ಕಥೆಯಾ ೧೦

ಜಕ್ಕಪ್ಪಾಚಾರ್ಯೆರೂ ವಕ್ಕಲ ತನದಲೀ
ಮಿಕ್ಕೀದ ಭಟರಿಹ್ಯರೂ ಪಲ್ಲಾ

ಚಿಕ್ಕಂದಾದಿಂದಾಲಿ ಚಿಕ್ಕ ಹುಡುಗರಿಗೆಲ್ಲ
ಸಕ್ಕರೆಯೆನ್ನು ಕೊಡುತಿಹರು
ಮಕ್ಕಾಳ ಕಂಡರೆ ತೆಕ್ಕಿಲಿ ಪಿಡಿಕೊಂಡು
ಗಕ್ಕನೆ ಹೋಗುವರು ೧

ಕಂದನ್ನ ಕಂಡರೆ ತಂದು ಕೊಡುವರು ಹಾಲು
ಮುಂದೆ ಕೂಡ್ರಿಸಿ ಕೊಂಬುವರು
ಛಂದದಿ ಮಾತಾಡಿ ಮನ್ನಿಸಿ ಕಳುಹೋರು
ಕುಂದದೆ ಇರುತಿಗರು ೨

ಒಂದು ದಿನಾವು ತನ್ನ ಮಂದಿರ ದೊಳಿರೆ
ಬಂದನನಂದದಿಂದಾ

ತಂದೇ ಅನ್ನಾವ ಕೊಡು ಯೆಂದೆನುತಾಗಲಿ
ಬಂದು ಕುಳಿತನಾಗಲು ೩

ಕಂದ ಬಾರಯ್ಯೆ ನೀನ್ಯಾರೆಂದು ಕೇಳಲು
ಬಂದಳು ಮಾತೆ ಆಗಾ
ಬಡವಿಯೆ ಮಗವಿನ ಒಡಲಿಗನ್ನಗೊಳಿಲ್ಲ
ಒಡೆಯೆರೆ ಬಂದೆವೆಂದು ೪

ಬಂದ ವ್ಯಾಳ್ಯಾವು ಬಹಳ ಅಂದವಾಗಿದೆ ತಾಯಿ
ಚಂದದಿ ಹೊಂದಿರಮ್ಮ
ಅಂದಿನ ದಿನದೊಳು ಹೊಂದಿಕೊಂಡಿರಿ ಯೆಂದು
ಮುಂದಾಗಿ ಹೇಳಿದರು ೫

ನಿನ್ನ ಹೆಸು ಹೇಳು ನನ್ನ ಮನೆಯೊಳಿರು
ಭಿನ್ನ ವಿಲ್ಲೈ ನಮಗೆ
ನನ್ನ ಹೆಸರು ಮುದ್ದಯೆಂದೆಂಬುವರು ಮುತ್ತಾತ
ನಿನ್ನೂರಲ್ಲಿರುವೆವು ೬

ನನ್ನೂರು ಮಲೆ ಸೀಮೆ ನಾವು ಕಬ್ಬಿಲಗಾರು
ನನ್ನ ಗಂಗಮ್ಮ ಯೆಂಬುವರು
ಸನ್ನುತದಿಂದಲಿ ಪನ್ನಂಗ ಗತಿಯೆಂದು
ಖಿನ್ನವಿಲ್ಲದೆ ಬಂದೆವೂ ೭

ಯಿದ್ದುಕೊಂಡಿರು ಮುದ್ದ ಶುದ್ಧನಾಗಿಯೆ ನೀನು
ಶಬ್ದತಾರದೆ ಮನಿಯೊಳು
ಶಬ್ದನು ತರುವರನು ಲುಬ್ದ ಮನುಷ್ಯನು
ಶುದ್ಧಯರುವೆವು ನಾವು ೮

ತಂದೆಯಿಲ್ಲದ ಮಗನು ಬಂದನು ನಿಮ್ಮಲ್ಲಿ
ಚಂದದಿಸಲಹೊ ತಂದೆ
ಬಂದು ನಿನ್ನುದರದಿ ಕುಂದದಿಬ್ಬರು ಯಿರುವೆವು
ಮುಂದೆ ನೀಗತಿ ಹೊಂದಿಸಯ್ಯ ೯

ನಿತ್ಯದಿಂದಲಿ ನಾನು ಭತ್ಯಗಳನ್ನು ಕೊಡುವೆ
ಸತ್ಯದಿಯಿರು ಹೋಗಿರಿ
ಮುತ್ಯ ನಮ್ಮಿಬ್ಬರಿಗೆ ತಕ್ಕಂಥ ಕೆಲಸವ ಒತ್ತೀ
ನೀಹೇಳಬೇಕೊ ೧೦

## ಪದ (ತರುಮರಿಗಳನು ನೀತಿರುವ ಹೋಗಯ್ಯೆ)

*(ಅಟ್ಟತಾಳ) ವಿಹಿತವಾಯ್ತೆ*

ತರುಳ ನೀನು ತಹರುಗಳ ನೂತಿರುವು ಹೋಗಯ್ಯೆ
ಮರುಳುತನದಿ ದುರುಳ ಹುಡುಗರ
ಸರಸ ಬ್ಯಾಡಯ್ಯಾ ಕರುಗಾಳ ಮರಿಯೆ ಬ್ಯಾಡಯ್ಯಾ ನೀನೂ
ಯಿರದೆ ತಿರುಗೈಯ್ಯಾ ೧೧

ಕಲ್ಲುತೆಗ್ಗುತೆವರಿನಲ್ಲಿ ಮೆಲ್ಲಗೆ ಮೇಸಯ್ಕೆ
ಕ್ಷುಲ್ಲ ಹುಡುಗರ ಕೂಡ ನೀನು ಸಲ್ಲಾದವನೇಯ್ಯಾ
ನೀನು ಬಲ್ಲಿದವನಯ್ಯಾ
ಬಲ್ಲಾಬುದ್ಧಿ ನೋಡಯ್ಯಾ ೧೨

ತಂದೆ ನೀನು ಎನ್ನ ಹೆತ್ತ ತಾಯೇ ನೀನಯ್ಯಾ
ಬಂಧು ಬಳಗವೆಂದು ನಾನು
ನಂಬಿದೆನಯ್ಯಾ ಸಲಹೊ ಮತ್ತಯ್ಯಾ
ನಂಬಿದೆ ಬಿಡಲಿ ಬ್ಯಾಡಯ್ಯಾ ೧೩

ಕರುಣದಿಂದ ಕರದು ಕೈಯಾವಿಡಿದು ಮುದ್ದಿಸೀ
ಪರಿಪರಿ ಪ್ರೀತಿಯಾ ಮಾಡೀ
ಭರದಿ ವೂಟವಾ ಯಿರದೆ ಮಾಡಿಸಿ
ತರುಗಳ ಮೋಹಿಸೀ ೧೪

ವಲ್ಲಿ ಕಂಬಳಿ ಮುಂಡಾಸವನುಯೆಲ್ಲವ ತಂದನೂ
ಚಲ್ಲಾಣಗಳು ಸಲ್ಲವೆಂದೂ
ಶೀರೆಕಣಗಳಾ
ಮೆಲ್ಲನ ಬಂದವಾಸೊಲ್ಲು ನಯೆನವಾ ೧೫

ತಾತ ಕೇಳೂ ತರುಳ ನಾನು ಮಾತ ಕೇಳೈಯ್ಯಾ
ಪ್ರೀತಿಯಿಂದ ನಮ್ಮ ಸಲಹೆ
ಶಾತವಿರವೈಯ್ಯಾ ಧಾತ ನೋಡ್ಯೆಯ್ಯಾ
ತೊತ್ತು ನಾವಯ್ಯಾ ೧೬

ಕರುಳ ಮಗನೂ ಮರುಳು ನಾನೂ ಕರುಣವಿರಲೆಯ್ಯಾ
ಶರಧಿಯೆಂತೆ ಎಮ್ಮ ನೊರೆದು
ವುರುಗಧರನಾ ಕರಣದಿಂದಾ ಶಿರದ ಮ್ಯಾಲೆ
ಕರಣವಿಟ್ಟು ಮರಿಯೆದಂತತೆ ಯಮ್ಮನೋಡೂ ೧೭

*(ಪದ) ಮೋಹನ*

ಬಾರೆ ನೀ ಗಂಗಾಂಬೆ ಸಾರಿ ಮನಿಯೊಳಿನ್ನು
ಸೇರಿ ನೀ ಕೆಲಸಗಳ ಪೂ
ರೈಸಿ ಮಾಡಮ್ಮ ಸಾರಿ ಹೇಳುವೆ ಯಿನ್ನು
ಮುರಾರಿ ಕರಪೆಯಿಂದಲಿ ೧೮

ನಿನ್ನ ಮಗನೂ ಮುದ್ದ ಚನ್ನ ಲಕ್ಷಣವುಳ್ಳ
ಉನ್ನಾತದಿಂದಹನು
ಇನ್ನು ನೀ ಬಂದಂಥ ಉನ್ನತಾ ವ್ಯಾಳ್ಯಾವು
ಚೆನ್ನಾಗಿ ಯಿರು ತೀಹುದು ೧೯

ನರಲೋಕದೊಳಗಿನ್ನು ದೊರೆಯಾಗುವನು ಮುದ್ದ
ಅರಸುತಾನಾಗುವನಮ್ಮ
ಪರಿ ಪರೀ ದ್ರವ್ಯಾವು ದೊರಕೂವದೀತಾಗೆ
ಅರ ಆಯುಷ್ಯವೂ ನೋಡಮ್ಮ ೨೦

ಇಂತು ನೇಮದ ಕೊಟ್ಟು ಸಂತೋಷದಿಂದೀರೆ
ಚಿಂತೆಯಿಲ್ಲಾದೆ ಸರ್ವರೂ
ಕುಂತು ಹರನಾ ಕೃಪೆಯೆಂತಾಗುವದು ಯೆಂದು
ಯೆಂತು ನಾನರಿಯೆ ತಾತಾ ೨೧

ತೆಗ್ಗುಕಮರಿನೊಳು ತಗ್ಗಾದೆ ಮೇಸೂತ
ತೆಗ್ಗಿಗೆ ತಾನು ಬರುಕಿಹನು
ತೆಗ್ಗಿನೊಳಗೆ ದೊಡ್ಡಾ ಗುಂಡೀನ ನೆರಳಿಗೆ
ಮಗ್ಗಲಗುವನು ಮುದ್ದ ೨೨

ದಿನದಿನದಲಿ ಕರುಗಳ ಬಿಟ್ಟು ನೆರಳೀಲಿ
ಘನ ನಿದ್ರೆ ಮಾಡವನೂ
ನಿದ್ರೆಗೈಯ್ಯೆಲೂ ಸ್ವಪ್ನ ಶುದ್ದಾದಿ ಬೀಳ್ವಾವು
ಎದ್ದು ನೋಡಾಲುಯೇನಿಲ್ಲ ೨೩

## ಪದ (ನಾ ಮಾಡಿದ ಕರ್ಮ ಎಂಬಂತೆ)

ಈ ರೀತಿಯೊಳು ಮುದ್ದ
ಯಿರು ತೀರಲೊಂದಿನ
ಮರಾರಿ ಕರುಣಾದಿಂದಾ ಸಾನೀತ ಸರ್ಪಾನು
ಸೂರ್ಯಾರಿಗೆ ಮರೆಮಾಡಲಾಗ ೨೪

ನೆರಳೂ ಮಾಡಿದ ಸರ್ಪಾ ಕರುಣಾದಿ ಕುಳಿತೀರೆ
ವರ ಏಕಾದಶಿಯೇ ಮಂದಿರದಲ್ಲೇನಿಹುದು
ಯೆಂದು ಯೋಚಿಸಿ ಮಲಗಿದಾನು ೧೫

ಮಂದರಕೆ ಮುದ್ದಣ್ಣ ಬಂದಿದ್ದನೆನುತಾಲಿ
ತಂದೆ ಜಕ್ಕನು ಕೇಳಲಾಗಾ
ಯೆಂದು ತಾ ಕೇಳಲು ಮಂದಿರಕೆ ಬರಲಿಲ್ಲ
ಎಂದು ಹೇಳಿದರು ಮಂದಿರದಿ ೧೬

ಯಿನ್ನು ತಾ ಬರಲಿಲ್ಲ ಮುನ್ನಿನಂದದಿಯೆಂದು
ಮನ್ನಿಸಿ ಹೇಳಿವಾರುದಾ
ಅನ್ನಕ್ಕೆ ಬರಲಿಲ್ಲ ಮುನ್ನ ಹಸಿದನುಯೆಂದು
ಸಣ್ಣಕಂದನು ಎಂದು ಹೇಳಿ ೧೭

ಹಶಿದನೂ ಶಿಶುವೆಂದು ಮೊಸರು ಅವಲಕ್ಕಿ
ಯೆವಸದು ಕಟ್ಟಿಸಿ ತಂದನಾಗ
ಕಸಬಿಸಿಗೊಳುತಾಲಿ ಎಸೆದು ಹುಡುಕುತಲಾಗ
ಬಿಸಿಲು ನೆರಳೆನ್ನದಾಗ ೧೮

ಎಲ್ಲಿ ನೋಡಿದರಲ್ಲ ಎಲ್ಲಿ ಆರಸಿದರಿಲ್ಲ
ಎಲ್ಲಿ ಹೋದನು ಕಂದನೆಂದು
ಬಲ್ಲಂತೆ ನೋಡುತಾ ನಿಲ್ಲದೆ ತಿರುಗುತ
ಕಲ್ಲುಗುಮಡುಗಳ್ಹತ್ತಿ ಯಿಳಿದು ೧೯

ತಲ್ಲಣಗೊಂಡು ತಾ ನಿಲ್ಲದೆ ನೋಡಲು
ಕಲ್ಲಿನ ನೆರಳಿನಲ್ಲೀ
ಮೆಲ್ಲನೇ ನೋಡಾಲು ಮಲಗೀರೆ ಸಪಾವು
ಉಲ್ಲಾಸದಿಂದಾಡು ತಿರಲೂ ೨೦

ಕಂಡನು ಸರ್ಪಾನ ಪಂಡಿತ ಜಕ್ಕನು
ದಿಂಡುಗೆಡದು ವುರುಳಿದನು
ಕಂದಾನ ಸರ್ಪಾನು ತಿಂದೀತು ಯೆಂದೆನುತ
ನೊಂದಾನು ತನ್ನ ಮನದೊಳಗೆ ೨೧

ಬಾರಲೋ ಮುಕ್ಕಂಣ ಮೋರೆ ನೋಡುವೆನೆಂದು
ಸಾರಿ ಕರೆದು ಕೂಗಿದಾನು
ಕರದ ಶಬ್ದವ ಕೇಳಿ ಉರುಗನು ಮಾಯೆದಿ
ಹೊರಟು ಹೋಯಿತು ತನ್ನ ಸ್ಥಳಕ್ಕೆ ೨೨

# ಕನ್ನೀರಾಂಬೆಯ ಕಥೆ: (ರಾಗ - ಕೇತಾರ ಗೌಳ ಪದ)

ಏಳು ಮುದ್ದಣ್ಣನೆ ಭಾಳನೇತ್ರನ ವರಪಾ
ತಾಳದಾ ವರಪುತ್ರನೆ
ಮೇಲಾದ ಶರಣನ ಸ್ಥಳಕೆ ಹೊಂದಿದಿ ನೀನು
ಶೂಲಪಾಣಿಯೆ ದಯೆದಿ ೩೩

ಈ ಪರಿಯೆಲೀ ಜಕ್ಕ ಬಳಲೂವ ಧ್ವನಿಗೇಳಿ
ಭೂಪಾಧಿಗ್ಗನೆಯೆದ್ದಾನಾಗಾ
ಯೆದ್ದು ನೋಡಿದನಾಗ ಬುದ್ಧಿಯೆ ತಿಳಕೊಂಡು
ಉದ್ದಾರ ಮಾಡೋತಾತ ೩೪

ತಪ್ಪಾಯ್ತೊ ತಾತಯ್ಯೆ ನಿಪ್ಪಸುವಾಗಿತ್ತು
ಒಪ್ಪಿ ಕೊಳ್ಳಿರಿಯೆನ್ನ ಗುಣವ

ಯಿನ್ನೊಮ್ಮೆ ಯಿಂಥ ದುರ್ಬುದ್ಧಿಯೆ ಮಾಡಿದರೆ
ಭಿನ್ನವಿಲ್ಲದೆ ಕೊಲ್ಲೊ ತಾತಾ ೩೫

ಕೊಲ್ಲೋದು ಬ್ಯಾಡಯ್ಯಾ ಫುಲ್ಯಲೋಚನ ವರವ
ಸಲ್ಲೀಸಿ ಕೊಟ್ಟ ನಿನಗಯ್ಯೆ
ನಿನ್ನ ಕೊಲ್ಲುವದಕ್ಕೆ ನನಗೆಲ್ಲೋತ್ರಾಣವು
ನೀನು ಸತ್ಯದ ಶರಣಾನು ೩೬

ಕೊಟ್ಟು ಹುಟ್ಟದೆ ನೀನು ಕೊಟ್ಟು ಪಡಿದೆಯಾ ಕಂದಾ
ತೊಟ್ಟ ಬಾಣಗಳಿರಲುಂಟೆ
ಥಟ್ಟನೆ ಬಾರಯ್ಯಾ ನೆಟ್ಟಾನೆ ಮನಿಗೋಗಾ
ಬಟ್ಟೀಯೆ ಹಿಡಿಯೆನು ನಾಗಾ ೩೭

ನನ್ನ ಮನೆಯೆ ಕೆಲಸಯಿನ್ನು ಮಾಡಲಿ ಬ್ಯಾಡಾ
ನಿನ್ನ ಕೆಲಸಗಳು ಮಾಡುವೆವೂ
ನಾನೆಷ್ಟರವನೈಯ್ಯಾ ಮಾನ ನಿಧಿಯು ನೀನು
ಹೀನುಗುಣದವರೆನ್ನಬ್ಯಾಡಾ ೩೮

ನಿನ್ನದು ಮನೆಯೆಲ್ಲಾ ನಿನ್ನ ಕರುಮಗಳೆಲ್ಲಾ
ನ್ನ ಬದುಕು ಬಾಳ್ವೆ ತಾತಾ
ನಿಮ್ಮಂಥ ದೊಡ್ಡವರು ನನ್ನಂಥಾ ಮೂಢಗೆ
ನನ್ನಿಯೆಂದೆನುವಾರೆ ಮಾತ್ಯಾ ೩೯

ಪರರಾ ಬದುಕೀಗೆ ಕರುಗಳೂ ಬಿಟ್ಟು ನಿನಗೊಮ್ಮೆ
ಕರದೃಷ್ಟ ಮಾತುಗಳಾ ತಂದೇ
ಪರಮ ಪಾತಕಿ ನಾನು ನರಕೀಯುನಾನೆಂದೂ
ವರಲೀ ಹೇಳಿದನೂ ತಾತಂಗೇ ೪೦

ಕರುಗಳು ಹೋಗಿಲ್ಲಾ ಮರಿಗಳೂ ಹೋಗಿಲ್ಲಾ
ಪರರಿಂದ ಮಾತು ಬಂದಿಲ್ಲಾ
ಶರಣನು ನೀನಯ್ಯಾ ಉರಗನು ಕರುಣಿಸಿ
ಮರಿಮಾಡಿತಯ್ಯಾ ಹೆಡೆಗಳನೂ ೪೧

ನನ್ನಂಥ ಪಾಪಿಗೆ ಉನ್ನಥಾ ಸರ್ಪಾನು
ತನ್ನೆಡೆಗಳ ಮರೆಮಾಡೋರುಂಟೇ
ನನಗನು ಬಾರದೆಂದನುಸರಿಸುವೆ ತಾತ
ನನಗೆ ತಿಳಿಸಯೀತು ಮುತ್ಯಾನೇ ೪೨

ನಿಲಿಸಿ ಮಾತುಗಳನ್ನು ಫಲಹಾರ ಮಾಡೆಂದೂ
ತಲೆದೂಗಿ ಮುದ್ದಾಡಿದನೂ
ವಿನಯಾ ಮಾತುಗಳಿಂದಾ ತನುಜಾನ ಕೈವಿಡಿದೂ
ಮನೆಗೆ ಬಂದನು ಜಕ್ಕಪಯ್ಯಾ ೪೩

ನಗಿ ಮಾತಿನಲಿ ಬಂದು ಹೋಗಿಸೀದ ಭವನಾವ
ಮಿಗಿಲಾಗಿ ಮಂಚಹಾಕಿಸಿದಾ
ಸೊಗಸಾಗಿ ನಾವಿನ್ನು ಪಗಡೀಯೆ ನಾಡೆಂದು
ಮಿಗೆ ಹೇಳಿದನು ಯಿಬ್ಬರೀಗೆ ೪೪

ತಂದೆ ಯಿಷ್ಟಂದ್ಯಾಕೆ ಮುಂದ್ಯಾಗವಡತಿನ್ನೂ
ಮಂದೀರ ನಮ್ಮದೊ ತಾತಾ
ಯಂದಿ ನಂದದಿಕೆಲ್ಸಿ ಯೆಂದೀಗೆ ಬಿಡಲರಿಯೆ
ಸಂದೇಹ ಬ್ಯಾಡೈಯ್ಯಾ ತಾತಾ ೪೫

ಮುನ್ನೀನಂತೆ ತನ್ನ ಕರುಗಾಳ ಕರಕೊಂಡು
ಚನ್ನಾಗಿ ನಡದನಾ ಸ್ಥಳಕೇ
ದಿನಕರದ ನೆರಳೀಲಿ ಅನುವಾಗಿ ಮಲಗಾಲು
ದಿನದಂತೆ ಸರ್ಪಾಬಂದಿರಲೂ ೪೬

ನಾನು ಸರ್ಪನು ನೋಡು ನೀನು ಬೆದರದೆಯಿರೂ
ತಾನಾನವೆಂದು ನೀ ತರುಳಾ
ಮಾನ ನಿಧಿಯೇ ನೀನು ಘನತರದ ಮಹಿಮೆಗಳಾ
ನಾನು ಹೇಳುವೆ ವಿಪ್ರನಾಗೀ ೪೭

ಕೇಳಯ್ಯಾ ಮುದ್ದುಣ ಹೇಳೂವೆ ನಾನೊಂದಾ
ಏಳು ಹೆಡೆಯಾ ಸರ್ಪನೆಂದೂ
ಏಳು ಕೊಪ್ಪರಿಗೆಗಳೂ ದ್ರವ್ಯವಿಲ್ಲಿಹುದೆಂದೂ
ಹೇಳೀದಾಕಪಟಬ್ರಾಹ್ಮಣನೂ ೪೮

ನೀ ಸರ್ಪಾವಾದಾರೆ ನಿನ್ನಾ ವೃತ್ತಾಂತಾವ
ಮೋಸವಿಲ್ಲದೆ ಹೇಳೂತಂದೇ
ಘಾಸಿಯಾಗದೆ ಕೇಳೂ ಮೋಸಾದೆ ಹೇಳುವೆನೂ
ಈಶಮಾಡಿದ ಆಜ್ನೆಗಳನ್ನು ೪೯

## ಕನ್ನೀರಾಂಬೆಯ ಕಥೆ: ಪದ - ಕಲ್ಯಾಣಿ

ಚೋಳರಾಯೆ ದಂಡನೆತ್ತಿ ಪಾಳ್ಯಗಾರರ
ಮ್ಯಾಲೆ ಹೋಗೀ
ಹಾಳು ಮಾಡಿ ಅವರನೆಲ್ಲಾ ಬೀಳಕಡಿದಾನೂ
ಖೂಳಾರ ತರಿದಾನೂ ೫೦

ತಾಳಿ ಕೋಪದಿ ಕಾಳು ಗೆಡಿಸಿ ಸೇಳಗೈದನೂ
ಏಳು ಕೋಪ್ಪರಿಗಿಯೆ ದ್ರ್ಯದ
ಜಾಳ ಮಾಡೀದಾ ಪಾಳ್ಯಕ್ಕೆ ಸಾರಿದಾ
ವ್ಯಾಳ್ಯವಾಯ್ತೆಂದು ಹೊರಡೆಂದಾ ೫೧

ಎಲ್ಲದ್ರವ್ಯವ ಹೇರಿಸಿಕೊಂಡು ಬಲ್ಲಿದ ಚೋಳನೂ
ಘಲ್ಲು ಘಲ್ಲುಯೆನುತ ದಂಡ
ನಿಲ್ಲದೆ ತಂದನೂ ಮೆಲ್ಲನೆ ಬಂದನೂ
ಯಿಲ್ಲಿ ನಿಂತನೂ ೫೨

ಅಸ್ತಮಿಸಿತು ಹೊತ್ತು ಹೋಯ್ತು ಕತ್ತಲಾದೀತೂ
ಸುತ್ತದಂಡ ಬಿಡಿಸಿಕೊಂಡು
ಮತ್ತೆ ಮಧ್ಯದಿ ಉತ್ತಮಧೈರ್ಯದಿ
ವಸ್ತಿಕನಂದದೀ ೫೩

## ಕನ್ನೀರಾಂಬೆಯ ಕಥೆ: ಪದ - ಶ್ರೀರಾಗ

ಯಿತ್ತ ಚೋಳನು ಬಹಳ ಸಂತೋಷದಿಂದಿರಲೂ
ಅತ್ತಲಾಗುವ ಕಥೆ ಕೇಳೋ
ಪರಮ ರಷಿಯು ಒಂದೂ ಎರಳೇಯೆ ಸಾಕಿರಲೂ
ವರಗರ್ಭದಿನಗಳು ತುಂಬಿರಲೂ ೫೪

ಸರುವಾರದೊಳಗಲ್ಲಿ ಹೊರಬಿದ್ದು ಮೇಯ್ತಿರಲೂ
ಭರದಿ ಬ್ಯಾನಿಗಳು ಬಂದಿರಲೂ
ಪರಕಷ್ಟತರವಾಗಿ ಎರಳೇಯೆ ಯಿರುತೀರೆ
ಭರದಿಂದ ಬೇಡ ಬೆಂಟಯ್ಯನೂ ೫೫

ಸರುವಾರ ಗಿರಿಗಳಲೀ ಎರಳೇಯೆ ಹಿಂಡುಗಳಾ
ತಿರುವೀ ಹೊಡಿಯುತ ಬಂದಾನಾಗಾ
ಎರಳೇಯೆ ಹಿಂಡುಗಳೂ ಭರದಿ ಓಡುತ್ತಿರಲೂ
ಹರಯಂದೂ ಬೆದರೀ ಕಲಿತೋಯ್ತು ೫೬

ಯೆಲ್ಲಾಯೆರಳೆಗಾಳು ತಲ್ಲಾಣಗೊಳುತಾಲೀ
ಬಲ್ಲೀದ ಚೋಳಾನಮುಂದೇ
ನಿಲ್ಲಾದೆ ವೋಡೂವಾ ಎರಳೆ ಹಿಂಡಿನೊಳೊಂದಾ
ತಲ್ಲಾನಗೊಳುವ ಎರಳೆಯೆನೂ ೫೭

ಅರ್ಧಪಿಂಡವೂ ಹೊರಗೆ ಅರ್ಧದೇಹ ಒಳಗೇ
ಅರ್ಧಾಪಿಂಡಾಂಡ ಹೀಗಿರಲೂ
ಯಿಂಥಾ ಎರಳೇಯಾಕಂಡೂ ಚಿಂತಿಯಾದಿತು ಮನಕೇ
ಸಂತೋಷದಿಂದಾ ಕರದಾನು ೫೮

ಕರದಾರೆ ಎರಳೇಯು ಧೋರೆಗಳ ಹತ್ತಿರಕೆ
ನೆರೆನನ್ನ ಧಣಿಯೆಂದು ಬರಲೂ
ಕರೆದು ವುಪಚರಿಸುತಾ ಪರಿಪರಿಯೆಲೆ ರಾಜಾ
ಯಿರುತೀರೆ ಜನನವಾಯ್ತಾಗಾ ೫೯

ಪರಮ ಋಷಿಯು ತಾನು ಸಮರಾತ್ರಿಯೊಳಗಿನ್ನು
ಹೊರಳುತ ಹುಡುಕುತಾಯಿರಲು
ಅರಸುವ ಧ್ವನಿಕೇಳಿ ವೀರರಾಜ ಚೋಳನೂ
ಪರಮ ಋಷಿಯೆ ಬಾಯೆಂದನಲೂ ೬೦

ಮಹರಾಜ  ಕೇಳಯ್ಯಾ ಬಹುದಿವಸ ಸಾಕಿರ್ದಾ
ಬಹುಬುದ್ಧಿಯುಳ್ಳಾಯೆರಳೇಯು
ಬಹುಹಿಂಡಾ ಎರಳೇಯಾ ಕೂಡಿತಾ ಹೋಯತೂ
ಗಹನ ವಾಯ್ತೆಯ್ಯಾ ಮನಸೀಗೆ ೬೧

ಮನ ಋಷಿ ಕೇಳಯ್ಯಾ ಕಾನನಕೇ ಹೋದವು ಎರಳೇ
ವಿನಯೆದಿ ಕರಕೊಂಡೇ ನಾನು
ಜನನವಾಯ್ತೆಸ್ವಾಮಿ ಅನುನಯೆದಿ ಉಪಚರಿಸಿ
ಗುಣದಿಂದ ನಾನು ಸಲಹಿದೆನು ೬೨

ಎಲ್ಲಿಹ್ಯದು ಹೇಳಯ್ಯಾ ತಲ್ಲಾಣವಾಗೀದೆ
ಬಲ್ಲೀದ ಎರಳೆಯಾ ಮರಿಯಾ
ಉಲ್ಲಾಸದಿಂದಾಲೀ ಮೆಲ್ಲಾನೆ ರಾಜಾನು
ಅಲ್ಲಿದ್ದಾ ಎರಳೇ ತೋರಿದನೂ ೬೩

ಮುನಿಪ ಎರಳೇಯೆ ನೋಡಿ ಘನ ಹರುಷಾವತಾಳಿ
ಜನಪತಿ ಬೇಡು ಬೇಡೆಂದಾ
ಮಾನ್ಯೆವಾಪತಿ ಕೇಳು ಯೇನಬೇಡಿದ ಡೀವೆ
ನಿನಗೆ ಬೇಕಾದ ಪದವೀಯೆನೂ ೬೪

ಪಾಳ್ಯಗಾರರ ಹೊಡೆದು ಏಳು ಕೊಪ್ಪರಿಕೆಗಳಾ
ಬಾಳದ್ರವ್ಯವನೂ ತಂದೀರುವೆ
ಹೇಳೂವೆ ಕೇಳಯ್ಯೆ ಹಾಳಾದ ದ್ರವ್ಯವೂ
ಹೂಳಿ ಹೋಗಯ್ಯೆ ಭೂಮಿಯೊಳೂ ೬೫

ಯಿದು ನಿನ್ನದಲ್ಲಾವು ಯಿದು ಪರದ್ರವ್ಯಾವು
ಯಿದಕೆ ನೀಮನಗೊಡ ಬೇಡ
ಯಿದಕಾವೆಗೂಡಲು ವದಗಿ ಬರುವದು ಪಾಪಾ
ಸದರಾವಲ್ಲವು ರಾಜಾ ಬೆಡಾ ೬೬

ಯಿದಕೊಬ್ಬ ಅಧಿಪತಿ ಒದಗೀಬರುವನು ಮುಂದೇ
ಸದಮಲಹರನಾ ಅಗ್ನಿಯೆಲೀ
ಯಿದರಂತೆ ಹೇಳಲು ಮುದದೀ ಚೋಳಾನು ದ್ರವ್ಯಾ
ವರಗಿ ಹೂಳಿದನೂ ಭೂಮಿಯೊಳೂ ೬೭

ಈ ಪರಿಯಾಯತು ಭೂಪಕೇಳ್ ಮುದ್ದಣ್ಣ
ಶಾಪವು ಬಂದೊದಗಿತೂ
ನಾಪೂರ್ವ ಜನ್ಮಾದಿ ವಿಪ್ರನು ಕೇಳೈಯ್ಯಾ
ಈ ಪರಿಯಾದ ಕಥೆಕೇಳೂ ೬೮

ಉಸುರವೆ ಕೇಳಯ್ಯಾ ವಸುಧೆಯೋಳ್ ಋಷಿಯಾಗಿ
ಪಶುಪತಿ ಧ್ಯಾನದಲ್ಲಿರಲೂ
ಮಸದಾ ಸೂಜಿಯೆಮೇಲೆ ವಸರುತದೆಯಾ ಸೂರಿ
ಕುಶಲಾದಿ ತಪವಾಮಾಡಿದೆನೂ ೬೯

ರೀ ರೀತಿಯೊಳು ನಾನು ನೂರಾರು ವರ್ಷವು
ಬ್ಯಾರೊಂದು ಮನಸಿಲ್ಲದಂತೆ
ಮರಾರಿ ಧ್ಯಾನದ ಮರಿಯೆದೆ ಮಾಡಿದೆ
ಪರಮೇಶ ನಿಜರೂಪದೋರೆ ೭೦

ನಿನ್ನ ಭಾವಕೆ ಮೆಚ್ಚಿದೆ ಏನ ಬೇಡುವಿಯೆಂದು
ಚೆನ್ನಾಗಿ ಕೇಳಿದರಾಗ
ನನ್ನ ಕೈಲಾಸಕ್ಕೆ ನನ್ನಿಯಂ ಕರೆದೊಯ್ವೆ
ಉನ್ನಂತ ಪದವಿಕೇಳಿದೆನು ೭೧

ಪದವೀಯೆ ಕೊಟ್ಟಾನು ಪದುಳದಲ್ಲಿರುತಿಹೆನೂ
ಪದಯದಿ ಪತ್ರೆ ಪುಷ್ಪಗಳ
ಮೊದಲಾಗಿ ನಾ ತಂದು ಸದಮಲನ ಪೂಜೆಗೆ
ಒದಗಿಕೊಂಡಿರುವೆ ನಾ ಮುದದಿ ೭೨

ಯಿರುತಿರಲೊಂದಿನ ಮರವೆಯೆ ಮದದಿಂದ
ಬೆರದೊಂದು ಹುಸಿಯೆ ಹೇಳಿದೆನು
ಪರಿಯೆಂದು ಹುಸಿಬಂತು ಧರೆಯೊಳು ನೀ ಹೋಗಿ
ಉರಗನಾಗೆಂದ ಪರಮೇಶ ೭೩

ಚೋಳಾನಾ ಏಳು ಕೊಪ್ಪರಿಕಿಗಳಾ ದ್ರವ್ಯದ
ಹೂಳಿಹೋಗಿಹನೂ ಭೂಮಿಯೊಳು
ಮಾಳ್ಕೆಸಿದ್ರವ್ಯವ ಕಾಯ್ದು ಕೊಂಡಿರುವೆಯೆಂದು
ಹೇಳಿದರು ಸತ್ಯವಚನದಲೀ ೭೪

ನನ್ನ ಶಾಪ ವೆಂದೀಗೆ ನಿಶ್ಯಾಪವು ಯೆಂದು
ಬಿನ್ನಹ ಮಾಡಿಕೊಂಡೇ
ನೀನು ಅಲ್ಲಿರುವಗ ಮಾವನಪತಿ ಬಂದು
ಅನುದಿನ ನಿದ್ದೆ ಮಾಡುವನು ೭೫

ನರಯಿವ ನೆನಬೀಡ ದೊರೆಯೆಂದು ನೀ ತಿಳಿದು
ಕರೆಕುಮಟೆ ಕಟಟೀಸುಯೆಂದು
ಪರಿಯೆನೆಲ್ಲವಾನು ವಿಸ್ತರಿಸಿ ಒಪ್ಪಿಸಿ ನೀನು
ಯಿರದೆ ಬಾರಯ್ಯಯೆಂದಿಹರೂ ೭೬

ಯಿಂದಿಗೆನ್ನಯೆ ಶಾಪ ಸಂಗೀತೋ ಮುದ್ದಣ್ಣ
ಬಂದೆ ನೀ ಧಣಿಯಾಗಿ ಈಗ
ಮುಂದೆ ಮಾಡುವ ಕಾರ್ಯೆ ಒಂದಾಗಿ ಹೇಳುವೆ
ಸಂದೇಹವಿಲ್ಲದೆ ಕೇಳೂ ೭೭

ಕೆರೆಕುಂಟೆ ಕಟ್ಟಿಸು ಪರಿಪರಿಯಿಂದಾಗಲಿ
ನರರಿಗೆಲುಪಕಾರಾರ್ಥದಲಿ
ಯಿಮತ ಹೆಚ್ಚಾದ ದ್ರವ್ಯಗಳೆಲ್ಲಿ ನೀನು
ಪರಹಿತವಾಗಿ ಮಾಡಯ್ಯಾ ೭೮

ನಾನು ಅರಿಯೆದ ಮೂರ್ಖ ನಾನು ಅಜ್ಞಾನಿಯು
ನಾನು ಬಹುಶುದ್ಧ ಪಶುವೆಂದ
ನನಗೇನು ತಿಳಿಯೆದೂ ನನಗೇನು ಬಾರದು
ನನ್ನಗೆ ಯಿದನೆಲ್ಲ ಹೇಳೆಂದ ೭೯

ನಾನು ಹೋದಂತೆ ನೀ ಕಲ್ಲುಗಳಿಡುಯೆಂದು
ಮೌನವಿಲ್ಲದೆ ಹೇಳಿದಾಗ
ಯಿದು ಸಣ್ಣ ಕೋಡಿಯು ಯಿದು ಏಳು ಮದಗವು
ಯಿದು ಸಣ್ಣ ತೂಬು ನೋಡಯ್ಯೆ ೮೦

ಯಿದು ದೊಡ್ಡ ತುಂಬಯ್ಯೆ ಯಿದು ಅರದೋಟಯು
ಯಿದು ದೊಡ್ಡಕೋಡಿಯೆಂದೆನಲೂ
ಯಿದರಂತೆ ನೀನೆಲ್ಲ ಸದಮಲನ ಒರದಿಂದ
ಒದಗಿ ಕಟ್ಟಿಸುಯೆಂದನಾಗ ೮೧

ನೀನು ಮಲಗುವವಂಥ ಸ್ಥಳದಲ್ಲಿ ಯಿರುವದು
ಘನಕರದ ದ್ರವ್ಯವುಯೆಂದ
ನಿನಗೆ ತಿಳಿಯೆದಂಥ ಘನತರದ ಕಾರ್ಯೆಕ್ಕೆ
ಕನಸಿಲಿ ಅನುವಾಗಿ ಪೇಳ್ವೆ ೮೨

ಎಲ್ಲಾವನೊಪ್ಪಿಸಿ ಬಲ್ಲಿದ ಸರ್ಪನು
ಮೆಲ್ಲನೆ ಕೇಳಿತು ಆಗ
ಉಲ್ಲಾಸದಿಂದಲಿ ಗಲ್ಲನ ಪಿಡಕೊಂಡು
ಎಲ್ಲ ಕೆಲಸಗಳ ಮಾಡೆಂದ ೮೩

ಧರ್ಮದಿ ಕಟ್ಟಿಸು ಕರ್ಮಮಾಡಲಿ ಬೆಡ
ದುರ್ಮತಿ ಬ್ಯಾಡೆಲೊ ಕಂದ
ಮರ್ಮನ ಮಾಡಿ ಬಡಜನಕೆ ಸಂಬಳ ಕೊಡದೆ
ಸರ್ಮಿಯೆಂದೆನಿಸಿಕೊ ಬ್ಯಾಡ ೮೪

ಉರಗಾನು ಎಲ್ಲವ ವರಬುದ್ದಿಯೆನು ಹೇಳಿ
ಹೊರಟೀತು ಕೈಲಾಸಪುರಿಗೆ
ತಿರುಗಿ ನಡಿದ ಮುದ್ದ ವರಶ್ರೇಷ್ಠ ಸರ್ಪನು
ಮುರುಗಿ ಹೋಯ್ತೆಂದು ದುಃಖಿಸಿದ ೮೫

ಚಿಕ್ಕ ಕರುಗಳನೆಲ್ಲ ಫಕ್ಕನೆ ಕರಕೊಂಡು
ಹೊಕ್ಕನು ತನ್ನ ಮಂದಿರವ
ಚಿಕ್ಕ ತಾತನು ಕಂಡು ಚಕ್ಕಂದವಾಡಲು
ಚಿಕ್ಕ ಮುದ್ದನು ಪಾದಕೆರಗಿ ೮೬

ಮುನ್ನ ನೀ ಹೇಳಿದ ಉನ್ನತ ಸಂಪತ್ತ
ಚೆನ್ನಾಗಿ ದೊರಕಿತೊ ತಾತಾ
ಯಿನ್ನು ನೀನಿದಕಿನ್ನು ಮನುಷ್ಯ ಗಣಕಿನ್ನು
ಭಿನ್ನವಿಲ್ಲದೆ ಮಾಡುಯೆಂದಾ ೮೭

ಭಲರೆ ಭಾಪುರೆ ರಾಜ ಸುಲಭವಾಯಿತು ಈಗ
ನಲವಿಂದ ಸಲಹೊ ಬಡವರನಾ
ವಲಿದು ನಿನಗೊರೆವೆನು ಮಲಹರನ ಕರುಣದಿ
ಭಲರೆಂದು ಜಕ್ಕ ಹೇಳಿದನೂ ೮೮

ನೀವು ಧನ್ಯರು ತಾಯ ನೀನು ಅರಸುಗಳೆಮ್ಮ
ನೀವೆಮ್ಮ ಕೆಲಸ ಬ್ಯಾಡೆಂದಾ
ನೀವು ನಿಮ್ಮ ರಮನೆಗೆ ನೀವು ತೆರಳುವದಮ್ಮಾ
ನಾವು ನಿಮ್ಮಿಂದ ಬದುಕುವರೂ ೮೯

ಹೀಗೆಂದ ಮಾತಿಗೆ ಆಗ ಇಬ್ಬರು ಬಂದು
ಬಾಗಿ ಸಾಷ್ಟಾಂಗ ಮಾಡಿದರೂ
ಹೋಗಿ ನಮ್ಮ ರಮನೆಯೊಳಿರಲು ನಿಮ್ಮಯೆ ಸೇವೆ
ಬಾಗಿ ಮಾಡುವೆ ಎಂದರವರು ೯೦

ಯಿಂತೆಲ್ಲ ಹಾಗಿರಲಿ ಮುಂದಾಗೊ ಕೆಲಸಗಳ
ಸಂತೋಷದಿಂದ ಮಾಡಯ್ಯಾ
ಚಿಂತೆಯಿಲ್ಲದೆ ನೀನು ಕಂತುಹರನ ದಯೆದಿಂ
ನಿಂತು ಮಾಡೆಂದನಾ ಜಕ್ಕ ೯೧

ಕರಸಯ್ಯೆ ಬ್ರಾಹ್ಮಣರ ತರಿಸು ಪಂಚಾಂಗವನು
ವರಶ್ರೇಷ್ಠವರ ಮುಹೂರ್ತದಲ್ಲಿ
ಬರಸಯೆಯೆ ಓಲೆಯೆ ಪರಿ ಅಷ್ಟದಿಕ್ಕಿಗೆ
ಬರಲಿ ವಡ್ಡರು ಕಾಮಾಟಿಗರೂ ೯೨

ಬರೆಸಿದರು ಓಲೆಗಳ ವರಮೂಹೂರ್ತಗಳ ನೋಡಿ
ಕೆರೆಕುಂಟಿ ಕಟ್ಟಿಸಬೇಕೆನುತ
ಕರಸಿದರು ಸರ್ವರ ವರವಿಶ್ವಕರ್ಮರ
ಕರಸಿದರು ನಾನಾಜಾತಿಗಳ ೯೩

ನೀವೀಗ ಕರಸಿದ ಭಾವವು ತಿಳಿಯೆದು
ಯಾವ ಕಾರ್ಯಗಳನ್ನು ಧೊರೆಯೆ
ನೀವುವರವಿನ ಧೊರೆಗಳೆಂಬಾ ವಾರ್ತೆಯೆ ಕೇಳಿ
ನಾವು ಕುಟುಂಬ ತಂದಿಹೆವು ೯೪

ಏಳ್ನೂರು ವಡ್ಡಿಕೆ ಏಳ್ನೂರು ಬ್ಯಾಡಿಕೆ
ಏಳ್ನೂರು ಭಂಡಿಗಳಿಂದ ಹೇಳು
ಮುದ್ದೈರಾಜ ಯೇಳ್ನೂರು ವೀಳ್ಯವ
ಹೇಳಿ ಕೊಡಬೇಕೈಯೆ ಧೊರೆಯೇ ೯೫

ಕೆರೆಯನ್ನು ಕಟ್ಟಿರಿ ಪರಿಪರಿಯಿಂದಾಲಿ
ಪುರಪುರುಷಾರ್ಥಕ್ಕೆ ಈಗ
ಭರದಿಂದ ನೀವೆಲ್ಲ ಸರಸದಿಂದಲಿ ದೊಡ್ಡ
ಕೆರೆಯೆ ಕಟ್ಟರಿಯೆಂದರಾಗ ೯೬

ಕೆರೆಯೆನು ಕಟ್ಟುವ ಪರಿಯೆನು ಹೇಳಯ್ಯೆ
ಕೆರೆಯೆ ಕಟ್ಟುವರಾವ ನಮಗೆ
ಒರೆದು ತೋರೈಯೆ ಮುಂದೆ ಸರಸಾದಿ ಕಟ್ಟುವೆವು
ಭರದಿ ತೋರಿಸುಯೆಂದರಾಗ ೯೭

ಪರಿಯೆನ್ನೆಲ್ಲವ ಹೇಳಿ ಕರದು ವೀಳ್ಯವ ಕೊಟ್ಟು
ಕರೆಕೊಂಡು ಹೋದನು ರಾಜಾ
ವರಶಿಲ್ಪಿ ಬಲ್ಲವರ ವರಗುರು ಹಿರಿಯೆರವರ
ಜಕ್ಕಸಹ ಕೂಡಿ ಹೋಗಿ ೯೮

ಸರಸಾಗಿ ಕಲ್ಲುಗಳ ವರದಿಂದಲಿಟ್ಟಿರುವೆ
ಧರದಂತೆ ಕಟ್ಟು ನೀವೆಂದ
ಪರಮೇಶನ ದಯೆದಿಂದ ಸರಿಯಾಗುವದು ಕೆರೆಯು
ವರಪ್ರಸಿದ್ದವು ಅದೆಂದ ೯೯

ಯಿದೆ ಸಣ್ಣ ಕೋಡಿಯು ಯಿದೆ ನೆಲ್ಲಮಾಳೀಗೆ
ಯಿದೆಯೇಳು ಮದಗಗಳೆಂದ
ಯಿದೆಸೋ ಮದಗ ಯದ್ದ ಸ್ಥಳವು ಯಿದೆ ಸಣ್ಣ ತೂಬಯ್ಯ
ಯಿದೆ ದೊಡ್ಡಕೊಬ್ಬ ಕೇಳಯ್ಯೆ ೧೦೦

ಯಿದೆ ಅರಕೆರೆ ವಿಯೆ ಯಿದೆ ದೊಡ್ಡಕೋಡಿಯು
ಯಿದೆ ಹಿಂದೆ ವದ್ದಗುಣೆಗಳೂ
ಸದಮಲನದಯೆದಿಂದ ಹೋಗಿ ಕಟ್ಟರಯೆಂದು
ಪದುಳದಿಯಲ್ಲಿ ಹೇಳಿದನು ೧೦೧

# ಕನ್ನೀರಾಂಬೆಯ ಕಥೆ: ಪದ

ನಮ್ಮ ಸಲಹೊ ಧೊರೆಯೆ ಕೇಳಯ್ಯರಾಜಾ
ನಿರ್ಮಿಸಿ ಹೇಳಬೇಕೋ
ಮರ್ಮವ ಮಾಡದೆ ಧರ್ಮದಿಂದಲಿ ನೋಡ ಕರ್ಮಿಗಳ್
ನಮಗೆಲ್ಲ ಧರ್ಮಾವ ಹೇಳಯ್ಯೆ ೧೦೨

ಹಿರಿಯಾರಿಗೆಲ್ಲವ ಧರಣಾವ ಕೊಡುವೆನು
ಕಿರಿಯೆರಿಗೆಲ್ಲವಚಾಲದುಗುಲವ ಕೊಡುವೆನು ೧೦೩

ಕರಃರಿಯರಿಗೆಲ್ಲ ಬರಸಿದಾ ಆವಾಗ
ವರಗರ್ಭಿಗಳಿಗೆ ವರಹದ ನೇಮಿಸೆ ೧೦೪

ಕೇಳಿರೋ ಅಣ್ಣಯ್ಯಾ
ಕೇಳಿರೋ ಅಪ್ಪಯ್ಯ
ಕೇಳಿರೋ ರಾಜ ಹೇಳಿದ
ವಚನವವನು ೧೦೫

ನೋಡಿರೇ ಅಮ್ಮಯ್ಯ
ನೋಡಿರಕ್ಕಯ್ಗಳೆ
ನೋಡಿರೆ ಭೂಪಾನು
ಈಡ್ಯಾಡಿದೊಚವನವ ೧೦೬

ನೀನೆ ನಮ್ಮಯೆ ತಂದೆ
ನೀನೆ ನಮ್ಮಯೆ ತಾಯಿ
ನೀನೆ ನಮ್ಮಯೆ ಬಂಧು
ಬಳಗವು ರಾಜ ೧೦೭

ನಿಮ್ಮಂಥ ದೊರೆಗಳ
ನರರೊಳು ಕಾಣೆವು
ನಿಮ್ಮಂಥ ಧೊರೆಗಳು
ಭೂಮಿಯೊಳಗಾರಿಲ್ಲ ೧೦೮

ಯಿದರಂತೆ ಸಂಬಳ
ವದಗಿ ನಿಶ್ಚಯೆ ಮಾಡೆ
ಪದುಳದಿ ಸರ್ವರು
ಮುದದೊಳಾರಂಭಿಸೆ ೧೦೯

ಒಂದೆರಡು ಮೂರು
ದಿನವು ಕಟ್ಟಸರ್ವರು
ಬಂದುಸಂಬಳ
ಕೊಡುಯೆಂದು ಕೇಳಿದರಾಗ ೧೧೦

ನಿಂದರಂಗಳದಲ್ಲಿ
ಬಂದರೆಲ್ಲರು ನೋಡಿ
ಛಂದವಾಯಿತು ಎಂದು
ಬಹಳ ಸತೋಷದಿ ೧೧೧

ಯೇಳು ಸಾವಿರಮಂದಿ
ಮ್ಯಾಳೈಸಿ ಬಂದೀತು
ಹೇಳಯ್ಯೆನಾಗಾನೆ
ತಿಳಿಯೆದಾಲೋಚನೆ ೧೧೨

## ಸಾಂಗತ್ಯ

ನಿನ್ನ ವಚನಗಳಂತೆ ಹೊನ್ನು ಲೆಕ್ಕವ ಮಾಡಿ
ಭಿನ್ನಾವಿಲ್ಲದ ಹುರುಳಿ ತರಿಸಿ ಚೆನ್ನಾಗಿ
ಕೊಪ್ಪರಿಕೆಯೊಳು ಬೇಸಿ ಹೊನ್ನುಗಳ್ ಬೆರಸಿ
ಅನ್ಯೋನ್ಯದಿಂದ ಕೊಡು ನೀನು ೧೧೩

ಒಂದೊಂದೂ ಬೋಗುಸೆಯೆನು ಬಂದವರಿಗೆ ಕೊಡು
ಅಂದಾಜಿನಮತೆ ದೊರಕುವದು
ಬಂಧುರದಲಿ ಕಷ್ಟಮಾಡಿದ ಜನರಿಗೆ
ಸಂದೇಹವಿಲ್ಲದೆ ದೊರಕುವವು ೧೧೪

ಯದತೆ ಸ್ವಪ್ನವು ಮುದದಿಂದ ಬೀಳಾಲು
ಚದುರ ಮುದ್ದನು ಕೊಟ್ಟನಾಗ
ಒದವೀದ ಹೊನ್ನನು ನಿಧಿಯೋಳು ಬೆರಸೀದ
ಸದವಲ್ಲೇಲೀ ಯಚನಗಳಿರಾ ೧೧೫

ಕರಕರ ಕೊಟ್ಟರೆ ಬೆರತದ್ರವ್ಯಗಳೆಲ್ಲ
ಸರಸಾದಿ ಅವರವರ ತೆರದೀ
ಕರಕಷ್ಟದಿಂದಲಿ ಸರಿಯಾಗಿ ಮಾಡಿರಲು
ದೊರಕುವದು ವರಸತ್ಯದಿಂದ ೧೧೬

ಕಳ್ಳತನದಿಂದಾದಲಿ ನೆರಳಾಗ ಕುಳಿತರಿಗೆ
ಸುಳ್ಳೀಲೆ ಬೈಗುಗಳ ತೆರಿಗೆ

ಎಳ್ಳುಕಾಳಷ್ಟು ಹೊನ್ನುಹಣ ದೊರಕದೆ
ಅಲ್ಲಲ್ಲಿ ತಾವು ಗುಜುಗುಜಿಸೆ ೧೧೭

ಅವರವರಗ್ಗತ್ತಿದಾ ಬಾಧಕಾಯ್ತೆದರಿಂದ
ಸುವಿಲಾಸದಿಂದ ಕಟ್ಟಿದರು
ಭುವನ ಕಧಿಕವಾಗಿ ನಮನೂತನದಿಂದಾಲಿ
ಭವನ ಬಾಧಿಕನಂತೆ ಮಾಡೆ ೧೧೮

ಯಿಂತು ಸರ್ವರು ಕೂಡಿ ಸಂತೋದಿಂದ
ಕಂತುಹರ ತಲೆದೂಗುವಂತೆ
ಅಂತು ಏಳು ವರ್ಷಕ್ಕೆ ನೀಂತು ಕಟ್ಟಿದರೆಲ್ಲ
ಚಿಂತೆಯಿಲ್ಲದೆ ಸರ್ವಜನ ೧೧೯

ಕೇಳಯ್ಯೆ ರಾಜಾನೆ ಹೇಳೀದ ತರದೊಳು
ಏಳು ವರ್ಷವು ತುಂಬಿತಯ್ಯೆ
ಬಾಲೇರು ಸಹವಾಗಿ ಬಾಲರು ಸಹವಾಗಿ
ಮೇಲಗಿ ಕಟ್ಟಿಹೆವೆ ನಾವು ೧೨೦

ಇನ್ನು ನೀ ಕೇಳಯ್ಯೆ ಹನ್ನೆರಡು ಆಹುತಿಯೆ
ಮುನ್ನನರಬಲಿಯೆ ಕೇಳುವದು
ನಿನ್ನಿನ ಸ್ವಪ್ನದಿ ಉನ್ನತದಿಂದಲಿ
ಚೆನ್ನಾಗಿ ಹೇಳಿತ ಕೆರೆಯೆ ೧೨೧

ಕೇಳುವರೆ ಕೇಳು ನರಬಲಿಗಳನು
ಲೋಲುಪ್ತೆಯಂದ ಕೊಡು ಧೂರಿಯೆ
ಹೇಳಿತ್ಯೆ ಸ್ವಪ್ನದಿ ಆಲೋಚನೆಯ ಬ್ಯಾಡ
ಹೇಳುವಾ ಮಾತು ದಿಟವಯ್ಯೆ ೧೨೨

ನಿನ್ನಿನ ದಿವಸಾದಿ ನನ್ನ ಸ್ವಪ್ನದಿ ಬಂದು
ಹನ್ನೆರಡಾಹುತಿಯಾ ಕೇಳಿದಾದು
ನನ್ನ ನಿನ್ನೆಯೆ ಸ್ವಪ್ನ ಉನ್ನತವಾಯಿತು
ಬಿನ್ನವಿಲ್ಲದೆ ತರಿಸಯ್ಯಾ ೧೨೩

ಏಳು ಆಹುತಿಗಳ ತಾಳಾದೆ ಸರಸೀರಿ
ಕೇಳಿದ ದ್ರವ್ಯಗಳ ಕೊಡುವೊ
ಏಳ್ನೂರು ವರಾಹವ ಮ್ಯಾಲೆನಾ ಕೊಡುವೆನು
ಯೇಳು ಆಹುತಿಯೆ ತಂದವರಿಗೆ ೧೨೪

ನಾನು ತರುವೇನೆಂದು ನೀನು ತರುವೇನೆಂದು
ನಾನು ನೀನೆಂದುದೆನೂರು
ನಾನಾ ದೇಶದ ತಿರುಗಿ ನಾನಾ ಜಾತಿಯೆ ಜನರ
ಹನ್ನೊಂದಾಹುತಿಯೆ ತಂದಿಡಲು ೧೨೫

ಬಂದು ನಿಂತವರೆಲ್ಲ ತಂದೆ ತಾಯಗಳು
ಈಗ ವಂದೀಸಿದರು ತಮ್ಮತಮಗೆ
ಛಂದದಿ ಸಲಹೈಯ್ಯಾ ತಂದೆ ಮೂದ್ದೈರಾಜ
ಕುಂದದೆ ಕೊಡು ದ್ರವ್ಯಗಳನೂ ೧೧೬

ಬಂದು ಕೇಳಿದರವರು ನಿಂದು ಕರಗಳ ಮುಗಿದು
ಸಂದೇಹವಿಲ್ಲದೆ ಕೊಡು ಧೊರೆಯೆ
ಅಂದ ತಕ್ಷಣದಲ್ಲಿ ಬಂದು ಮುದ್ದನು ತೀವ್ರ
ದಿಂದ ಬಿಂದಿಗೆಯೆಲೀ ೧೧೭

ಏಳು ಬಿಂದಿಗೆ ಹೊನ್ನ ಕೇಳಾದೆ ಕೊಟ್ಟಾನು
ಏಳ್ನೂರು ವರಹ ಮೇಲ್ಕೊಟ್ಟಾನು
ಕೇಳಿದ ಕಿಂತಾಲು ಮೇಲಾಗಿ ಕೊಟ್ಟೆ ನೀ
ಬಾಳಯ್ಯೆ ಧೊರಿಯೆ ಖ್ಯಾತಿಯೆಲಿ ೧೧೮

ಇನ್ನಾಲ್ಕು ಬಲಿಗೂ ಇನ್ನುತಾ ವಿರುವಾವು
ಮುನ್ನ ನೀ ಕೊಡು ಧೊರಿಯೆ ಯೆನಲು
ನಾನು ಹೇಳಿದಕಿಂತು ಯನ್ನು ಹೆಚ್ಚಿಗೆಯಾಯ್ತೆ
ಉನ್ನತ ಕೆಲ್ಸವ ಮಾಡಿದಿರಿ ೧೧೯

ಬಿದ್ದ ಸ್ವಪ್ನದ ತೆರದಿ ಯದ್ದರೀತಿಯೆಲಿನ್ನು
ಶುದ್ದಾಗಿ ತಂದಿರುವೆನೆನಲೂ
ಬದ್ಧಾದಿ ಕೊಟ್ಟಾನು ಯಿದ್ದವರಿಗೆ ದ್ರವ್ಯ
ಉದ್ಧಾರವಾಗಲೆಂದು ಹೊಗಳೇ ೧೨೦

ನೀನು ಮಾಡಿದ ಕಾರ್ಯೆ ಘನಕೀರ್ತಿಯಾಗಲೀ
ದಿನ ಶಶಿಗಳಿರುವ ಪರಿಯಂತರ
ಮಾನನಿಧಿಯೆ ನಾವು ಜ್ಞಾನದಿಂದಲೆಯಲ್ಲಿ
ಮೌನದಿಂದಲಿ ಹೋಗುವೆವೂ ೧೨೧

ಆಹುತಿಗಳ ಕೊಟ್ಟರೆ ದೇವತೆಗಳಾಗುವರೂ
ದೇವಾತ ಕೆರೆಯರುವತನಕಾ
ನೀವನುಮಾನವ ಮಾಡಿದೆ ಸರ್ವರು
ಭಾವಾದಿ ಸಾಗಿರಿ ನೀವೆಂದಾ ೧೨೨

ಬಂದವರನೂ ತಂದು ಒಂದೊಂದು ಠಾವಿಗೆ
ಛಂದಾದಿಯಡುತಾಲಿ ಬರಲ್ಣೂಂಗ
ಬಂದರವರ ಸಣ್ಣ ಕೋಡಿಯಾಳ್ ವರವುಡಚಲಮ್ಮ
ನೀನೆಂದೂ ೧೩೩

ನಿಜ ಕಬ್ಬಿಗರ ಮಗನ ಅಜನೆಂದು ನೇಮಿಸಿ
ಭಜಿಸಿ ಯಟ್ಟರು ಮಧ್ಯದಲಿ
ನಿಜ ಮಾಡಿವಾಳರ ಮಗಳ ಚೆನ್ನಮ್ಮನ
ನಿಜವಾಗಿ ಸಂಣತುಂಬಿನೋಳು ೧೩೪

ಬಾಲಬ್ಯಾಡರ ಮಗನ ಮೂಲಿತ ಹಾಕಿದರು
ಸೂಲದ ರಾಯೆಮ್ಮಯೆನೆಂದೂ
ಗೊಲ್ಲರ ಕುವರಿಯೆ ಬಲ್ಲಿದ ತಾಯೆಂದು
ಗೊಲ್ಲತ್ಯಾಮೆಂದು ಅಲ್ಲಿಡಲೂ ೧೩೫

ನೀರಿನವರಿಯೆಂದು ನಾರಿ ಮಾದಿಗ ಮಗಳ
ನಾರಿ ಪದ್ಮಪ್ಪ ಯೆಂದಿಡಲೂ
ಲಿಂಗವಾಳರ ಮಗಳ ಹಿಂಗಾದ್ದಿರೆ ತುಂಬಿನೋಳು
ಗಂಗಾಂಬೆಯೆಂದು ನೇಮಿಸಿದಾ ೧೩೬

ಸೋಸಿದ? ದಂತಿರುವಬ್ಬ ಬ್ರಾಹ್ಮಣನೂ
ಬಾಶಿಂಗಗಳ ಕಟ್ಟುವನೂ
ಘಾಶಿಯಾಗದೆ ಹಿರೆಕೊಂಡಿವ (-)ಳಿಟ್ಟರು
ಬಾಶಿಂಗರಾಯೆ ನೆಂದೆನಿಶೀ ೧೩೭

ಎರಡೊದ್ದ ಗುಣೆಗಳಿಗೆ ಎರಡು ಆಹುತಿಕೊಟ್ಟು
ಅರದೋಟಿಯೊಳೊಬ್ಬಾನನಿಟ್ಟು
ನೀರಿನೊದೆಗಳ ನೋಡಿ ಸರಿಯಾ ದಾಹುತಿಕೊಟ್ಟು
ವೋಲೈಸಬೇಕೆಂದು ನಮಿಸೀ ೧೩೮

ಅಷ್ಟದಿಕ್ಕುಗಳಿಗೆ ನಿಷ್ಠೆಯಿಂದಲಿ ನಿಲಿಸ
ಭಟ್ಟಂಗಿ ಕೂಡ ಹೊಗಳಿ
ನೆಟ್ಟಾಗೆ ಮನೆಯೊಳಿಟ್ಟೀಯೆ ನಿಡಿದೂ ಬರುವಾಗ
ಥಟ್ಟನೆ ಮದಗಗಳೊಡೆಯೆ ೧೩೯

ಯಿದುಯೇನು ಚೋದ್ಯಾವು ಯಿದು ಏನುಯೆಂದೆನುತಾ
ವದಗಿ ಬಂದರು ಮದಗದೆಡಿಗೇ
ಬೆದರಾದೆ ತಾನಿಂದು ಮುದದಿಂದ ಕೇಳೀದಾ
ಚದುರ ಮುದ್ದನು ಬೇಗದಿಂದಾ ೧೪೦

ಹೇಳೂವೆ ಮುದ್ದಣ ಕೇಳೀಗ ನಮಗೊಂದು
ಏಳು ವರುಷದ ಕನ್ಯಬೇಕೋ
ಮೇಲಾಗಿ ಬ್ರಾಹ್ಮಣರ ಕುಲದಲ್ಲಾಗಲಿ ಬೇಕು
ಭೋಲೋಕಧಿದೊಕವಾಗವಳು ೧೪೧

ಯಿಂಥಾಯಿ ಕನ್ಯಾವ ಯೆಂತುನೋಡಲಿ ದೇವಾ
ಚಿಂತೆಯಾದೀತಾ ಮನದೊಳಗೆ
ಮುಂಚೆ ನೀನಿದ್ದಂಥ ಸೊಂತಮನೆಯೊಳಗಿನ್ನು
ಕಾಂತೆ ಯಿರುವಳೂ ಬ್ಯಾಡ ಚಿಂತೆ ೧೪೨

ಅವರ ಮನೆಯೊಳಗಿದ್ದು ಅವರ ಅನ್ನವನುಂಡು
ಅವರಿಂದ ದೊಡ್ಡಾವನಗೀ
ಅವರ ಮನೆಯೊಳೂ ಕನ್ಯನಾ ಹ್ಯಾಗೆ ಕೇಳಲೀ
ಅವಿವೇಕವಾಯ್ತೆಯ್ಯಾ ಸ್ವಾಮಿ ೧೪೩

ನೀನಂಜ ಬ್ಯಾಡಜ್ಯೆ ಮಾನಾವಧೀಶನೇ
ತಾನಿದಕ್ಕಾಗಿ ಹುಟ್ಟಹಳೂ
ನೀನೀಗ ಹೋಗಿ ಘನಮನದಿಂದ ಕರಿಯಾಲೂ
ತಾನೇತಾನಾಗಿ ಬರುವಳು ೧೪೪

ಛಂದಾಗಿ ಬಂದೋನು ನಿಂದಾನಂಗಳದಲ್ಲಿ
ತಂದೆ ಜಕ್ಕಯ್ಯೆ ಎಂದು ಕರೆದೂ
ನಿಂದ ತಾನಾನಯ್ಯೆ ಬಂದೇ ನಿಮ್ಮಡಿಗಳಿಗೆ
ಯೆಂದು ವಂದಿಸಿ ನಿಂತನಗಾ ೧೪೫

ಹೀಗ್ಯಾಕೆ ಬಂದಾನು ಬ್ಯಾಗನಮ್ಮನಿಗಳಿಗೆ
ಯೋಗಾದ ನೋಡಿ ಬಂದಿಹನೂ
ಹ್ಯಾಗೆ ಮಾಡಲಿ ನಾನು ಆಗ ಮಾಡಿದ ದೋಷ
ನೀಗ ಆಡಿದೆನು ಗರ್ವದಲೀ ೧೪೬

ಸಂದೇಹಗೊಳುತಲೀ ಬಂದ ರಾಜನ ನೋಡಿ
ವಂದೀರಂದು ಪ್ರಜೆಗಳಿಗೆ
ಛಂದಛಂದದಿ ಮಾಸ ಬಂದಾವರಿಗೆ ಕೊಟ್ಟು
ಬಂದು ಸೇರದೆಗತಿಯೆಂದು ೧೪೭

ಬಾರೋ ಮದುದ್ಯೆರಾಜಾ ಬಾರೊ...ಯೊಳಿನ್ನು
ಬಾರಯ್ಯೆ ಕುಂಡ್ರೆಂದು ಕರವಿಡಿಯೋ
ಯರುವ ನನ್ನಯ್ಯೆ ಪೂರ್ವಸ್ಥಿರವಾದ ಠಾವಿನೊಳು
ಬರಬಾರದೊ ತಾತ ಮ್ಯಾಲೆ ೧೪೮

ನನಗೆ ಧಣಿತನ ಬರಲೂ ನಿನಗೆ ಸರಿಯೆಹುದೇ
ಘನಮಾಡುವರೆ ತಾತಾ ಯಾನ್ಯಾ
ಖಿನ್ನವಾಗಿ ಯಿರುವಂಥಾ ಮನಸು ನನಗಿರಲೂ
ಚಿನುಮಯಾ ಶಿವನು ಮೆಚ್ಚುವನೂ ೧೪೯

ಬಂದಂಥಾ ಕಾರ್ಯವು ಛಂದಾದಿ ಹೇಳ್ಳೈಯ್ಯಾ
ಬಂದೀರಿ ಜಗದಾ ಜನರೆಲ್ಲಾ
ಅಂದಾಗ ನೀವೀಗ ಮುಂದಾಗುವಾ ಕಥಾನಾವ
ಕುಂದಾಗ ಹೇಳ್ಳೈಯಾ ರಾಜಾ ೧೫೦

ಯೇನು ಹೇಳಲಿ ತಾತ ಮೌನವಾಯಿತು ಈಗ
ಹೀನವಾಗಿದೆ ಯೆನ್ನ ಮನಕೆ
ನಾನು ಹೇಳಿದ ಮಾತಿಗೇ ನಂಬುವೆಯೊ ಮುತ್ಯಾ
ಹೀನಗುನದವನೆನ್ನ ಬ್ಯಾಡಾ ೧೫೧

## ಮುದ್ದರಾಜನ ಕೇಳುತಾತ ನಾ ಹೇಳು ಮಾತನೂ

ಯೇಳುಮದಗಗಳು ಕೂಡಿಕೊಂಡು
ಕೇಳಿದಾವು ನಿಮ್ಮ ಮಗಳಾ ಪಲ್ಲಾ

ವಲ್ಲಾಲಿ ಕೆರೆಯೆ ಕಟ್ಟಿಸಿ ಯೆಲ್ಲಾಸ್ಥಿರವ ಮಾಡಿದೇ
ಪರಿಪರಿಯೊಳು ಆಹುತಿಗಳ
ವರದು ಕೊಟ್ಟು ನಿಲ್ಲಿಸಿದೆನೂ ೧೫೨

ಕೆರೆಯು ಕೇಳಿತು ನೋಡು ನರರಾ ಬಲಿಗಾಳ
ಕುರಿಯು ಮರಿಯು ಕೋಣಗಳು
ವರದು ಹೇಳೊಂದು ಸಾಧ್ಯವಾಯ್ಯಾ ೧೫೩

ನೀತನವದೆಯೋಳು ನಾರೀಯೆರಾನು ಕೇಳೀತು
ಭಾರಿ ಭಾರೀ ವದೆಗಳಲ್ಲಿ
ಮೀರಿದಾಹುತಿ ಕೊಟ್ಟುನ್ಯೈಯ್ಯಾ ೧೫೪

# ಕನ್ನೀರಾಂಬೆಯ ಕಥೆ: (ನೋಡಿದೆ ಗುರುಗಳಾ ಕೊಂಡಾಡಿದೆಯಬಂತೆ)

ನೋಡೀದೆ ರಾಜಾ ನೋಡೀದೇ
ನೋಡೀದೆ ರಾಜನೆ ಮಾಡೀದ ಕೆರೆಯಾನು

ಹುಟ್ಟೀದ ನೀನು ಕಟ್ಟೀದ ಕಟ್ಟೀದ
ಕಟ್ಟನ್ನು ಎಷ್ಟೆಂದು ಹೇಳಾಲಿ
ಶೃಷ್ಟಿಗಾಶ್ಚರಿಯಾಗಿ ಹುಟ್ಟಿದಾ ಕೆರೆಯಾನು ೧೫೫

ಸುರರೋಳು ನೀನು ಬೆರೆದೇಳ್
ನರಲೋಕದೊಳಗಿನ್ನೂ ಸರಿಯಾದವರಕಾಣೆ
ಪರಿಪರಿಯಂದಲಿತರಗಳ್ಹೊಂದಿರುವಾದ ೧೫೬

ಬಂದೀತು ದೋಷಾ ಹೊಂದೀತು ಯಂದು ನೀನೀಗಲಿ
ಬಂದಂತ ಕಾರ್ಯಾವು ಚಂದವಾಯಿತು ರಾಜ
ಕಂದನ ಕರದೊಯ್ಯೋ ೧೫೭

## ಬಾರಮ್ಮ ತಾಯೀ ವೀರ ದೇವೀ

**(ಭಾಗ್ಯದ ಲಕ್ಷ್ಮಿ ಬಾರಮ್ಮಯೆಂಬಂತೆ)**
**(ಮುಧ್ಧ ರಾಜನವರ)**

ಬಾರಮ್ಮ ತಾಯೇ ನಾರೀನೀ
ಬಾರಮ್ಮ ತೋರಮ್ಮ ಮುಖಗಾಳ
ವಾರೀಜ ಮುಖಿನೀನು ಭೋರಾನೆ ಬೇಗಾದಿ
ಬಾರಮ್ಮ ಯೇವೂರಗೇವ ೧೫೮

……..ವಡಯಾರು ನೀವು ಕೂಡಂಮ್ಮಾ
ಬಡವಾನು ವೊಡಹುಟ್ಟದವರಂತೆ
ಬಡಮತಿಗಳ ನೀಗಿ ಧ್ರುವದಿಂದ ಬರತೀನಿ
ತಡಮಾಡ ಬ್ಯಾಡಂಮ ೧೫೯

…..ಬಂದಿ ಹೇನಮ್ಮ ನುರಿಧಾಕಲಾ ಯದು
ಎಂದೀಡೆ ನಿಂಮ ಚಂದ್ರಮುಖಿಯೇ ನೀನು
ಸಂದೇಹವಿಲ್ಲದೆ ಮುಂದಾದೆ ನೀನೀಗಿ
ಛಂಧಾದಿ ಬೇಗಾವೆ ೧೬೦

ಕರದನ್ನೆರಗಾಳಾ ಯೀರಮ್ಮನು
ವರದು ಕೇಳಿದಳೂ

ಅರಮನೆಯೊಳಗಿಂದ ಭರದಿಂದ ಬಂದಾಳು
ಕರದಾಳೂ ತಂನ್ನಾಯ ತರುಣವಾತ್ಯಂ ಮಾತೆ ೧೬೧

ಬಾರಂಣ ಬ್ಯಾಗವಳಗೆ ಯೀಗ ಬಾರಣ್ಣ ಬ್ಯಾಗ
ಬಾರಣ್ಣ ಯೆನುತಾಲಿ
ಭರದಿಂದ ತಾಬಂದೂ ಕೊರಳೀಗೆ ಕೈಹಾಕಿ
ಪರಿಪರಿ ಆಡೂತ ೧೬೨

ದಿನದಿನ ನಾನು ಅಣ್ಣಾಯೆಂದು ನೆನಸುತ್ತಲಿಹೆನು
ನನ್ನನೆನಶಿ ತೀರಿಂದ - ಅಂಣ್ಣಾ
ಬೇಗನೇ ಬಂದ್ಯಾ ಉಣ್ಣು ಬಾರಣ್ಣಯ್ಯೆ
ಹಂಣ್ಣು ನೆತ್ಕಾರಿಹಾಲಾ ೧೬೩

ಉಲ್ಲಾಸದಿಂದ ಅಂಣಾ ನೀನು ಎಲ್ಲಿದ್ದೆಯೆನುತಾ
ಗಲ್ಲಾವ ಪಿಡಿ...ದು
ಯೆಲ್ಲಿ ಹೋಗಿದ್ದೆಂದು ಮೆಲ್ಲಾನೆ ನಲುವಿಂದ
ನಿಲ್ಲಾದೆ ಕುಷಿಯಾಗಿ ಬಾರಂಣ ಬ್ಯಾಗಾ ೧೬೪

ತಿರುಗಿ ನೋಡಿದಳೂ ಯಿರುವಜನ
ಪರಪರಿಯರಲೂ ಕೈತಳಕಯ್ಯೆನು ಬಿಟ್ಟು
ವರಿಗಿ ತುಡಿಯೊಳಾಗ ಭರದಿಂದ ಅಣ್ಣಾನ
ಯಿರುವೆಲ್ಲಾ ಹೇಳು ನೀ ಬಾರಂಣ ಬ್ಯಾಗ ೧೬೫

ಯಿನ್ನೂ ಯೀಜನರೂ ನಿಂನಯೆ ಹಿಂದೆ
ಘನವಾಗಿ ಯಿಹರೂ ಯೇನು ಕಾಯ್ಯುವುಂಟು
ಯೇನಣ್ಣ ತಿಳಿಯಾದು ಮವುನದಿಂದಲಿ ಬಂದೂ
ಯೆನ್ನಾನು ಕರದೊಯ್ಯೊ ಬಾರಂಣ ಬೇಗವಳಗೆ ಯೀಗಾ ೧೬೬

## ಪದ

ಯೆನ್ನನ್ಯಾತಕೆ ಕರದಿಯೋ ಅಣ್ಣಯ್ಯ, ನೀನು
ಯೆನ್ನ ನ್ಯತಕೆ ಕರದಿಯ
ಯೆನ್ನನ್ಯಾತಕೆ ಉನ್ನತಾವೆನಯ್ಯ
ಓಂಣ್ಣೈರಗಳಿಂದ ಜಗಕೇ ೧೬೭

ಹುಟ್ಟಿದ ಮೊದಲಾಗಿ ತೊಟ್ಟಿಲೇ ತೂಗದೆ
ಶೃಷ್ಟಿಯೆಲ್ಲಿರೆ ನೀನು ಕಟ್ಟಿ ತೆರಿಡಕೆ ಹೋದೆ ೧೬೮

ವುಲ್ಲಾಸದಿಂದಾಲಿ / ಗಲ್ಲಾವ ಪಿಡಿಕೊಂಡೂ
ಯೆಲ್ಲಿ ಹೋಗಿದ್ದೆಂದು ಮೆಲ್ಲಾನೆ ನಲುವಿಂದಾ ೧೯೯

ಸಣ್ಣ ಕೂಸಿರಲಿಕ್ಕೆ ಹಣ್ಣು ಒಬ್ಬರ ಲಿಟ್ಟು
ಬಿಣ್ಣೀಸಿನ ಹೊದೆ ತಣ್ಣೀಲಿರುವಾದೆ ೧೭೦

ಯೀಗನ ಬಂದಂಥ ಸಾಗದ ಕೆಲಸಾವು
ಹ್ಯೇಗಾವ ಹೇಳಂಣ ಆಗ ಬ್ಯಾಗನ ನೀನು ‖ ಯೆನ್ಯನ್ಯಾತಕೆ
ಕರದಿಯೊ ಅಣ್ಣಯ್ಯೆ ನೀನು ೧೭೧

## ಮುದ್ದುರಾಜನ ಪದ

ಕೇಳಮ್ಮ ತಾಯೀ ಕೇಳಮ್ಮ ಹೇಳೂವ ಮಾತಾನು
ಕೇಳಮ್ಮ ತಾಯೀ ಕೇಳಮ್ಮಾ

ಧರಿಯೊಳು ಈಗ ಕೆರಿಯಾನು ನೆರಸಾರಿ ಯೆಲ್ಲಾವ
ವರದು ಕಟ್ಟಿಸಿರೇನು ನರಬಲಿಗಳ ಕೊಟ್ಟು ಸ್ಥಿರವಾಗಿ ನೀಲಿಸೀದೆ
ಕೇಳಮ್ಮ ತಾಯೀ ಕೇಳಮ್ಮಾ ೧೭೨

ಬರುತಿರೆ ಕೆರೆ ಆನುತಿರೆ
ಅರಮನೆಯೊಳು ತಂನೆ
ಯೀರಮ್ಮ ಯೀಹ್ಯಳ್ಳೆಯ್ಯಾ
ಸರಸಾದಿ ಕರತಂದ ಸೇರಿಶಿಡು ಯೆಂದೀತು ೧೭೩

ಯೋಳು ಮದಗ ದುಟ್ಟಿ
ನೆಲಮಾಳಿಗೆ ವಲಲಾದ
ಸಕಲ ಸಾಮ್ರಾಜ್ಯ ವಲ್ಲಿಹುದಮ್ಮ ೧೭೪

ಯೇನು ಹೇಳಲಿ ತಾಯಿ
ನೀನಲ್ಲಿಯಿರಬೇಕು
ಹೀನ ಮಾವನನೆಂಬೆ ಕಂದಮ್ಮ
ಬಾರಮ್ಮ ತಾಯಿ ಬಾರಂಮ್ಮ ೧೭೫

ಬರುಬೇಕು ತಾಯೆಮ್ಮ
ಯಿರುಬೇಕು ಕೆರಿಯೋಳು
ನರರೀಗೆ ವರಗಳ ಭರದಿಂದ ನಲಿತಾಲೀ
ಕೇಳಮ್ಮಾ ತಾಯೀ ಕೇಳಂಮ್ಮಾ ೧೭೬

ಮುನ್ನಾ ನೀ ಮಾಡೀದ ಪುಣ್ಯಾದ ಫಲವೀದು
ಚನ್ನಶ್ರೀ ಶಿವನಾಗ್ನೆ

ಮುನ್ನಯಿರುವದಂಮ್ಮಾ ಕೇಳಂಮ
ತಾಯಿ ಕೇಳಮ್ಮ ೧೭೭

ಯೆಲ್ಲಾ ಮಾನು ಕೇಳೀ ವುಲ್ಲಾಸವಾಯೀತು
ಮಲ್ಲಾನೆ ಕುಷಿಯಾಗಿ
ನಿಲ್ಲಾದೆ ನಗುತಾಲಿ ಬರುವೇನು ಅಣ್ಣಾ ಬರುವೇನೂ ೧೭೮

ಒಡಹುಟ್ಟಿದಣ್ಣಾನ ವುಡಿಯೋಳು ಮಲಗಿರ್ದು
ದ್ರುಢದಿ ಅಣ್ಣನೆ ಬ್ಯಾಗಾ
ನಡಿಹೋಗೋಣೆಂದಾಳು ಬರುವೇನು ಅಣ್ಣಾ ಬರುವೇನು ೧೭೯

ಬರುವೇನು ಅಣ್ಣಯ್ಯೆ ಅರಮನಿಯೊಳು ಹೋಗಿ
ಹಿರಿಯೆರಪ್ಪಣೆಗಾಳ ತರುವೇನು
ಭರದಿಂದಾ ಬರುವೇನು ಅಣ್ಣಾ ಬರುವೇನು ೧೮೦

## ಪದ

ಪರಹೀತ ಕಾರ್ಯೆಕ್ಕೆ ನೆರೆದೊಡ್ಡಿ ಕೆರೆಯಾನು
ವರದು ನಿರ್ಮಿಶಿದಿಯೊ ಅಣ್ಣಾ
ಪರಹೀತಕ್ಕಿಲ್ಲಾದ ಶರೀರ ವಿದ್ಯಾಕೆಂದು
ಕರುಣೀಶಿ ನುಡಿದಳು ಮಾತೆ ೧೮೧

ಆಡಿದ ಮಾತುಗಳ ಮಾಡೀತು ಪ್ರಜೆಯೆಲ್ಲಾ
ಪಾಡಿ ಕೊಂಡಾಡಿ ಹೊಗಳಿದರೂ
ರೂಢಿಯೊಳಗೆ ನಿಮಗೆ ಯೀಡಿಲ್ಲವೆನುತಾಲಿ
ಜೋಡಿಸಿ ಕರಗಾಳ ಮುಗಿದರಾಗಾ ೧೮೨

## ಶ್ರೀ ಗುರು - ಕಂನ್ನೆಯೀರಮ್ಮನ ಪದ

ಹೋಗುವೆನು ತಾಯಿ ಬಾಗಿ ಅಣ್ಣಾ ಕರೆಯೆ ಬಂದಾ
ಹೋಗುಬೇಕು ಬ್ಯಾಗ ಹೇಳಿ ಬಂಧು ಜನಗಳೇ ೧೮೩

ಅಂದವಾದ ಮಾತುಗಳನೂ ಬಂಧುಜನರು ಕೇಳಿತಾವು
ಯಿಂದಂಧರನಾ ರಾಣಿ ನೀನು ಯೆಂದು ಪೊಗಳಾಲು ೧೮೪

ಚಂದದಿಂದ ತಂದೆ ಬಂದುವರ್ಗ ಜನಗಳನ್ನು
ಕಂದ ನಿನಗೆ ಯಂಥಾಗುಣವು ಯಿಂದು ದೊರಕಿತು ೧೮೫
ಸುರರು ದೇವತೆಗಳು ನೀವು ನರರುಗಳಲ್ಲವಮ್ಮಾ
ಪರಿಪರಿಯೊಳು೭ ವಚನಕೊಟ್ಟು ಅರಸಿ ಹೋಗಮ್ಮಾ ೧೮೬

ಅಂದ ಮಾತಿಗಾಗಿ ಊರ ಚಂದದಿಂದ ಹರುಷವಾಗಿ
ಬಂಧುಬಳಗ ತಂದೆ ತಾಯ್ಗಳ ಪಾದ ಕೊಂದಿಸೇ ೧೮೭

ಒಂದಿಸಿದಾಗ ತಂದೆ ತಾಯ್ಗಳ ನೊಂದು ದುಃಖ ಮಾಡಲೂ
ತಂದೆ ದುಃಖ ಬ್ಯಾಡವೆಂದು ಕಂದ ಹೇಳೊ ೧೮೮

## ಪದ

ನಾನೆಲ್ಲಿ ಗೋಗುವೆನೇ ತಾಯೆಮ್ಮ ಕೇಳೂ
ನಾನೆಲ್ಲಿಗ್ಹೋಗುವೆನೇ
ನಾನೆಲ್ಲಿಗ್ಹೋಗೂವೆ ನಿಮಗ್ಯಾಕೆ ದುಃಖಾವು
ಘನವಾದ ಕೇರಿಯೋಳು ವಿನಯಾದಿ ಯಿರುವೇನು ೧೮೯

ನೀನು ನೆನಶಿದಾಗ ಕನಶೀಲಿ ಬರುವೇನು
ಮನಶಿಕುಳನು ತಾಲೇ
ಜನನೀಯೆ ಬ್ಯಾಡಮ್ಮಾ ೧೯೦

ಜನನಿ ಜನಕರನೂ ವಿನಯಾದಿ ಸಂತೈಸಿ
ಅನುನಯೆದಿಂದಲಿ ಬಂಧೂವಿಗೊಂದೀಸಿ ೧೯೧

ಯೆಲ್ಲಾರ ಸಂತೈಸಿ ಯೆಲ್ಲರಪ್ಪಣೆಗೊಂಡು
ಬಲ್ಲೀದ ಅಣ್ಣ ನಿದ್ದಲ್ಲೀಗೆ ಬಂದಾಳು ೧೯೨

## ಪದ

ಅಪ್ಪಣೆ ಕೊಟ್ಟಾರು ವಪ್ಪದೆ ನಾನೀಗ
ತಪ್ಪಾದೆ ಬರುವೇನು ಅಣ್ಣಾ
ಅಪ್ಪಯ್ಯೆಗಳೆ ನೀವು ವಪ್ಪೀದ ತಾಯೀಗ
ತಪ್ಪಾದೆ ಅಂದಣವ ತರುವೇನೊ ೧೯೩

ಅಂದ ತಕ್ಷಣದಲ್ಲಿ ಬಂದಾರು ಬೇಗನೆ
ತಂದಾರು ತಾವ್ಹೋಗಿ ಚರರೂ
ತಂದು ಯಟ್ಟಾರು ಚರರೂ ಕುಂದಾಣ ಕೆತ್ತನೆ
ಅಂದಾಣ ಪಲ್ಲಕ್ಕಿ ತೀವ್ರದಲೆ ೧೯೪

ಬಂದು ಯೇರಮ್ಮಾನ ಕುಂದಾಣ ಕೆತ್ತಿದ
ಅಂದಾಣ ಪಲ್ಲಕ್ಕಿ ಯೇರಿಸಿದಾ
ಅಂದಳವಾ ಯೇರಿದಾ ತಂದ ಊರಮ್ಮಗೆ
ಕುಂದಾದಾರತಿಯೆ ಮಾಡಿದರೂ ೧೯೫

# ಮಂಗಳಾರ್ತಿ

ಜಯೆಜಯೆನೆ ವಾಣಿಗೇ
ಜಯೆ ಜಯಾ ಜಯೆ ಪಾರ್ವತಿ
ಜಯೆ ಜಯೆ ನೇರ ದೇವತ
ಜಯೆ ಜಯೆತೇಂದು ನುತಿಪೇವು
ಜಯೆ ಕನ್ನೆಗಾರತಿ ಜಯೆ ಜಯೆ ಗೀರ್ವಾಣಿಗೇ ೧೯೬

ನೇರ ಪೂತದೊಳಗೀನನು ಯಿರುತಿರೆ
ಜರಿದು ಮಾತಾ ಅನುತಿರೇ ಭರದಿಂದ ಶಾಪಾವು
ಬರಲಾಗಿ ನಿನಗಾಗಿ ಧರೆಯೊಳು ತಾ ಬಂದೂ ಜನಿಶಿದ ತಾಯೇಗೆ
ಜಯೆ ಜಯಾ ಗೀರ್ವಾಣಿಗೇ ೧೯೭

ಉರುಗಾನು ನಿನ್ನಯೆ ಪರಿ ಮೆಲ್ಲದಿರುವಾನು
ಪರಿಪರಿಯಂದ...ರದಾನು ನೆರೆಯಗಿ ರಾಜಾಗೇ
ವರದು ಹೇಳಿದ ನಮ್ಮ ಬರವಾನೇಪನುತಲಿಟ್ಟು
ಕೆರೆಗ್ಹೋಗೆ ತಂದಾಗ ಜಯೆಜಯೆ ಗೀರ್ವಾಣೀಗೇ ೧೯೮

ಜಕ್ಕಾನಯಟ್ಟ ಮುಳ್ಳುಟ್ಟದಾತ್ಕಾಪು ಬೆಳಿದೆ ನೀನು
ಜಕ್ಕಾನೇ ಅಕ್ಕ ತಂದಮ್ಮನೆ ದಕ್ಕೂವ ತೆರನಿಲ್ಲಾ
ಮುಕ್ಕಂಣ ನುರಲೀನ ಚಿಕ್ಕ ತಂನರಾಗೀ
ಜಯೆ ಜಯಾ ಗೀರ್ವಾಣೀ ೧೯೯

ನೋಡೀಕುಯೆಡಬಲಾ ಪರಸೆ ಕೂಡೀತು
ಬಡಜನ ಸ್ತೋತ್ರ ಮಾಡೀತು
ರೂಢಿಯೊಳಗೆ ನಿನಗೀಲಾವೆನುತಾಲಿ
ಜೋಡೀಸೀ ಕರಗಾಳಾ ನೋಡೂವ ತಾಯೇಗೆ
ಜಯೆ ಜಯೆ ಗೀರ್ವಾಣಿ ೨೦೦

# ಕನ್ನೀರಾಂಬೆಯ ಕಥೆ: ಪದ

ಮಂಗಳಾರತಿ ಮಾಡಿ
ಅಂಗನೆಯೆರಲ್ಲಾರು ಶೃಂಗಾರದಿಂದ ಹೊಗಳಿದರೂ
ಜಂಗಮರನು ಕರದು ಹಿಂಗದರ್ಚಿಸಿದಾಳು
ನೆಂಗ ಸೆಲಹೆಂದು ಬಿನ್ನವಿಸೇ ೨೦೧

ಅಂದಾಣ ಪಲ್ಲಕ್ಕಿ ಮುಂದಕ್ಕೆ ಹೊರಡಾಲು
ಅಂದೂಗೆ ಘಂಟೆ ಧಣರೆಂದು

ನಿಂದ ದೇಶದ ಜನರು ವಂದೀಸಿ ಕರಗಳಾ ಮುಗಿದು ಘೋ
ಳೆಂದು ಚಪ್ಪಳೆಯೆನಿಡಲೂ ೧೦೨

ನಾನಾವಾದ್ಯಗಳಿಂದ ನಾನಾ ಜಾತಿಗಳಿಂದ
ನಾನಾ ದೇಶದ ಪರಿಶೆಯಂದಾ
ನಾನಾ ಬಿರಿದಾವಳಿಯೆ ಹೊಗಳಿಸುತ ಬರುವಾಗ
ಭಾನವಿಗೆ ಕೆಂದೂಳಿ ವಡರೇ ೧೦೩

ಬರುಬರುತ ಅಂದಳವ ತಾನು ತರುಬಿಸಿ
ವೂರಾತಡಿಗೆ ತರುಹಿ ಕೂಡಿ
ಹಿರಿಯೆರಿಗೆ ಶರಣಾರ್ತಿ ಗುರುಗಳಿಗೆ ಶರಣಾರ್ತಿ
ಕಿರಿಯೆರಿಗೆ ಶರಣಾರ್ತಿಯೆಂದೂ ೧೦೪

ಕರಗಾಳು ಮುಗಿದಾಳು ವರಧೃಢದಿಂರಾತ
ನೆನೆಶಿಕೊಂಡಳು ಮನದೊಳಗೇ
ಹಿರಿಯೆರಾಶೀರ್ವಾದ ಪರಿಪೂರ್ಣವಿರುಬೇಕು
ಗುರು ನಿಮ್ಮ ದ್ರಿಷ್ಟಿಯರಬೇಕು ೧೦೫

ಯೆಲ್ಲರಿಗೆ ವಂದೀಶಿ ಅಲ್ಲಿಂದ ತಿರುವಿದಳೂ
ನಲ್ಲೆ ತನ್ನ(ವ)ರಾನು ಆಗ
ಪಲ್ಲಕ್ಕಿಯೆನು ತಾನು ಮೆಲ್ಲಾನೆ ನಡಸೂತ
ಸೊಲ್ಲು ಸೊಲ್ಲಿಗೆ ಸ್ವಾಮಿಯೆನುತಾ ೧೦೬

ಯಿಂತು ಉತ್ಸಾಹದಿ ಕಾತೆಯು ಬರುವಾಗ
ನಿಂತು ನೋಡೀತು ಜಗದ ಜನವೂ
ಭ್ರಾಂತಿಯಂದಲಿ ಜನವು ಬಾಗಿ ನೊಡಲು ದೇವೀ
ನಿಮಂತಲ್ಲಿ ಮಾಯೆವಾಗುತಲೀ ೧೦೭

ವಂಮ್ಮೆ ಕಾಣುಸುತಲೀ ವಂಮ್ಮೆ ಮಾಯದಿಂದಾಲೆ
ವಂಮೆ ನೋಡಲು ಬಟ್ಟಾ ಬಯೆಲೂ
ವಂಮ್ಮೆ ನೋಡಲು ಬಯೆಲು ಬಯೆಲಗಿ ಬರುತಿಹಳೂ
ವರ್ಮವಾ ತಿಳಿವುದಸಾಧ್ಯ ೧೦೮

ತಾಯೆಂದು ಕರಿದಾರೆವೋಯೆಂದು ನುಡಿವಾಳು
ಮಾಯೆವಾಗುವಳು ನಿಮಿಷದಲೀ
ಸಹಾನದಿಂದಲೀ ಆಯಾಸವಾಯ್ತೆಂದು
ಬಾಯಬಿಡುತ - ರುವುವರೂ ೧೦೯

ಅಂಮ್ಮ ಬಹಳೂಲವಾಯ್ತು ನಿಂಮ್ಮ...ಲಾರಿವಿ
ಮರ್ಮಾವು ತಿಳಿಯಾದೆ ತಾಯ
ಯನ್ನೊಮ್ಮೆ ನೋಡಿರಿಯೆನುತ ಅವರೂಳಗೆಯೆನ್ನು
ಅನುವಯ್ತು ಯೆಂಬುವರೂ ೧೧೦

ಯಂತ ಪವಾಡಗಳಾ ಮುಂತೆ ಅನೇಕಗಳಾ
ಕಾಂತೆ ಮಾಡುತ ಬಂದಳಾಗ
ಕಂತು ಹರನಾರಾಣಿ ಸಂತೋಷದಿಂದಾಲಿ
ಅಂತಕ ನಂತಹ ಕೆರೆಗಾಗಿ ೧೧೧

ಅಂದಾಳ ದೊಳು ತಾನು ನಿಂದು ನೋಡಿದಳಾಗ

ಅಂದಾದ ಕೆರೆಯೆ ಚಂದದಲೇ
ತಂದೆ ಮುದ್ದಂಣಾನೆ ವಂದೀಪೆ ನಿಮಗಿನ್ನು
ಮುಂದೆ ನಿಮಗ್ಯಾರು ಶೆರಿಯಲ್ಲಾ ೧೧೨

ಯೇನು ಹೇಳಲಿ ಅಂಣಾ ನೇನು ಮಾಡಿದಕೀರ್ತಿ
ದಾನವರು ಸುರರು ಪೊಗಳುವರು
ಮಾನವಾಧೀಶನೆ ಯನ್ನು ನಿಮಗೆಣೆಯಿಲ್ಲಾವೆನುತಾಲಿ
ಗ್ನಾನದಿಂ ಕೊಂಡಾಡಿ ೧೧೩

ನಾನೆಷ್ಟರವನಮ್ಮಾ ಮಾನವನರನಾನು
ನಿನ್ನದಯೆದಿಂದ ಕಟ್ಟಿದರೂ
ನಿನ್ನ ಕರುಣಿಲ್ಲಾದ ಮನ್ನ ತಾಕೆರೆಯೆನೂ
ಮಾನವರು ಕಟ್ಟೂವದುಂಟೆ ೧೧೪

ನಿಲ್ಲದೆ ತಿರುಗೂತ ಯೆಲ್ಲಾವನೋಡೂತ
ಉಲ್ಲಾಸದಿಂದಾದಲಿ ದೇವಾ
ಮಲ್ಲಾನೀವಿದ್ದಲಲ್ಲಿಗೆ ಬಂದಾಳು
ಸಲ್ಲಲಿತಾಂಗೀ ಬ್ಯಾಗದಲೀ ೧೧೫

ಅಂದಳವಾನಿಳಿದಾಳು ನಿಂದು ನೋಡಿದಳಾಗ
ಚಂದದಿಂದಿರುವ ಮಾಳಿಗೆಯಾ
ಅಂದಾದೀ ಅಂಣಾನು ಬಂತು ತಾ ತೋರದಾ
ಸುಂದರಿಯೆಂಯದು ನಿನ್ನ ಮನಯ್ಯು ೧೧೬

ನಿಂನ್ನ ಮನೆ ಯೆನಲಗ ಕನ್ನೆಹರುಷಿತಳಾಗಿ
ತಾನೆ ತಾನಾಗಿ ಒಳಹುಗಲೂ

ವುನ್ನತಾ ನವರತ್ನಾ ಹೊನ್ನಮಯೆವಾರಿರಲೂ
ಕನ್ನೆಮಾರಮ್ಮ ಹೊಗಲಾಗಿ ೧೧೭

ದಿಕ್ಕು ದಿಕ್ಕಿಲಿ ರತ್ನ ಲೆಖ್ಖವಿಲ್ಲದೆ ಹೇಳಲಾಗಾ
ಘಕ್ಕಾನೆ ನೋಡಿದಳಾಗಾ
ಚಿಕ್ಕ ತನ್ನವಾನು ಚಕ್ಕನೆ ತಾ ಬಂದೂ
ಲೆಖ್ಖವಿಲ್ಲದೆ ಹೇಳಲಾಗಾ  ೧೧೮

ಕಲ್ಲು ಮಣ್ಣುಗಳಿಂದ ಯೆಲ್ಲಾವ ಕಟ್ಟಿದರೂ
ಮಲ್ಲಾವ ಮಾಡಿದ್ದರಿಂದು
ಕಲ್ಲಿಲ್ಲ ಕನಕಾವು ಯೆಲ್ಲೆಲ್ಲಿ  ನೋಡಾಲು
ಅಲ್ಲಲ್ಲಿ ನವರತ್ನ ಮಯೆವೂ ೧೧೯

ತಾಯಿ ತಾ ಬರಲಾಗಿ ಮಾಯಾದರ ಮನೆಯಾಗಿ
ಮಾಯಾವು ತಿಳಿಯೆದೆ ತಾಯೀ
ನೆಯಾಸದಿಂದಾಲೆ ಭಾಯಾದಿ ಅಂಣಾನ
ಬಾಯೆಂದು ಕರದಾಳು ದೇವೀ ೧೨೦

ಅಣ್ಣಾನೇ ನಾನಿಲ್ಲಿ ಚನ್ನಾಗಿ ಯರುವೇನು
ಯಿನ್ನುನರಮಾನವರಿಹರೂ

ಸನ್ನುತದಿ ಬಾಗಿಲಿಗೆಯಿನ್ನು ಯಿಡಿರೂತಿಯೆನೂ
ಭಿನ್ನವಿಲ್ಲದೆ ಕಟ್ಟೆನೆಂಣಾ  ೧೨೧

ಕಟ್ಟೆರೆಂದಾಕ್ಷಣಕ್ಕೆ ಥಟ್ಟಾನೆ ಕಟ್ಟೆದರೂ
ಘಟ್ಯಾದ ಕಲ್ಲೂಗಳಿಡಿದೂ
ನಿಷ್ಠೆಯಂದಲಿ ಅರಗಿನ ಮುದ್ರೆ ತಾನಾಗಾ
ಧಿಟ್ಟ ಮುದ್ದಂಣ ಮಾಡಿದನೂ ೧೨೨

ಆಗಷ್ಟ ದಿಕ್ಕುಗಳ ಬ್ಯಾಗಾನೆ ನೋಡಾಲು
ಕೂಗಿದವು ಭೂತಗಳು ಯಿರದೇ
ಬ್ಯಾಗನ್ನ ಕೊಡು ನೀನು ಯೀಗಲುಂಬುವೆವೆಂದು
ಸಾಗಿ ಮಾತುಗಳ ನುಡಿದಾವು ೧೨೩

ಅನ್ನ ಶಾಂತಿಗಳನ್ನು ಚೆನ್ನಾಗಿ ಮಾಡೆಂದು
ಅಣ್ಣ ಮುದ್ದಗೆ ಹೇಳಲಾಗಾ
ಇನ್ನು ಜಂಗಮರನ್ನು ಮುನ್ನಬ್ರಾಹ್ಮಣರನ್ನು
ಇನ್ನುಳಿದ ಸಕಲ ಜಾತಿಗಳಾ ೧೨೪

ಉನನ್ತದಿ ಪಾತಿಗಳ ಚೆನ್ನಾಗಿ ಬರಿಯೆಂದು
ಭಿನ್ನವಿಲ್ಲದೆ ಮುದ್ದ ಹೇಳೇ
ಅನ್ಯೋನ್ಯದಿಂ ಬರಲೆಮುನ್ನಲೆ ದಂಗೂರಾ
ಸನ್ನೂತದಿಂದ ಹೊಡಶಿದರೂ ೧೧೫

ದಿಕ್ಕು ದಿಕ್ಕಿನ ಜನರೂ.. ಭಯೆವಿಲ್ಲದೆ ಬರಲು
ಫಕ್ಕನೇ ಅಡಿಗೆ...ಡರಿದರೂ
ಕಕ್ಕುಲಾತಿಯು ಬ್ಯಡ ತಕ್ಕ ಪದಾರ್ಥಗಳಾ
ಯಕ್ಕಿರಿಯೆಂಧು ಕೂಗಿಸಿದಾ ೧೧೬

ಮನದಿಚ್ಛೆಯೆನು ತೊಟ್ಟು ಅನುವಾಗಿ ದಾಸಾಹ
ವನುಮಾಡಿ ದಿನಯೇಳರಲ್ಲಿ
ಮನಮುಟ್ಟಿ ಸರ್ವಜಾತಿಯೆ ಜನರು ಹೊಗಳಿದರೂ
ಜನಕ ನಿನಗ್ಯಾರು ಸರಿಯಲ್ಲಾ ೧೧೭

ಹಾಡಿ ಹರದಿಸರಾಗ ಪಾಡಿಕೊಂಡಾಡಿದರೂ
ರೂಢಿಯೆ ಜಗದ ಜನರೆಲ್ಲಾ
ಮಾಡಿದಾರಾಧನೆ ಬೇಡಿದ್ದು ಕೊಟ್ಟೆ ನೀ
ಮಾಡೀದ ಕೆರೆ ಸ್ಥಿರವಿರಲೀ ೧೧೮

ಕೆರೆಯೆ ಶಾಂತಿಯೆ ಮಾಡೀ ವರಹಣ್ಣು ಕಾಯ್ಗಳಾ
ವರಕನ್ನೆರಾನ ಸನ್ನಿಧಿಗೆ
ವರವು ಬೇಡಿದರಾಗಾ ನರರೂಗಳೆಲ್ಲಾರು
ಪರಿಪರಿಯಂದ ಪೂಜಿಸಲೂ ೧೧೯

ಅಷ್ಟವಿಧ ಪೂಜೆಗಳಾ ನಿಷ್ಟೆಯಂದಲಿ ಮಾಡಿ
ಘಟ್ಯಾಗಿ ಬೇಡಿ ವರಗಳನೂ
ಧಿಟ್ಟೆ ನೀ ನಮ್ಮಾಗೆ ಯಷ್ಟಾರ್ಥ ಕುಡುಯೆಂದು
ಸೃಷ್ಟೀಯೆ ಜನರೂ ಜಯೆವೆನಲೂ ೧೨೦

## ಕನ್ನೀರಾಂಬೆಯ ಕಥೆ: ಮಂಗಳಾರ್ತಿ

ಮಂಗಳಾರತಿಗಳಾ ಬೆಳಗೀ ಯೇಗಾ ಸ್ರುಂಗಾರದಿಂದಾ
ಅಂಗಾನೆರೆಲ್ಲಾರು ಹಿಂಗಾದೆ ಸರ್ವಾರು
ಮಂಗಳ ಮಯೆವಾದ ಕನ್ನೆರಿಗೇ ೧೨೧

ಸುಲೋಕದರ ಶೀಗೇ ನರಲೊಕ ಭಕ್ತಾರು
ವರಗಾಳ ಕೇಳಾಲು ಕರದೋರುವ ತಾಯೀಗೇ ೧೨೨

ಏನು ಬೇಡಿದಡೀವ ಮಾನವತೆಗೇ ನೀವು
ಜಿನಪತಿ ಮುದ್ದಣ್ಣ ತಂದಂಥ ತಾಯೀಗೇ ೧೩೩

## ಕನ್ನೀರಾಂಬೆಯ ಕಥೆ: ವಡ್ಡರ ಹರಕೆ ಮಗಳಾರತಿ

ಜಯೆಮಂಗಳಂ ಕನ್ನಿರಾಂಬತಾಯೆ
ಜಯಾ ಮಹಾಭಕ್ತರಿಗೇ ವರವಿತ್ತೆಯೋ
ಯೋಳೂ ಮಡಿಯಾ ಸರ್ವಯೊಳು
ತುಪ್ಪಾರತಿಹನತಾಳಿ ಮುದ್ದಂಣಗೆ ತೋರಲಾಗೀ
ಯೋಳ್ನೂರು ವಡ್ಡಿತಿಯೆ ತರಶಿ ಮುದ್ದಂಣನೂ
ಯೋಳು ವದಗದಿಯೋಳು ವರುಷಕಟ್ಟ ೧೩೪

ಯೋಳು ನಬರಬಲಿಯೆನ್ನು ಮ್ಯಾಲೆ ಹೈದಾಹುತಿಯಾ
ಯೋಳು ಬಿಂದಿಗಿಯೆ ಹಣ ಅವರಿಗಿಟ್ಟು
ಯೋಳ್ನೂರು ವರಹವನೂ ತಂದವರಿಗಿದಿರಿಟ್ಟು
ಯೇಳು ವರುಷದ ಕನ್ನಿಕಾಂಬನಿಟ್ಟು ಜಯೆ ೧೩೫

ಯೋಳು ಸಾವಿರ ಜನಕೆ ದಾಸೋಹವನುಯಿಟ್ಟು
ಯೋಳೇಳು ವರಹ ಧರ್ಮವನ್ನು ಕೊಟ್ಟು
ಯೋಳು ಕೆರೆಗಳ ಕೆಳಗೆ ತನ್ನ ಕೆರೆಯೆನು ಕಟ್ಟಿ
ಲೋಲಾಕ್ಷಿ ವೀರಮ್ಮ ನೀನೇ ಧಿಟ್ಟಿ ೧೩೬

ಯೇಳು ಗ್ರಾಮಗಳೆಲ್ಲಲ್ಲಾ ಬಾಳಲಿದರಿಂದಲೀ
ಯೇಳು ವರುಷಕೆವಂಮೆ ಕೂಳೋಗಲೀ
ಯೊಳ್ಕೊರು ವರುಷಕ್ಕೆ ತಂತ್ರವು ಆಗಲೀ
ಯೋಳು ಭಾಗದಿವಂದು ಸರ್ವದಿರಲೀ ಜಯೆ ೧೩೭

ಮುದ್ದರಾಜನೆ ನೀನು ಯಿದ್ದಲ್ಲಿ ಢಣ ಢಣಾ
ಶಬ್ದವಾಗುತ್ತೈತೆ ಯವಾಗಲೂ
ಮುದ್ದರಾಜರು ಅಲ್ಲಾ ಢಣಾಕ್ಕುಮ್ಧರಾಜರು
ಬುದ್ದವವೆಂದು ವಡ್ಡರು ಪಾಡಿಪೊಗಳೆ ಜೇಯೆ ೧೩೮

ನರಬಲಿಗಳೇಳೂ ದೇವರಿಗೆಲ್ಲ ಅಧಿಕವಾಗಿ
ಪರಬ್ರಹ್ಮಕನ್ನೀರಮ್ಮ ಹಿರಿಯೆಳೆಂದೂ
ಪರಹಿತಕ್ಕಾಗಿ ಸವರೂ ಕೂಡಿ ಸತ್ಯದಲೀ
ನೆರೆಧರ್ಮದಿಂದ ಕಟ್ಟಿಸಿದ ಕೆರೆಯೆಂಮ್ಮ ೧೩೯

ಧರ್ಮದಿಂ ಕೆರೆಯಿರಲೂ ಧರ್ಮದಿಂಗ್ರಾಮವು ಯಿರಲೀ
ಧರ್ಮದಿಂ ಮಳೆ ಬೆಳೆಯು ಸಂತೃಪ್ತಿಯಿರಲೀ

ಧರ್ಮದಿಂದ ವುಲುಸಿರಲಿ ಧರ್ಮದಿಂ ಜನಯಿರಲೀ
ಧರ್ಮಕರ್ಮಗಳನೇ ನೋಡೆ ತಾಯೇ ೧೪೦

ಯೋಳ್ನೂರ ವರುಷ ಪ್ರಮಾಣ ತುಂಬಿದ ಮ್ಯಾಲೆ
ಯೊಳಿರಲೀ ವಂದು ಭಾಗವು ವುಳಿಯೆಲೀ
ಮಳೆಯು ಯಿದ್ದಂತಿರಲಿ ಬೆಳೆರಯು ಯದರಂತಿರಲೀ
ಫಲಗಳೂ ಸರ್ವವೂ ವುಲುಶಿರಲಂಮ್ಮಾ ೧೪೧

ವದಗಿ ಹೇಳಿತು ಸರ್ವಮುದದೀ ಮುದ್ದಂಣಾಗೆ
ಪದುಳದಿಂ ನಮಗೆ ಯೆಲ್ಲವ ಹೇಳಲೂ
ಯಿದರಂತೆ ನಾವೀಗ ವದಗಿದಾ ಪ್ರಜೆಯೊಳಗೇ
ಬೆದರದೆ ಸರ್ವರಿಗು ತಿಳಿಸಿದೆವಂಮ್ಮ ೧೪೨

ನೀನು ಯೀ ರಾಜ್ಯಕ್ಕೆ ಘನಪ್ರಸಿದ್ಧಿಯು ಯೆನಿಸಿ
ನೀನು ಕೊಟ್ಟುದವು ತಪ್ಪದಂತೆ ಯಿನ್ನು ಯೀ ಕೆರೆಯು
ಯರುವ ಪರಿಯೆಂತ್ರಕ್ಕು ಕನ್ನೇರಂ ಮನೆಂದದಧಿಕ
ವೆನ್ನೂವುದಂಮ್ಮ ೧೪೩

ಯೋಳ್ನೂರು ವಡ್ಡಿಕೆಯು ತಾಳಮೇಳದಿ ಕೂಡಿ
ಹೇಳಿದೆವು ಯೀ ಮಂಗಳಾರತಿಯೆನ್ನೂ
ತಿಳಿದೂ ಧಣಾಯ್ಕನ ಕೆರಯೆಂದು ಹೆಸರಿಟ್ಟು
ವಲಿದು ಬಂದರುಹೆ ಹರಿಕೆಯೆ ಕೊಟ್ಟೆವಮ್ಮ ಜಯೆಮಂಗಳಂರಾಂಬತಾಯೆ ೧೪೪

ಸಂತೆ ಅಂಗಡಿಯೆಂತೆ ಅಂತೆ ತಿಳಿದು ನೋಡಾಲು
ಮುಂಚೆ ಮಾಡಿರಿ ಧರ್ಮಗಳನೂ ೧೪೫
ಶ್ರೀಅಂತು ಸಂಧಿ ೧ ಪದನು ೧೪೫ಕ್ಕಂ ಮಂಗಳ ಮಹಾ

***